ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 34 ಆಗಸ್ಟ್ 21, 2011 ರೂ. 5/- ಪುಟ 16





ರೇಷ್ಮೆ ಉದ್ದಿಮೆ ಉಳಿಯುವುದೆಂತು?

8



ಜಾಗತಿಕ ಅಲ್ಲೋಲ ಕಲ್ಲೋಲ : ಅಮೆರಿಕಾ ಸಾಲ ಯೋಗ್ಯತೆ ರೇಟಿಂಗ್ ಕಡಿತ



ಬಿಜೆಪಿಯ ಕರ್ನಾಟಕ ಪರ್ವ



7

ಸದಾನಂದರ ಸಂಪುಟ ಅದೇ ಜಾಡು - ಅದೇ ಪಾಡು



ಬಾಗೇಪಲ್ಲಿ : ನಿವೇಶನ - ಮನೆಗಾಗಿ ಬೃಹತ್ ಆಂದೋಲನ

ಕೊಡಿ ಮೊದಲು–ಸ್ವಂತ ಸೂರಿಲ್ಲದವರಿಗೆ ಮನೆ, ನೆಲೆ ಇಲ್ಲದವರಿಗೆ ನಿವೇಶನ

ಬಾಗೇಪಲ್ಲಿ ಬೃಹತ್ ರ್‍ಯಾಲಿಯಲ್ಲಿ ಆಗ್ರಹ

ಜುಲೈ 30 ರಂದು ಬಾಗೇಪಲ್ಲಿ ಮನೆ ಮತ್ತು ನಿವೇಶನ ರಹಿತರ ಬೃಹತ್ ಸಮಾವೇಶವನ್ನು ಸಿ.ಪಿ.ಐ.ಎಂ, ಪ್ರಾಂತ ರೈತ ಸಂಘ, ಡಿವೈಎಫ್ಐ, ಜೆ.ಎಂ.ಎಸ್., ಕೂಲಿಕಾರರ ಸಂಘಗಳ ತಾಲ್ಲೂಕು ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿತ್ತು. ಸುಮಾರು 7 ತಿಂಗಳ ಹಿಂದೆಯೇ ಮನೆ ಮತ್ತು ನಿವೇಶನ ರಹಿತರ ಹೋರಾಟ ನಡೆಸಲಾಗಿದೆ. ಪ್ರತಿ ಗ್ರಾಮ ಪಂಚಾಯ್ತಿಗಳಿಂದ ಅರ್ಜಿಗಳನ್ನು ಹಾಕಿಸಲಾಗಿತ್ತು. ಹೀಗೆ 24 ಗ್ರಾಮ ಪಂಚಾಯ್ತಿಗಳಿಂದ 24,000 ಅರ್ಜಿಗಳನ್ನು ಹಾಕಿಸಲಾಗಿತ್ತು.

ಕಂಪನಿಗಳ ಕೊಟ್ಟಿಗೆ, ಭೂಗಳ್ಳರಿಗೆ ಜಮೀನಿರುವಾಗ ಜನ ಸಾಮಾನ್ಯನಿಗೆ ನಿವೇಶನ ಏಕಿಲ್ಲ?

ಇದರ ಅಂಗವಾಗಿಯೇ ಈ ಬೃಹತ್ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಸಮಾವೇಶಕ್ಕೆ ಮುನ್ನ 4 ಹೋಬಳಿಗಳಿಂದ ಪ್ರತ್ಯೇಕವಾಗಿ 4 ತಂಡಗಳಾಗಿ ರ್‍ಯಾಲಿ ನಡೆದವು. ಪ್ರತಿಯೊಂದು ರ್‍ಯಾಲಿಯಲ್ಲೂ ಸಾವಿರಾರು ಜನರು ಕೆಂಪು ಬಾವುಟಗಳನ್ನು ಹಿಡಿದು ಬಿ.ಜೆ.ಪಿ ಸರ್ಕಾರದ ವಿರುದ್ಧ ಧಿಕ್ಕಾರಗಳನ್ನು ಕೂಗುತ್ತಾ ಉತ್ಸಾಹದಿಂದ ಪಾಲ್ಗೊಂಡು ಐತಿಹಾಸಿಕ ರ್‍ಯಾಲಿಯನ್ನು ಯಶಸ್ವಿಗೊಳಿಸಿದರು. ಸುಮಾರು 10,000 ಜನರು 4 ರ್‍ಯಾಲಿಗಳಿಂದ ಸೇರಿ ಪಾಲ್ಗೊಂಡಿದ್ದು, ವಿಶೇಷವಾಗಿತ್ತು. ರೈತರಿಗೆ ಬಿತ್ತನೆ ಸಮಯ ಹಾಗೂ ಹಿಂದಿನ ದಿನ ಮಳೆಯು ಬಿದ್ದಿದ್ದರಿಂದ ಇನ್ನಷ್ಟು ಜನರು ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ.

ಸಿ.ಪಿ.ಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಜನಶಕ್ತಿ ವಾರ ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್ ನವರು ಸಮಾವೇಶವನ್ನು ಉದ್ಘಾಟಿಸಿ ಸಿ.ಪಿ.ಎಂ ಹಾಗೂ ಸಾಮೂಹಿಕ ಸಂಘಟನೆಗಳು ಪಾಲ್ಗೊಂಡಿರುವ ಮನೆ ಮತ್ತು ನಿವೇಶನ ಪರವಾಗಿ ಕೈಗೆತ್ತಿಕೊಂಡಿರುವ ಹೋರಾಟವನ್ನು ಶ್ಲಾಘಿಸಿದರು. ಇಂದು ಭಾರತದಲ್ಲಿ ಬಡತನ ತಾಂಡವವಾಡುತ್ತಿದೆ. ಬಡವರಿಗೆತಿನ್ನಲ್ಲು ಅನ್ನವಿಲ್ಲ, ಬಟ್ಟೆ ಇಲ್ಲ, ದುಡಿಯುವುದಕ್ಕೆ ಕೆಲಸವಿಲ್ಲ. ಮಳೆಗೆ, ಚಳಿಗೆ ರಕ್ಷಣೆಯಿಲ್ಲದೆ ರಾಜಧಾನಿ ಸೇರಿದಂತೆ ಉತ್ತರ ಭಾರತದಲ್ಲಿ 500ಕ್ಕೂ ಹೆಚ್ಚು ಜನ ಬಡವರು ತಮ್ಮ ಪ್ರಾಣವನ್ನು ಕಳೆದುಕೊಂಡರು, ಹೀಗೆ ಅನೇಕ ಕಷ್ಟಗಳನ್ನು ಪಡುತ್ತಿದ್ದರೆ ಈ ಸರ್ಕಾರಗಳು ಕೇವಲ ಶ್ರೀಮಂತ ವರ್ಗಗಳಿಗೆ ಮಾತ್ರ ಸಬ್ಸಿಡಿ ನೀಡುವುದು ಬಂಡವಾಳಗಾರರಿಗೆ, ಬಹು ರಾಷ್ಟ್ರೀಯ ಕಂಪನಿಗಳಿಗೆ ಮಾತ್ರ ಬಡ ರೈತರ ಜಮೀನು ಕಿತ್ತು ಕೊಂಡು ಲಕ್ಷ ಲಕ್ಷ ಹೇಕ್ಟರ್‌ಗಳನ್ನು ಹಂಚುತ್ತಿದೆ. ಬಡವರಿಗೆ ನಿವೇಶನ ಕೊಡಲಿಕ್ಕೆ ಮಾತ್ರ ಇವರ ಕೈಯಲ್ಲಿ ಅಗುತ್ತಿಲ್ಲ. ಈ ಬಿ.ಜೆ.ಪಿ ಸರ್ಕಾರ ಭೂ ಮಾಫಿಯಾ, ಗಣಿ ಮಾಫಿಯಾ, ಭ್ರಷ್ಟಾಚಾರ ಹಗರಣಗಳಲ್ಲಿಯೇ ಕಾಲ ಹರಣ ಮಾಡುತ್ತಿದೆ. ಅದೇ ಸಿ.ಪಿ.ಐ.ಎಂ ಪಕ್ಷವು ಬಾಗೇಪಲ್ಲಿ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳಿಂದಲೂ ಮನೆ ಮತ್ತು ನಿವೇಶನಕ್ಕಾಗಿ ಅರ್ಜಿಗಳನ್ನು ಹಾಕಿಸಿದೆ. ಎಲ್ಲ ಸೇರಿ ಸುಮಾರು 28,000 ಅರ್ಜಿಗಳನ್ನು ಹಾಕಿಸಿದೆ. ಹೀಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಇದೇ ಕೆಲಸ ನಡೆಸಿದೆ. ಇದನ್ನು ಸರ್ಕಾರವು ಲಘುವಾಗಿ ಪರಿಗಣಿಸಿದರೆ ಮುಂದೆ ಉಗ್ರವಾದ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ನಿವೇಶನ ನೀಡದ ಶಾಸಕರು, ಅಧಿಕಾರಿಗಳಿಗೆ ಎಚ್ಚರಿಕೆ:

ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷೆ ಸಾವಿತ್ರಮ್ಮ ನವರು ಮಾತನಾಡುತ್ತಾ ಸಿ.ಪಿ.ಐ.ಎಂ ಪಕ್ಷದಿಂದ 2ನೇ ಭಾರಿಗೆ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ ಯವರು 2006ರಲ್ಲಿ ಬಾಗೇಪಲ್ಲಿ ಪಟ್ಟಣದಲ್ಲಿ 350ಕ್ಕೂ ಹೆಚ್ಚು ಬಡವರಿಗೆ ಉಚಿತವಾಗಿ ನಿವೇಶನಗಳನ್ನು ಹಂಚಿದ್ದನ್ನು ಬಿಟ್ಟರೆ ನಂತರ ಬಂದ ಶಾಸಕರು ಇದುವರೆವಿಗೂ ಯಾವುದೇ ಅಭಿವೃದ್ಧಿ ಮಾಡಿಲ್ಲ, ನಿವೇಶನ ಪ್ರಶ್ನೆಯನ್ನು ಆಡಳಿತ ವರ್ಗ ನಿರ್ಲಕ್ಷಿಸುತ್ತಿದೆ. ಇದರಿಂದ ಬಡವರಿಗೆ ಅನ್ಯಾಯವಾಗುತ್ತಿದೆ. ಇನ್ನಾದರೂ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು ಇಲ್ಲದಿದ್ದರೆ ನಮ್ಮ ಈ ಹೋರಾಟ ಮುಂದಿನ ದಿನಗಳಲ್ಲಿ ತೀವ್ರವಾಗಿರುತ್ತದೆ ಎಂಬ ಎಚ್ಚರಿಕೆಯನ್ನು ನೀಡಿದರು.





ಇದು ಲಾಟರಿ ಸರ್ಕಾರ!

ನಂತರ ಮಾತಾನಾಡಿದ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷೆ ಶೋಭಾರಾಣಿಯವರು ಮನೆ ಮತ್ತು ನಿವೇಶನ ಬಗ್ಗೆ ಇಷ್ಟೊಂದು ಬೃಹತ್ ಸಮಾವೇಶ ಕೈಗೊಂಡು ಹೋರಾಟ ನಡೆಸುತ್ತಿದ್ದರೂ ಬಿ.ಜೆ.ಪಿ ಸರ್ಕಾರಕ್ಕೆ ಇದರ ಬಗ್ಗೆ ಗಮನವಿಲ್ಲ ಯಾವುದೇ ಕಾರ್ಯಕ್ರಮ ಕೈಗೊಂಡರೂ ಲಾಟ್ರಿ ಮುಖಾಂತರ ಅಯ್ಕೆ ಮಾಡುವುದು ಈ ಸರ್ಕಾರಕ್ಕೆ ಅಭ್ಯಾಸವಾಗಿ ಬಿಟ್ಟಿದೆ. ಹಾಗಾಗಿ ಬಿ.ಜೆ.ಪಿ ಸರ್ಕಾರ ಲಾಟರಿ ಸರ್ಕಾರವಾಗಿದೆ ಎಂದು ಟೀಕಿಸಿದರು.

ಮಾತು ತಪ್ಪಿದ ಸರ್ಕಾರ

ನಂತರ ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಪಿ.ಮುನಿವೆಂಕಟಪ್ಪ ಮಾತನಾಡಿ ಕಳೆದ 7 ತಿಂಗಳಿಂದ ಮನೆ ಮತ್ತು ನಿವೇಶನಗಳಿಗೆ ಪ್ರತಿ ಹಳ್ಳಿಗಳಲ್ಲಿಯೂ ಅರ್ಜಿ ಹಾಕಿಸುವ ಕಾರ್ಯಕ್ರಮ ನಡೆದಿದ್ದು ಇದರ ಸಲುವಾಗಿ ಸಿ.ಪಿ.ಎಂ ಪಕ್ಷ ಹಾಗೂ ಎಲ್ಲಾ ಸಾಮೂಹಿಕ ಸಂಘಟನೆಗಳಿಂದ ತಾಲ್ಲೂಕು ಕಛೇರಿಗೆ ಮುತ್ತಿಗೆ ಹಾಕಿ ಬೀಗವನ್ನು ಸಹ ಜಡಿಯಲಾಗಿತ್ತು, ಇದರ ಬಗ್ಗೆ 1 ತಿಂಗಳಲ್ಲಿಯೇ ಕ್ರಮ ತೆಗೆದುಕೊಳ್ಳುತ್ತೇವೆಂದು ತಾಲ್ಲೂಕು ಆಡಳಿತ ವರ್ಗ ಭರವಸೆ ನೀಡಿದರು. ಆದರೆ ಇದುವರೆವಿಗೂ ಅದು ಕಾರ್ಯಗತವಾಗಲಿಲ್ಲ. ಹಾಗಾಗಿಯೇ ಈ ಸಮಾವೇಶ ಹಮ್ಮಿಕೊಂಡಿರುವುದು ಮುಂದಿನ ಹೋರಾಟದ ಬಗ್ಗೆ ಚರ್ಚಿಸಲಾಗುವುದು. ಆದರೆ ಕಾಂಗ್ರೆಸ್‌ನ ಶಾಸಕರು ನಿವೇಶನ ಕೊಡಿಸಲು ಮುಂದಾಗದೇ ಅಪಪ್ರಚಾರದಲ್ಲಿ ತೊಡಗಿದ್ದಾರೆ ಎಂದು ಖಂಡಿಸಿದರು.

ಈ ಅನ್ಯಾಯ, ನಿರ್ಲಕ್ಷ್ಯ ಸಹಿಸಲಾಗದು, ಹೋರಾಟವನ್ನು ತೀವ್ರಗೊಳ್ಳುವುದು:

ರಾಜ್ಯದ ಸಿ.ಪಿ.ಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರು, ಜಿಲ್ಲಾ ಕಾರ್ಯದರ್ಶಿ ಹಾಗೂ ಬಾಗೇಪಲ್ಲಿ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಯವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ ಇಷ್ಟೊಂದು ಭಾರಿ ಸಂಖ್ಯೆಯಲ್ಲಿ ಪ್ರತಿ ಹಳ್ಳಿಗಳಿಂದ ಆಗಮಿಸಿರುವ ಎಲ್ಲರಿಗೂ ಸಿ.ಪಿ.ಐ(ಎಂ) ಪಕ್ಷದ ವತಿಯಿಂದ ಧನ್ಯವಾದಗಳು ತಿಳಿಸುತ್ತಾ ಸ್ವಾತಂತ್ರ್ಯ ಬಂದು 65 ವರ್ಷಗಳಾದರೂ ಇದು ವರೆವಿಗೂ ಮನೆ ಇಲ್ಲ, ನಿವೇಶನ ಇಲ್ಲ ಎಂದು ಕೋಟ್ಯಾಂತರ ಜನರು ಬದುಕುತ್ತಿರುವುದು ನಾಚಿಕೆ ಗೇಡಿನ ಸಂಗತಿ. ಇನ್ನೂ ನಾವು ಸರ್ವೆ ನಡೆಸಿದಾಗ ಈಡೀ ಕರ್ನಾಟಕಧ್ಯಾಂತ 27 ಲಕ್ಷ ಕುಟುಂಬಗಳಿಗೆ ಮನೆ ಮತ್ತು ನಿವೇಶನಗಳು ಇಲ್ಲದಿರುವುದು ಕಂಡು ಬಂದಿದೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ 25 ಸಾವಿರ ಹಾಗೂ ಬಾಗೇಪಲ್ಲಿ ಪಟ್ಟಣದಲ್ಲಿ 4600 ಒಟ್ಟು 30000 ವಸತಿ ನಿವೇಶನ ಸೌಲಭ್ಯ ಇಲ್ಲ. ಆಶ್ರಯ ಯೋಜನೆಯಲ್ಲಿ ಹಳ್ಳಿಗಳಿಗೆ 30 ಸಾವಿರ ರೂ., ಪಟ್ಟಣಕ್ಕೆ 50 ಸಾವಿರ ರೂ ಕೊಡ್ತಿರಾ? ಇದರಲ್ಲಿ ಮನೆ ಕಟ್ಟಳಿಕೆ ಸಾಧ್ಯವಾ? ನಿವೇ ಹೇಳುತ್ತೀರಾ 100ಜನರಲ್ಲಿ 77 ಮಂದಿಗೆ 1 ದಿನದ ಸರಸಾರಿ ಆದಾಯ 20 ರೂಪಾಯಿ ಅಂತಾ. ಅದರಲ್ಲಿ ಸಂಸಾರ ನಡೆಸಲು ಸಾಧ್ಯವಾ? ಇದನ್ನು ಅಭಿವೃದ್ಧಿಯಾಗಿದೆ ಅನ್ನಲಾಗುವುದೇ? ಎಂದು ಪ್ರಶ್ನಿಸಿದರು. ಸರ್ಕಾರ ಕೊಡುವ ಆಶ್ರಯ ಮನೆ ಅಳತೆ 11x22 ಇದರಲ್ಲಿ ಕಡ್ಡಾಯವಾಗಿ ಶೌಚಾಲಯ ಹೊಂದಿರಬೇಕು ಎನ್ನುತ್ತೀರಾ? 1 ಮನೆಯಲ್ಲಿ 6–7 ಜನರು ಇರುವಾಗ ಅವರಿಗೆ ಆ ಮನೆಯಲ್ಲಿ ವಾಸಿಸಲು ಸಾಧ್ಯವೆ? ಹಾಗಾಗಿ ನಮ್ಮ ಪ್ರಮುಖ ಬೇಡಿಕೆ ಆಶ್ರಯ ಮನೆಯ ನಿವೇಶನ ಅಳತೆ 30x40 ಹಾಗೆಯೇ ಹಳ್ಳಿಗಳಲ್ಲಿ ಆಶ್ರಯ ಮನೆಗೆ 1.50 ಲಕ್ಷ ರೂ. ಪಟ್ಟಣಕ್ಕೆ 2 ಲಕ್ಷ ರೂ. ಕೊಡಬೇಕು ಅಗಲೇ ಒಂದು ಚಿಕ್ಕ ಮನೆ ಕಟ್ಟಲು ಸಾಧ್ಯ. ಬರೀ ಬೇಡಿಕೆ ಇಟ್ಟು ಸುಮ್ಮನಿರುವುದಿಲ್ಲ. ಇದರ ಬಗ್ಗೆ ತೀವ್ರ ಹೋರಾಟವನ್ನು ಮಾಡುತ್ತೇವೆ. ಇದಕ್ಕಿಂತ ಮುಂಚೆ ನಾವು ಹೋರಾಟವನ್ನು ನಡಿಸಿದ್ದೇವೆ. ಇದರ ಫಲವಾಗಿ ಜಿಲ್ಲೆಗೆ 2 ಕೋಟಿ ಬಂದಿದೆ. ಅದನ್ನು ಜಿಲ್ಲಾಧಿಕಾರಿಗಳು ಕಾರ್ಯಗತ ಮಾಡಬೇಕೆಂದು ಆಗ್ರಹಿಸಿ ಇದೇ ಆಗಸ್ಟ್ ತಿಂಗಳ 25, 26 ಮತ್ತು 27 ಈ ಮೂರು ದಿವಸ ಜಿಲ್ಲಾಧಿಕಾರಿ ಕಛೇರಿ ಮುಂದೆ ಭಾರಿ ಪ್ರತಿಭಟನಾ ಹೋರಾಟವನ್ನು ಹಮ್ಮಿಕೊಂಡಿದ್ದೇವೆ. ಇದಕ್ಕೆ ನೀವು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ಸಮಾವೇಶದಲ್ಲಿ ಡಿ.ವೈ.ಎಫ್.ಐ ಅಧ್ಯಕ್ಷ ಚನ್ನರಾಯಪ್ಪ, ಕೃಷಿ ಕೂಲಿ ಕಾರ್ಮಿಕ ಸಂಘದ ಅಧ್ಯಕ್ಷ ಬಿಳ್ಳೂರು ನಾಗರಾಜ, ಕೆ.ಪಿ.ಆರ್.ಎಸ್‌ನ ಅಧ್ಯಕ್ಷರು ಚಂದ್ರಶೇಖರರೆಡ್ಡಿ ಜೆ.ಎಂ.ಎಸ್ ಫಾತಿಮಾ; ಸಿ.ಐ.ಟಿ.ಯುನ ವೆಂಕಟೇಶ್‌ಬಾಬು, ತಾಲ್ಲೂಕು ಪಂಚಾಯ್ತಿ ಉಪಾಧ್ಯಕರಾದ ಗೌರಮ್ಮ, ಸದಸ್ಯರಾದ ಶಂಕರರೆಡ್ಡಿ, ಗೋಪಾಲಕೃಷ್ಣ, ನಾರಾಯಣನಾಯಕ, ನಾರಾಯಣಪ್ಪ, ಸುಜಾತಮ್ಮ, ಸಿ.ಪಿ.ಐ(ಎಂ) ತಾಲ್ಲೂಕು ಸಮಿತಿ ಸದಸ್ಯರಾದ ಅಕ್ರಂ, ಪಿ.ಓಬಲರಾಜು, ರಘುನಾಥರೆಡ್ಡಿ, ಬಿ.ಸಿ.ಶ್ರೀನಿವಾಸ್, ಅಶ್ವತ್ಥಪ್ಪ, ಇಂದುಕುರೋಳ್ಳಪಲ್ಲಿ ಕೃಷ್ಣಪ್ಪ, ಪಾತಪಾಳ್ಯ ಮುಸ್ತಾಫ್ ಮುಖಂಡರಾದ ರಮೇಶ್, ರಾಮಲಿಂಗಪ್ಪ, ಗೋವರ್ಧನಚಾರಿ, ಜಿ.ಕೃಷ್ಣಪ್ಪ ಮುಂತಾದವರು ಭಾಗವಹಿಸಿದ್ದರು.

ವರದಿ : ಮುಸ್ತಾಫ್, ಬಾಗೇಪಲ್ಲಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಿರಸ್ಪಾದಕೀಯ

ಸದಾನಂದ ಸಂಪುಟ ಅದೇ ಜಾಡು-ಅದೇ ಪಾಡು

ಮುಖ್ಯಮಂತ್ರಿ ಸದಾನಂದಗೌಡರು ಪ್ರಮಾಣ ವಚನ ಸ್ವೀಕರಿಸಿದ ನಂತರ ಈ ವಾರದಲ್ಲಿನ ವಿದ್ಯಮಾನಗಳು ದುರಾಡಳಿತ ಮುಂದುವರಿಕೆಯ ಸ್ಪಷ್ಟ ಸೂಚನೆಯಾಗಿದೆ. ಭ್ರಷ್ಟರು ಕಳಂಕಿತರನ್ನೇ ಕಟ್ಟಿಕೊಂಡು ಬಿಜೆಪಿ ಇನ್ನೆಂಥಹ ಆಡಳಿತವನ್ನು ಕೊಟ್ಟೀತು ಎಂಬ ಪ್ರಶ್ನೆಯನ್ನು ಹುಟ್ಟು ಹಾಕಿದೆ. ನಾಲ್ಕು ದಿನ ವಿಧಾನಸೌಧದಲ್ಲಿಯೇ ಕುಳಿತು ಆಡಳಿತ ಮಾಡುವ ಅವರ ಆರಂಭ ಶೂರತ್ವದ ಮಾತಾಗಲೀ, 15 ದಿನಗಳೊಳಗೆ ಕಡತ ಇತ್ಯರ್ಥ ಮಾಡಬೇಕೆಂಬ ತಾಕೀತಾಗಲೀ ಇನ್ನೂ ಕಾರ್ಯಗತವಾಗ ಬೇಕಷ್ಟೇ. ಭಿನ್ನಮತ, ಹಗರಣಗಳನ್ನು, ಮುಚ್ಚಿಹಾಕುವ ಹುನ್ನಾರಗಳ ನಡುವೆ ಅಂತಹವರೆಲ್ಲರನ್ನೂ ಒಟ್ಟಿಗೆ ಒಯ್ಯುವೆ ಎಂಬ ಅವರ ಮಾತು ಖಂಡಿತ ಕರ್ನಾಟಕದ ಪಾಲಿಗೆ ದುರಂತ ತರಲಿದೆ.

ಪ್ರಥಮವಾಗಿ ನೂತನ ಸಂಪುಟ ರಚನೆಗಾಗಿ ನಡೆಸಿದ ಕಸರತ್ತು ಮತ್ತು ಹಿಂದಿದ್ದವರನ್ನೇ ಸಚಿವರನ್ನಾಗಿಸಿದ ಕ್ರಮ, ಎರಡನೇ ವಿಸ್ತರಣೆಯಲ್ಲಿಯೂ ತಯಾತುರಿಯಲ್ಲಿ ಆರು ಜನರನ್ನು ಆಯ್ಕೆ ಮಾಡಿದ ರೀತಿಯು ಭಿನ್ನಮತಕ್ಕೆ ತೇಪೆ ಹಚ್ಚುವ ಯತ್ನ. ಬದಲಾಗಿ ಈಗ ಪಕ್ಷದಲ್ಲಿ ಮೂಲ ಮತ್ತು ವಲಸಿಗರು ಎಂಬ ಜಗಳವನ್ನು ಹೆಚ್ಚಿಸಿದೆ. ಈ ಸರ್ಕಾರ ಹಿಂದಿನ ಯಡಿಯೂರಪ್ಪನವರ ಸರ್ಕಾರಕ್ಕಿಂತ ಯಾವುದೇ ರೀತಿಯಲ್ಲಿ ಭಿನ್ನವೇನಲ್ಲ. ಬದಲಾಗಿ ಅದೇ ಜಾಡಿನಲ್ಲಿ ಸಾಗುವುದನ್ನು ಖಾತ್ರಿಪಡಿಸಿದೆ. ಮೊದಲ ಹಂತದಲ್ಲಿ 21 ಮಂತ್ರಿಗಳನ್ನಾಗಿಸುವಲ್ಲಿ ಅವರ ಕಾರ್ಯ ಮೌಲ್ಯಮಾಪನ ಅರ್ಹತೆಗಿಂತ, ಕೇವಲ ಗುಂಪು ಬಣಗಳ ಒತ್ತಡವೇ ಆಧಾರವಾಗಿದೆ. ಅದರಲ್ಲೂ ಅಕ್ರಮ ಗಣಿಗಾರಿಕೆಯ ಕುರಿತು ಲೋಕಾಯುಕ್ತರ ವರದಿಯಲ್ಲಿ ಆರೋಪಿಯಾಗಿರುವ ವಿ.ಸೋಮಣ್ಣರವರನ್ನು ಸಚಿವರನ್ನಾಗಿಸಿದ ಕ್ರಮ ಈ ಸರ್ಕಾರ ಎಸಗಿದ ಅಕ್ರಮ, ಹಗರಣಗಳನ್ನು ಸಮರ್ಥಿಸಿಕೊಂಡ ನಿರ್ಲಜ್ಜ ನಡೆಯಾಗಿದೆ. ಈ ಮೂಲಕ ರೆಡ್ಡಿಗಳಂತಹ ಇನ್ನಷ್ಟು ಕಳಂಕಿತರನ್ನು ರಕ್ಷಿಸುವ ಸಂದೇಶವನ್ನು, ಅಂತಹವರಿಗೆ ಧೈರ್ಯವನ್ನು ಕೊಟ್ಟಿದೆ. ಎರಡನೇ ಕಂತಿನಲ್ಲಿ ಬಹುತೇಕ 'ರೆಸಾರ್ಟ್ ವಾಸಿ' ಸಂದರ್ಭಸಾಧಕರೇ ಇದ್ದಾರೆ. ಇದಕ್ಕೆಲ್ಲಾ ಹೈಕಮಾಂಡ್ ಮತ್ತು ಆರ್‌ಎಸ್‌ಎಸ್ ಸಕ್ರಿಯ ಬೆಂಬಲವಿದೆ. ಇದು ಆತಂಕಕಾರಿಯಾಗಿದೆ.

ಯಡಿಯೂರಪ್ಪನವರ ಸರ್ಕಾರದ ನಕಲಿನಂತಿರುವ ಈ ಸರ್ಕಾರ ಸಚಿವರನ್ನಾಗಿಸುವಲ್ಲಿಯೂ ಸಾಮಾಜಿಕ ಪ್ರಾದೇಶಿಕ ಸಮತೋಲವನ್ನು ತಿರಸ್ಕರಿಸಿದೆ. ಪ್ರಧಾನವಾಗಿ ಮೇಲ್ಜಾತಿಗಳಾದ ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣರಂತಹ ಪ್ರಾಬಲ್ಯರಿಗೆ ಹೆಚ್ಚಿನ ಸ್ಥಾನಗಳನ್ನು ನೀಡಿರುವುದು ಮುಂದಿನ ಚುನಾವಣೆಯಲ್ಲಿ ಜಾತಿಗಳ ಲಾಭ ಹೊಡೆದು, ಅಲ್ಪಸಂಖ್ಯಾತರಿಗೆ ಎರಡು ಹಂತಗಳ ಮಂತ್ರಿಮಂಡಲದಲ್ಲಿಯೂ ಸ್ಥಾನವಿಲ್ಲವಾಗಿದೆ. ಮಹಿಳೆ, ದಲಿತರಿಗೂ ಅಷ್ಟಕ್ಕಷ್ಟೇ ಎನ್ನುವ ಟೀಕೆಗಳು ವ್ಯಾಪಕವಾಗಿವೆ.

ಸಚಿವ ಸಂಪುಟ ರಚನೆಯಾಗುವಾಗ ಯಡಿಯೂರಪ್ಪ ಹಾಗೂ ಅನಂತಕುಮಾರ್‌ರ ಬಣಗಳ ನಡುವೆ ನಡೆದ ಘರ್ಷಣೆ, ತಿಕ್ಕಾಟಗಳು ತಾರಕಕ್ಕೇರಿದ್ದವು. ಉಪಮುಖ್ಯಮಂತ್ರಿ ಸ್ಥಾನ, ಲಾಭದಾಯಕ ಖಾತೆಗಳು ತಮಗೇ ಬೇಕೆಂದು ಅನಂತ ಬಣ ಪಟ್ಟು ಹಿಡಿದಿತ್ತು. ಸಂಪುಟ ವಿಸ್ತರಿಸದಿದ್ದರೆ ಸಾಮೂಹಿಕ ರಾಜೀನಾಮೆ ನೀಡುವ ಬೆದರಿಕೆ ಒಡ್ಡಿಯಾಯಿತು. ಆದರೆ ಉಪ ಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸಲಾರವೆಂದೇನೋ ಹೈಕಮಾಂಡ್ ಹೇಳಿಕೊಂಡಿರುವುದು ಯಡಿಯೂರಪ್ಪನವರ ಆಸೆಯಂತೆಯೇ. ಆದರೆ ಲಾಭದಾಯಕ ಖಾತೆಗಳನ್ನು ಅದು ಪಡೆಯ ಬಯಸಿರುವುದು ದುಡ್ಡು ದೋಚುವ ಹಂಚಿಕೆಯೇ ಆಗಿದೆ.

ಸದಾ ಅಧಿಕಾರ, ಹಗರಣ ಮುಚ್ಚಿ ಹಾಕಿಕೊಳ್ಳುವ ಚಿಂತೆಯಲ್ಲೇ ಇರುವ ಇಂತಹ ಸರ್ಕಾರದಿಂದಾಗಿ ಜನರ ಪಾಲಿಗೆ ಆಡಳಿತವೇ ಇಲ್ಲವಾಗಿದೆ. ಆಡಳಿತ ಪಕ್ಷದ ಯಾವೊಬ್ಬ ಶಾಸಕ, ನಾಯಕರು ಜನರ ಕಷ್ಟಗಳಿಗೆ ಸ್ಪಂದಿಸುತ್ತಿಲ್ಲ. 10 ಜನರ ಹತ್ಯೆಯಾದ ಚಿಂತಾಮಣಿ ಪ್ರದೇಶಕ್ಕೆ ಒಬ್ಬ ಸಚಿವನೂ ಭೇಟಿ ನೀಡಿಲ್ಲ.


ಪ್ರಮುಖವಾಗಿ, ಈ ಸರ್ಕಾರದ ಮುಂದೆ ತಕ್ಷಣದ ಪ್ರಶ್ನೆಯೆಂದರೆ ಲೋಕಾಯುಕ್ತ ವರದಿಯನ್ನು ಏನು ಮಾಡಲಿದೆಯೆಂಬುದಾಗಿದೆ. ಅದನ್ನು ಅಧ್ಯಯನ ಮಾಡಲು ಉನ್ನತ ಅಧಿಕಾರಿಗಳ ತಂಡಕ್ಕೆ ವಹಿಸಲಾಗುವುದು ಎಂಬ ಮುಖ್ಯಮಂತ್ರಿಗಳ ಹೇಳಿಕೆ ಅತ್ಯಂತ ವಂಚನೆಯಿಂದ ಕೂಡಿದೆ. ಈಗಾಗಲೇ ಸಾಕಷ್ಟು ಅಧ್ಯಯನ ನಡೆಸಿ, ಅಗತ್ಯವಿರುವ ಸಾಕ್ಷಿಗಳನ್ನು ಕಲೆ ಹಾಕಿ ವಿಶ್ಲೇಷಿಸಿ ಅಂತಿಮವಾಗಿ ಆರೋಪಗಳು ಹಾಗೂ ಆರೋಪಿಗಳನ್ನು ಲೋಕಾಯುಕ್ತ ವರದಿಯಲ್ಲಿ ಗುರುತಿಸಲಾಗಿದೆ.

ಸರ್ಕಾರ ಮುಂದಿರುವುದು ಎರಡೇ ಆಯ್ಕೆ. ಆ ವರದಿಯನ್ನು ಒಂದೋ ಒಪ್ಪಬೇಕು, ಇಲ್ಲವೇ ತಿರಸ್ಕರಿಸಬೇಕು. ಅದು ಬಿಟ್ಟು ಹೀಗೆ ಕಾಲಹರಣ ಮಾಡುವುದು ಮತ್ತಷ್ಟು ಅಕ್ಷಮ್ಯ ಅಪರಾಧ ಎಸಗಿದಂತೆ. ರಾಜ್ಯಪಾಲರು, ನ್ಯಾಯಾಲಯ ಕ್ರಿಯಾಶೀಲವಾಗುವ ಅವಕಾಶಗಳೂ ತೆರೆದಿವೆ ಎಂಬುದನ್ನು ನೆನಪಿಡಬೇಕು.

ಈಗಾಗಲೇ ಯಡಿಯೂರಪ್ಪನನ್ನು ಒಳಗೊಂಡು ಹಲವಾರು ಹಿಂದಿನ ಸಚಿವರುಗಳು ಸಂಬಂಧಿಗಳ ಮೇಲೆ ಮೊಕದ್ದಮೆ ವಿಚಾರಣೆಯಂತಹ ಕಾನೂನು ಪ್ರಕ್ರಿಯೆ ಆರಂಭಗೊಂಡಿದೆ. ಈಗಾಗಲೇ ಕಟ್ಟಾ ಸುಬ್ರಹ್ಮಣ್ಯನಾಯ್ಡು ಅವರ ಮಗ ಕೇಂದ್ರ ಕಾರಾಗೃಹ ಸೇರಿದ್ದಾರೆ. ಯಡಿಯೂರಪ್ಪನವರೂ ಸಹ ಈಗಿದ್ದು, ನಿರೀಕ್ಷಣಾ ಜಾಮೀನಿಗೆ ಯತ್ನಿಸುತ್ತಿದ್ದಾರೆ. ಇದು ಬಿಜೆಪಿ ಸರ್ಕಾರದ ಪಾತಕಗಳಿಗೆ ನಿದರ್ಶನ. ಮುಂದೆ ಇಡೀ ಸರ್ಕಾರವೇ ಜೈಲಿನಲ್ಲಿರಬೇಕಾದ ಸನ್ನಿವೇಶ ಉಂಟಾದರೆ ಆಶ್ಚರ್ಯವೇನಿಲ್ಲ.

ನ್ಯಾಯಾಲಯದ ನಿರ್ದೇಶನ ಜಾರಿಯಾಗುವ ಹೊತ್ತಿನಲ್ಲಿ

'ಮುಂದೆ ಯಂಗೆ', 'ಏನಾಗ್ತತೆ', ಯಾರಾದರೂ ಗೆಳೆಯರು ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲೇ ಎದುರಾದ ಈ ಅವರ ಬಾಯಲ್ಲಿ ಬರುವ ಪ್ರಶ್ನೆಯಿದು. ಗಣಿಯ ಅದಿರಿನ ಧೂಳೇ ಜೀವದುಸಿರು ಎನ್ನುವಷ್ಟರ ಮಟ್ಟಿಗೆ ಬದಲಾಗಿ ಹೋಗಿದ್ದ ಪರಿಸರದಲ್ಲಿ ಮೊದಲಿನಂತೆ ಲಾರಿಗಳ ಭರಾಟೆಯಿಲ್ಲ. ವ್ಯಾಗನ್ ಲೋಡ್‌ಗಳ ಸಪ್ಪಳವಿಲ್ಲ. ದುಡ್ಡಿನ ಅಂದಾದುಂಧಿ ಹರಿದಾಟವಿಲ್ಲ. ಅಲ್ಲೆಲ್ಲಾ ಒಂದು ರೀತಿಯ ಮೌನದ ಹೊದಿಕೆ! ಅದರೊಳಗೆ ದುಡಿದೇ ತಿನ್ನುವ ದುಡಿಮೆಗಾರರಿಗೆ ನಾಳೆಯದು ಮಾತ್ರವಲ್ಲ, ಇಂದಿನದ್ದೇ ಚಿಂತೆ! ಅಂದರೆ ಪೂರಾ ನಿರಾಶೆ, ನಿಟ್ಟುಸಿರು ಆವರಿಸಿ ಬಿಟ್ಟಿದೆಯೆಂದೇನಲ್ಲ. ಇದೇ ಸ್ಥಿತಿ ಹಾಗೆ ಮುಂದುವರಿದರೆ ಏನುಗತ್ತಿ?. ಹಾಗಾದರೆ ಪರ್ಯಾಯವೇನು? ಇಷ್ಟೆಲ್ಲಾ ಸ್ಟೀಲ್ ಫ್ಯಾಕ್ಟರಿ, ವ್ಯವಹಾರ-ವಹಿವಾಟು ಇರುವಾಗ ಗಣಿಗಾರಿಕೆಯು ಪೂರ್ಣ ಬಂದಾಗಲಿಕ್ಕಿಲ್ಲ ಎಂಬ ಆಶೆ. ಹಾಗೆ ಮಾತನಾಡುವವರು ಕೊನೆಗೆ ಆಡುವ ಒಂದು ಮಾತು 'ಈ ರೆಡ್ಡಿಗಳು ಏನ್ ತಂದಿಟ್ರಪ್ಪಾ', ಏನವರ ಉರುಣಿಗೆ' ಎಂಬುದನ್ನು ಮೆಲು ದನಿಯಲ್ಲಾದರೂ ಹೇಳುತ್ತಾರೆ.



ಕಡಿವಾಣ ಯತ್ನ

ಬಳ್ಳಾರಿ ಹಿಂದೆಲ್ಲಾ ವಿಶ್ವವಿಖ್ಯಾತಿಯಾದದ್ದು ಹಂಪಿಯಂತಹ ಐತಿಹಾಸಿಕ ಸ್ಮಾರಕಗಳಿಂದ, ಕುಖ್ಯಾತವಾದದ್ದು ಅಕ್ರಮ ಗಣಿಗಾರಿಕೆಯಿಂದ! ತಾವೇ ಬಳ್ಳಾರಿ ಜಿಲ್ಲೆಯ, ವಿಜಯನಗರ ಸಾಮ್ರಾಜ್ಯದ ಒಡೆಯರು ಎಂದೇ ಭಾವಿಸಿ ಮನಬಂದಂತೆ ಲೂಟಿ ಮಾಡಿದವರ ತೋಳ್ಬಲ, ಹಣ; ಏನೆಲ್ಲಾ ಅವಾಂತರಗಳನ್ನು, ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದುದನ್ನು ಕಂಡಿದ್ದೇವೆ, ನಾವೀಗ ಅನುಭವಿಸುತ್ತಿದ್ದೇವೆ. ಇಂತಹ ಅಕ್ರಮಗಳಿಗೆ ಕಡಿವಾಣ ಹಾಕಲೆಂದು ಸಾಮಾಜಿಕ ಕಾರ್ಯಕರ್ತ ಎಸ್.ಆರ್.ಹಿರೇಮಠ್‌ರವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಆ ಹಿನ್ನಲೆಯಲ್ಲಿ ಹೊರಟ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ, ರಫ್ತು, ಸಾಗಾಣಿಕೆಗೆ ಪೂರ್ಣ ನಿರ್ಬಂಧ ಹಾಕಿತ್ತು. ಮರು ದಿನವೇ ಈ ಆದೇಶವನ್ನೇ ಧಿಕ್ಕರಿಸಿ ಗಣಿ ಕಳ್ಳರು ವ್ಯಾಗನ್‌ಗಳಲ್ಲಿ ಸಾವಿರಾರು ಟನ್ ಅದಿರು ಸಾಗಿಸಲು ಯತ್ನಿಸಿದ್ದರು. ಅದನ್ನು ಜಿಲ್ಲಾಡಳಿತ ತಡೆಯಿತು ಕೂಡಾ. ಹೀಗೆ ಸುಪ್ರೀಂಕೋರ್ಟ್‌ನ ನಿರ್ದೇಶನವು ಬಿಗಿಯಾಗಿ ಜಾರಿಯಾಗಲೇಬೇಕಾಗಿ ಬಂದದ್ದರಿಂದ ಗಣಿಗಾರಿಕೆ ಚಟುವಟಿಕೆಗಳು ನಿಂತಾಗ ಸಹಜವಾಗಿಯೇ ಎಲ್ಲರಲ್ಲೂ ಆತಂಕವೇ!


ನ್ಯಾಯಾಲಯದ ಸ್ವಾಗತಾರ್ಹ ನಿಲುವು

ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಜಿಂದಾಲ್, ಎಂ.ಎಸ್.ಪಿ.ಎಲ್. ನಂತಹ ಉಕ್ಕು ತಯಾರಿಸುವ ಬೃಹತ್ ಕಾರ್ಖಾನೆಗಳು ಇವೆ. ಸ್ಪಂಜ್ ಐರನ್ ತಯಾರಿಸುವ ಹತ್ತಾರು ಸಣ್ಣ ಫ್ಯಾಕ್ಟರಿಗಳೂ ಇವೆ. ಇವುಗಳಿಗೆ ಪ್ರತಿದಿನಕ್ಕೆ ಏನಿಲ್ಲವೆಂದರೂ 55 ಸಾವಿರ ಟನ್ ಅದಿರು ಬೇಕು. ತಿಂಗಳಿಗೆ 16 ಲಕ್ಷ ಟನ್‌ಗಿಂತಲೂ ಅಧಿಕ ಅಗತ್ಯವಿದೆ. ಹೀಗಾಗಿ ಇದನ್ನು ಎಲ್ಲಿಂದ ಪೂರೈಸಿಕೊಳ್ಳಬೇಕು? ಗಂಭೀರವಾದ ಪ್ರಶ್ನೆ.

ಈ ಅಂಶವನ್ನೂ ಇತ್ತೀಚೆಗೆ ಪರಿಗಣಿಸಿದ ನ್ಯಾಯಾಲಯವೀಗ ಕೈಗಾರಿಕೆಗಳಿಗೆ ಅದಿರಿನ ಗಣಿಗಾರಿಕೆ ಮತ್ತು ಪೂರೈಕೆಯನ್ನು (ಭಾರತ ಸರ್ಕಾರದ ಸ್ವಾಮ್ಯದ ನ್ಯಾಷನಲ್ ಮಿನರಲ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್




ಬೆಲೆ ಏರಿಕೆ, ರೇಷನ್ ವಂಚಿಸುವ ನೀತಿಗಳ ವಿರುದ್ಧ

ಮಹಿಳೆಯರಿಂದ ಆಹಾರ ಗೋದಾಮು ಮುತ್ತಿಗೆ

ಕೆ.ಎಸ್.ಲಕ್ಷ್ಮಿ

ಅಂಕಿ ಸಂಖ್ಯೆಗಳ ಕಸರತ್ತಿನ ಮೂಲಕ ಬಡವರ ಸಂಖ್ಯೆ ಕಾಣೆಯಾಗಿಸಬಹುದು. ಬಡವರನ್ನು ಕಾಣೆಯಾಗಿಸಲು ಸಾಧ್ಯವೇ? ಸಾಧ್ಯವಿಲ್ಲ. ಆದರೆ ಕೇಂದ್ರ ರಾಜ್ಯ ಸರ್ಕಾರ ಅದಕ್ಕಾಗಿ ಪ್ರಯತ್ನಿಸುತ್ತಿವೆ. ಒಂದೆಡೆ ಹಸಿವು ಕ್ರೂರ ನೃತ್ಯ ಮಾಡುತ್ತಿದ್ದರೆ ಮತ್ತೊಂದೆಡೆ ರಾಷ್ಟ್ರದ ಗೋದಾಮುಗಳಲ್ಲಿ ಆಹಾರ ಕೊಳೆಯುತ್ತಾ ಬಿದ್ದಿದೆ. ಆಹಾರ ಧಾನ್ಯಗಳ ಬೆಲೆಗಳು ಏರುತ್ತಲೇ ನಡೆದಿವೆ. ಈ ಹಿನ್ನೆಲೆಯಲ್ಲಿ ಏರುತ್ತಿರುವ ಬೆಲೆಗಳ ನಿಯಂತ್ರಿಸಿ, ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕರಿಸಲು ಒತ್ತಾಯಿಸಿ, ಪಡಿತರದ ಬದಲು ನಗದನ್ನು ನೀಡುವ ನೀತಿ ವಿರೋಧಿಸಿ, ಹೊಸ ಸಮೀಕ್ಷೆಗಳನ್ನು ಧಿಕ್ಕರಿಸಿ, ಅಗಸ್ಟ್ 10 ರಾಷ್ಟ್ರವ್ಯಾಪ್ತಿಯಾಗಿ ಮಹಿಳೆಯರ ನೇತೃತ್ವದಲ್ಲಿ ಸಮರ ಧೀರ ಚಳುವಳಿಗಳು ನಡೆದಿದೆ. ಉತ್ತರ ಮತ್ತು ಈಶಾನ್ಯ ಭಾರತದ ಮಹಿಳೆಯರು ಪಾರ್ಲಿಮೆಂಟ್ ಮುತ್ತಿಗೆ ಹಾಕಿ ಹೋರಾಟ ನಡೆಸಿದರೆ ದಕ್ಷಿಣ ಭಾರತದ ರಾಜ್ಯಗಳು ರಾಜ್ಯ ಮಟ್ಟದ ಹೋರಾಟಗಳನ್ನು ಸಂಘಟಿಸಿವೆ.


ಮಂಡ್ಯದಲ್ಲಿ

ಅದರ ಭಾಗವಾಗಿ, ರಾಜ್ಯದಲ್ಲೂ ಜನವಾದಿ ಮಹಿಳಾಸಂಘಟನೆಯ ನೇತೃತ್ವದಲ್ಲಿ ತೀವ್ರತರ ಹೋರಾಟಗಳು ನಡೆದಿವೆ. ಬೀದರನಲ್ಲಿ 88 ಕ್ಕೂ ಹೆಚ್ಚೂ ಮಹಿಳೆಯರು ಆಹಾರ ಗೋದಾಮಿಗೆ ಮುತ್ತಿಗೆ ಹಾಕಿ ಸಚಿವರಿಗೂ ಪ್ರತಿಭಟನೆ ನಡೆಸಿದ್ದಾರೆ. ಜನವಾದಿ ಜಿಲ್ಲಾ ಸಮಿತಿಯ ನಿಯೋಗ ಆಹಾರದ ಗೋದಾಮಿನ ಬಳಿ ಹೊಗಿ ಪರಿಶೀಲಿಸಿದಾಗ ಕೊಳೆತು ನಾರುತ್ತಿರುವ ಸಾವಿರಾರು ಧವಸ ಧಾನ್ಯ ಚೀಲಗಳು ಮತ್ತು ರಾಸಾಯನಿಕ ಮಿಶ್ರಿತ ಅಕ್ಕಿ ಚೀಲಗಳು ಕಂಡು ಬಂದಿವೆ. ಅಕ್ಕಿ ಚೀಲಗಳಿಗೆ ರಾಸಯನಿಕಗಳನ್ನೂ ಬಳಸುವ ಕುರಿತು ತನಿಖೆಯಾಗಬೇಕಿದೆ. ಇದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿರುವ ಸಂಘಟನೆಯು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಗಳಿಗೆ ಒತ್ತಾಯಿಸಿವೆ. ಇತ್ತೀಚೆಗಷ್ಟೇ ಲೋಕಾಯುಕ್ತರಿಂದ ನೇಮಕಗೊಂಡ ಆರ್. ಬಾಲಸುಬ್ರಮಣ್ಯ ಕಮಿಟಿಯು ರಾಜ್ಯ ಪಡಿತರ ವ್ಯವಸ್ಥೆಯ ಅಕ್ರಮಗಳ ಕುರಿತು ವರದಿ ಬಿಡುಗಡೆ ಮಾಡಿತ್ತು. ಜಿಲ್ಲಾಡಳಿತಗಳ ಕುಂಭಕರ್ಣ ನಿದ್ದೆ ಅತ್ಯಂತ ಖಂಡನಾರ್ಹ. ಅದೇ ರೀತಿ ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ 300 ಕ್ಕೂ ಹೆಚ್ಚು ಮಹಿಳೆಯರು ಆಹಾರದ ಗೋದಾಮಿಗೆ ಮುತ್ತಿಗೆ ಹಾಕಿ ಪಡಿತರ ಭಿಕ್ಷೆಯಲ್ಲ ನಮ್ಮ ಹಕ್ಕೆಂದು ಒತ್ತಾಯಿಸಿ ತೀವ್ರ ಪ್ರತಿಭಟನೆ ವ್ಯಕ್ತ ಪಡಿಸಿ ಆಹಾರದ ಗೋದಾಮಿನಿಂದ ಸಕ್ಕರೆ ಚೀಲಗಳನ್ನು ಎಳೆದು ಬಡವರಿಗೆ ಕೃಷಿಕೂಲಿಕಾರರಿಗೆ ಹಂಚಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ರಾಯಚೂರಿನಲ್ಲಿ 250 ಕ್ಕೂ ಹೆಚ್ಚು ಮಹಿಳೆಯರು ಕೇಂದ್ರ ರೈಲ್ವೆ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದ್ದಾರೆ. ಮಂಗಳೂರು, ಬಿಜಾಪುರ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಲಾಗಿದೆ. ಚಿಕ್ಕಬಳ್ಳಾಪುರ, ದಾವಣಗೆರೆ, ಬಳ್ಳಾರಿ ಜಿಲ್ಲಾ ಸಮಿತಿಗಳಲ್ಲಿ ಸಂಘಟನೆಯ ನಿಯೋಗಗಳು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿ ತುರ್ತು ಕ್ರಮಗಳಿಗೆ ಒತ್ತಾಯಿಸಿದ್ದಾರೆ.



ಬೆಂಗಳೂರು




ಬೀದರ್‌ನಲ್ಲಿ
ಕೊಳೆತ ಆಹಾರ ಧಾನ್ಯ

ನ್ಯಾಯಾಲಯದ ನಿರ್ದೇಶನ.....

ಪುಟ 3 ರಿಂದ

(ಎನ್‌ಎಂಡಿಸಿ) ಮೂಲಕ ಮಾತ್ರ ನಡೆಸಲು ಅನುಮತಿ ನೀಡಿ ಆದೇಶಿಸಿದೆ. ಅದರಂತೆ ಎನ್.ಎಂ.ಡಿ.ಸಿ.ಯ ಎರಡು ಪ್ರದೇಶಗಳಲ್ಲಿ ಗಣಿಗಾರಿಕೆ –ಪೂರೈಕೆ ಆರಂಭಗೊಂಡಿದೆ. ಅದೇ ಹೊತ್ತಿನಲ್ಲಿ ಸುಪ್ರೀಂಕೋರ್ಟ್ ಕರ್ನಾಟಕ ರಾಜ್ಯ ಸರ್ಕಾರದ ಮೈಸೂರು ಮಿನರಲ್ಸ್ ಲಿ. ಗೆ ಅವಕಾಶ ನಿರಾಕರಿಸಿದೆ. ಯಾಕೆಂದರೆ ಹಲವು 'ಖಾಸಗಿ' ಗಣಿಗಳ್ಳರು ಅಕ್ರಮವೆಸಗುವಲ್ಲಿ ಎಂಎಂಎಲ್ ಭಾಗಿಯಾಗಿರುವುದನ್ನು ಲೋಕಾಯುಕ್ತರ ವರದಿಯಲ್ಲಿ ಗುರುತಿಸಿ, ದೋಷಿ ಸ್ಥಾನದಲ್ಲಿರಿಸಲಾಗಿದೆ.

ಸುಪ್ರೀಂಕೋರ್ಟ್ ತನ್ನ ಮಧ್ಯಂತರ ಆದೇಶದಲ್ಲಿ 'ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಮೂಲಕವೇ ಗಣಿಗಾರಿಕೆ ಆಗಬೇಕೆಂದೂ ಮತ್ತು ರಫ್ತನ್ನು ನಿರ್ಬಂಧಿಸುವ ಬಗ್ಗೆಯೂ ತಿಳಿಸಿರುವುದು ಮತ್ತು ಕ್ರಮವಹಿಸಿರುವುದು .ಅದಿರಿನ ಬೆಲೆಯ ಶೇ. 10 ರಷ್ಟನ್ನು ರಾಜಧನವನ್ನಾಗಿ ನಿಗದಿಪಡಿಸಬೇಕೆಂದೂ ಹೇಳಿರುವುದು ಸ್ವಾಗತಾರ್ಹ. ನಿಜ! ಇಂದು ಎನ್‌ಎಂಡಿಸಿ ಮೂಲಕ ಉತ್ಪಾದಿಸಲಾಗುತ್ತಿರುವ ಅದಿರಿನ ಪ್ರಮಾಣ ಜಿಲ್ಲೆಯ ಕೈಗಾರಿಕೆಗಳ ಅಗತ್ಯವೆಲ್ಲವನ್ನೂ ಪೂರೈಸುವಂತಿಲ್ಲ. ಆದ್ದರಿಂದ ಅದನ್ನು ವಿಸ್ತರಿಸಬೇಕಾಗುವುದು. ಸದ್ಯವಂತೂ ಚಿತ್ರದುರ್ಗ, ತುಮಕೂರು, ಗೋವಾದಿಂದ ಪಡೆಯಲಾಗುತ್ತಿದೆ.

ಗಂಟು ಕಟ್ಟಿಕೊಂಡವರು

ಈಗ ಉಂಟಾಗಿರುವ ಅದಿರಿನ ಕೊರತೆಯನ್ನೇ ನೆಪವಾಗಿರಿಸಿಕೊಂಡು ಕೈಗಾರಿಕೆಗಳು ಕಾರ್ಮಿಕರನ್ನು ಕೆಲಸದಿಂದ ಕಿತ್ತೊಗೆಯುತ್ತಿದ್ದಾರೆ. ಜಿಂದಾಲ್, ಎಂಎಸ್‌ಪಿಎಲ್ ಮತ್ತು ಸ್ಪಾಂಜ್ ಐರನ್ ಘಟಕಗಳ ಕಾರ್ಮಿಕರನ್ನು ಮನೆಗೆ ಕಳುಹಿಸಿವೆ. ಇದರ ಹೊಡೆತ ಬಿದ್ದದ್ದು ತಾತ್ಕಾಲಿಕ, ಗುತ್ತಿಗೆ ಆಧಾರಿತ ಕಾರ್ಮಿಕರ ಮೇಲೆ. 'ಲಾಭ ಬರುವಾಗ ಎಲ್ಲವನ್ನು ಬಾಚಿಕೊಂಡು ಗಂಟು ಕಟ್ಟಿಕೊಂಡವರು ಸ್ವಲ್ಪ ಕಷ್ಟ ಕಾಲವಿರುವಾಗ ಹಂಚಿಕೊಳ್ಳಬಾರದೇಕೆ?' ಎಂದು ಕಾರ್ಮಿಕರು ಪ್ರಶ್ನಿಸುತ್ತಾರೆ.

ಸುಪ್ರೀಂಕೋರ್ಟ್ ನಿರ್ಬಂಧ' ವಿಧಿಸಿದೆಯಾದರೂ ಗಣಿಗಾರಿಕೆಯನ್ನೇ ಪೂರ್ಣ ನಿಷೇಧಿಸಿಲ್ಲ. ಮುಖ್ಯವಾಗಿ ಜಿಲ್ಲೆಯ ಕೈಗಾರಿಕೆಗಳಿಗೆ ಅಗತ್ಯವಿರುವ ಅದಿರಿನ ಪ್ರಮಾಣವನ್ನು ಸರಿಯಾಗಿ ಮೌಲ್ಯಮಾಪನ ಮಾಡಿ ಒಂದು 'ಯೋಜನೆಯನ್ನು' ಮಂಡಿಸಬೇಕು, ಅದರ ಆಧಾರದಲ್ಲಿ ಗಣಿಗಾರಿಕೆ ಮತ್ತು ಪೂರೈಕೆಗೆ ಅವಕಾಶ ನೀಡಲಾಗುವುದು ಎಂದೂ ಹೇಳಿದೆ. ಇದನ್ನು ಮಾಡಬೇಕಾದದ್ದು ಸದಾನಂದಗೌಡರ ಸರ್ಕಾರ, ಆದರೆ ಅದಕ್ಕೆ ಜನರತ್ತ ನೋಡಲು ಪುರಸೊತ್ತೆಲ್ಲಿ? ಆಸ್ಥೆಯೆಲ್ಲಿ?

ಬಾರದ ಗಣಿ ನೀತಿ

ಈಗಲೂ ಉತ್ಪತ್ತಿ, ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳಿಗೆ ಅದಿರು ಪೂರೈಕೆ – ಗಣಿಗಾರಿಕೆಗೆ ಅವಕಾಶ ನೀಡಲಾಗಿದೆ. ಆದರೆ ಅವರು ಶೇ. 30 ರಷ್ಟು ಅದಿರನ್ನು ರಫ್ತು ಮಾಡಬಹುದು ಎಂಬ ರಾಜ್ಯ ಸರ್ಕಾರದ ಒಪ್ಪಂದ ಹಾನಿಕಾರಕ. ಖಾಸಗಿ ಗಣಿಗಾರಿಕೆಗೆ ಶಿಫಾರಸು ಮಾಡಿರುವ ಹುಡಾ ಸಮಿತಿಯೂ ಸಹ ಶೇ. 10 ರಷ್ಟು ಮಾತ್ರ ರಫ್ತು ಮಾಡಬೇಕೆಂದು ಹೇಳಿದೆ.

ಹೀಗಾಗಿ ಸರ್ಕಾರಿ ಸ್ವಾಮ್ಯದ ಕಂಪನಿಗಳೇ ಗಣಿಗಾರಿಕೆ ಮಾಡಬೇಕು, ತೀರಾ ಅಗತ್ಯವಿದ್ದಲ್ಲಿ ಮಾತ್ರ ಕೇಂದ್ರ ರಫ್ತು ಮಾಡಬಹುದು. ರಾಜಧನ, ರಫ್ತು, ಕಾರ್ಮಿಕ ಕಲ್ಯಾಣ ಇತ್ಯಾದಿಗಳಿಗೆ ಸಂಬಂಧಿಸಿ ದೇಶದ ಸಂಪನ್ಮೂಲ ಲೂಟಿ ತಡೆವ, ಸಂಸತ್ತು ಉಳಿಸುವ, ಬಳಸುವ ದಿಕ್ಕಿನಲ್ಲಿ ಹೊಸ ಗಣಿನೀತಿ ತರಲೇಬೇಕು. ಆದರೆ ಕೇಂದ್ರ ಸರ್ಕಾರವೂ ಇದಕ್ಕೆ ಸಿದ್ಧವಿಲ್ಲ. ಅದರ ಪ್ರತಿಕ್ರಿಯೆ ಬರೀ ವಿಳಂಬ, ಮೇಲಾಗಿ ಕಬ್ಬಿಣ, ಕಲ್ಲಿದ್ದಲಿನಂತಹ ಗಣಿಗಾರಿಕೆಗೆ ವಿದೇಶಿ ಬಂಡವಾಳ ಹೂಡಲು ಅನುಮತಿ ನೀಡಬೇಕೆಂಬ 'ಹುಡಾ' ಸಮಿತಿಯ ವರದಿಯನ್ನೇ ಜಾರಿಗೊಳಿಸಲು ಯತ್ನಿಸುತ್ತಿದೆ. ರಫ್ತಿಗೆ ಕಡಿವಾಣ ಹಾಕಲು ಸರ್ಕಾರ ಸಿದ್ಧವಿಲ್ಲ.

ಇಲ್ಲಿ ಇನ್ನೂ ನ್ಯಾಯಾಲಯದ ಮುಂದೆ ಉಳಿದಿರುವ ಗಂಭೀರ ಹಲವು ಪ್ರಶ್ನೆಗಳಿವೆ. ಮುಖ್ಯವಾಗಿ ಅಕ್ರಮವಾಗಿ ಕಾನೂನುಬಾಹಿರವಾಗಿ ಗಣಿಗಾರಿಕೆ ನಡೆಸಿರುವವರ ಮೇಲೆ ಕಠಿಣ ಕ್ರಮ ಜರುಗಿಸಬೇಕಿದೆ, ಶಿಕ್ಷಿಸಬೇಕಿದೆ. ಪರವಾನಗಿ ರದ್ದಾಗಬೇಕಿದೆ. ಇಷ್ಟು ಮಾತ್ರವೇ ಸಾಲದು ಅವರ ಇಡೀ ಅಕ್ರಮ ಆಸ್ತಿ, ಸಂಪತ್ತು ಮುಟ್ಟುಗೋಲು ಹಾಕಿಕೊಳ್ಳಬೇಕು.

ಇಂಗಿತವೇನು?

ಹೀಗೆ ಜನರು ಹೇಳುವಾಗ ಇದಕ್ಕೆ ಸಹಮತದ ದನಿಗೂಡಿಸುತ್ತಾರೆ. ಮತ್ತು ಆದಷ್ಟೂ ಬೇಗ ಈಗಿನ ಸ್ಥಿತಿ ಬದಲಾಗಬಹುದು ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ. ಕೊನೆಗೆ 'ಈ ರೆಡ್ಡಿಗಳು ಏನು ಮಾಡಿದ್ರಪ್ಪ' ಎನ್ನುತ್ತಲೇ ಪಾಠ ಕಲಿಸಬೇಕು ಎಂಬ ಇಂಗಿತ ವ್ಯಕ್ತಪಡಿಸುತ್ತಾರೆ.

ರೆಡ್ಡಿಗಳೋ, ಶ್ರೀರಾಮುಲೋ.. ತಾವೇ ಕಟ್ಟಿಕೊಂಡ ಭಾರಿ ಎತ್ತರದ ಕೋಟೆಯೊಳಗೆ, ಅಡಗಿರುವ ಅರಮನೆಯಲ್ಲಿ ಬುಲೆಟ್‌ಪ್ರೂಫ್ ಕಾರಿನಲ್ಲಿ ತುಂಬಾ 'ಸೇಫ್' ಎಂದುಕೊಂಡಿರಬಹುದು. ಆದರೆ ಭೂಮಿಯ ಪದರುಗಳ ಕೆಳಗೆ ಜ್ವಾಲಾಮುಖಿ ಕುದಿಯುತ್ತಿರುತ್ತದೆ. ಸ್ಫೋಟಗೊಳ್ಳಲು ಸಮಯಕ್ಕಾಗಿ ಕಾದಿರುತ್ತದೆ' ಎಂಬುದನ್ನು ತಳ್ಳಿಹಾಕಲಾದೀತೆ?

◎

ರಾಜೀನಾಮೆ ಕೊಡುವಾಗಲೂ ಯೆಡಿಯೂರಪ್ಪನವರಿಂದ ವಿಜಯ ಚಿಹ್ನೆಯ ಪ್ರದರ್ಶನ ಕಳೆದ 38 ತಿಂಗಳಲ್ಲಿ ತಾನು ಕಾಂಗ್ರೆಸಿಗಿಂತ ಭಿನ್ನವಾದ ಶಿಸ್ತಿನ ಪಕ್ಷ ಎಂಬ ಬಿಜೆಪಿಯ ಮಾತಿನ ಟೊಳ್ಳುತನ ಕರ್ನಾಟಕದಲ್ಲಿ ಸ್ಪಷ್ಟವಾಗಿ ಬಯಲಿಗೆ ಬಂದಿರುವುದರ ಸಂಕೇತ ಕೂಡ. ಎಪ್ಪತ್ತರ ಮತ್ತು ಎಂಭತ್ತರ ದಶಕದಲ್ಲಿ ಕಾಂಗ್ರೆಸಿನ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟದಲ್ಲಿ ಮೂಡಿ ಬಂದ ಕಾಂಗ್ರೆಸ್-ವಿರೋಧಿ ಅವಕಾಶವನ್ನು ತನ್ನದಾಗಿಸಿಕೊಂಡ ಬಿಜೆಪಿ ಹಾಗೂ ಅದರಂತಹ ಪಕ್ಷಗಳ ವಿರುದ್ಧ ನಿಜವಾದ ಹೋರಾಟದಲ್ಲಿ, ಅಂದರೆ ಕರ್ನಾಟಕದಲ್ಲಿ ಎಲ್‌ಪಿಜಿ ಧೋರಣೆಗಳ ವಿರುದ್ಧ ಹೋರಾಟದಲ್ಲಿ ನಿಜವಾದ ಕಾಂಗ್ರೆಸ್-ವಿರೋಧಿ ಶಕ್ತಿಗಳು ಮೂಡಿ ಬರಬೇಕಾಗಿದೆ, ಇದರಿಂದ ಮಾತ್ರವೇ ಕರ್ನಾಟಕದ ಜನತೆಗೆ ಅಗ್ರಸ್ಥಾನ ಮತ್ತು ಜನತೆಯ ಹಿತಾಸಕ್ತಿಯಿಂದ ಮಾತ್ರವೇ ರಾಜ್ಯದ ಆಡಳಿತ ನಡೆಯುವಂತೆ ಮಾಡಲು ಸಾಧ್ಯ ಎನ್ನುತ್ತಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು, ಬಿಜೆಪಿಯ ಕರ್ನಾಟಕ ಪರ್ವದ ಒಂದು ಅವಲೋಕನ ಮಾಡಿರುವ ಈ ಲೇಖನದಲ್ಲಿ.

ಬಿಜೆಪಿಯ ಕರ್ನಾಟಕ ಪರ್ವ

ವಿ.ಜೆ.ಕೆ. ನಾಯರ್

ಭಾರತೀಯ ಜನತಾ ಪಾರ್ಟಿ ಸ್ಥಾಪನೆಗೊಂಡ ನಂತರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಅದಕ್ಕೆ ಸುಮಾರು ಮೂರು ದಶಕಗಳು ಬೇಕಾದವು. ಅದಾದ ನಂತರ 38 ತಿಂಗಳಲ್ಲಿ ಬಿಜೆಪಿಯ ಮುಖ್ಯಮಂತ್ರಿ ಬಿ.ಎಸ್.ಯೆಡಿಯೂರಪ್ಪ ಅಧಿಕಾರದಿಂದ ಇಳಿಯಲೇ ಬೇಕಾಗಿ ಬಂತು; ಅವರ ಪಕ್ಷದ ಕೇಂದ್ರೀಯ ಮುಖಂಡರು ಭ್ರಷ್ಟಾಚಾರದ ಹಗರಣಗಳ ಕೆಸರಲ್ಲಿ ಕುತ್ತಿಗೆಯ ವರೆಗೆ ಮುಳುಗಿರುವ ಕಾಂಗ್ರೆಸ್ ಪಕ್ಷಕ್ಕೆ ಸವಾಲು ಹಾಕುವ ಪಾತ್ರ ವಹಿಸಬೇಕೆಂದಿದ್ದರು, ಅವರಿಂದ ನುಣುಚಿಕೊಳ್ಳುವ ಪ್ರಯತ್ನ ಸಫಲವಾಗಲಿಲ್ಲ.

ತಾನೊಂದು ಭಿನ್ನ ಪಕ್ಷ ಎಂಬ ಬಿಜೆಪಿಯ ನಿರೀಕ್ಷೆ ಈಡೇರಲಾರದು, ಏಕೆಂದರೆ, ತಾನು ಈ ದೇಶದ ಅತ್ಯಂತ ಹಳೆಯ ಪಕ್ಷಕ್ಕಿಂತ ಭಿನ್ನವೇನಲ್ಲ ಎಂಬುದನ್ನು ಅವರು ಮರೆಯುತ್ತಾರೆ. ಸೈದ್ಧಾಂತಿಕ ನೆಲೆಯ ವಯಸ್ಸೇ ಏಕೈಕ ಮಾನದಂಡವಾದರೆ, ಖಂಡಿತ ಅದು ತಾನೇ ಈ ದೇಶದ ಅತ್ಯಂತ ಹಳೆಯ ಪಕ್ಷ ಎಂದು ಹೇಳಿಕೊಳ್ಳಬಹುದು; ಉದಾರೀಕರಣ-ಖಾಸಗೀಕರಣ-ಜಾಗತೀಕರಣ(ಎಲ್‌ಪಿಜಿ) ನೀತಿಗಳಿಗೆ ಬದ್ಧತೆ ಮಾನದಂಡವಾಗುವುದಾದರೆ, ಅದು ತಾನೇ ಬಹಳ ಸಲ ಹೇಳಿಕೊಂಡಿರುವಂತೆ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಯನ್ನು ಕಾಂಗ್ರೆಸ್ ಪಕ್ಷ ತನ್ನಿಂದಲೇ ಕದಿಯಿತು ಎಂದೂ ಹೇಳಿಕೊಳ್ಳಬಹುದು. ಹೀಗೆ ಬಿಜೆಪಿ ತಾನು ಭಿನ್ನ ಎಂದು ಹೇಳಿಕೊಳ್ಳಬಹುದಾಗಿರುವುದು ಕಂದಾಚಾರಗಳಿಗೆ ತನ್ನ ಬದ್ಧತೆಯಲ್ಲಿ ಹಾಗೂ ಉದಾರೀಕರಣ ಮತ್ತು ಖಾಸಗೀಕರಣಕ್ಕೆ, ಅದರೊಂದಿಗೆ ತಂತಾನೇ ಬರುವ ಜಾಗತೀಕರಣಕ್ಕೆ, ಇನ್ನಷ್ಟು ಆಳವಾದ ಬದ್ಧತೆಯಲ್ಲಿ.

ಉದಾರೀಕರಣದೊಂದಿಗೆ ಬೆಸುಗೆ

ಕರ್ನಾಟಕದಲ್ಲಿ ಬಿಜೆಪಿಯ ಇತಿಹಾಸ ಉತ್ತರ ಭಾರತದಲ್ಲಿ ಅದರ ಇತಿಹಾಸಕ್ಕಿಂತ ಹಿಂದೆ ಬಿದ್ದಿತ್ತು. ಇಲ್ಲಿ 1983ರ ಚುನಾವಣೆಗಳಲ್ಲೇ ಅವರು ಸ್ವಲ್ಪ ಶಕ್ತಿ ಗಳಿಸಿಕೊಂಡಿದ್ದರೂ, ಕರ್ನಾಟಕದಲ್ಲಿ ಅವರ ಬೆಳವಣಿಗೆ ಉದಾರೀಕರಣದ ಧೋರಣೆಯೊಂದಿಗೆ ಹೊಸೆದುಕೊಂಡಿದೆ. ಕರ್ನಾಟಕದಲ್ಲಿ ಉದಾರೀಕರಣದ ಪ್ರಕ್ರಿಯೆ ಕಾಂಗ್ರೆಸಿನ ಮುಖಂಡತ್ವದಲ್ಲೇ, ದೇವರಾಜ ಅರಸ್‌ರವರ ನೇತೃತ್ವದಲ್ಲಿ ಆರಂಭಗೊಂಡಿತ್ತು. ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆಯನ್ನು 1973ರಲ್ಲಿ ಮೈಸೂರು ಪವರ್ ಕಾರ್ಪೊರೇಶನ್ ಸ್ಥಾಪನೆಯೊಂದಿಗೆ ಪ್ರತ್ಯೇಕಿಸಲಾಯಿತು; ತಾನು ವೆಚ್ಚದಾಯಕ ವಿದ್ಯುಚ್ಛಕ್ತಿಯನ್ನು ಬಳಸುವ ರಾಜ್ಯ, ಅದನ್ನು ತಾನೇ ನಿರ್ವಹಿಸಲು ಸಾಧ್ಯವಿಲ್ಲ ಎಂದು ಹೇಳಿಕೊಂಡು ತನ್ನ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆಯ ಈ ಘಟ್ಟವನ್ನು ತೆರೆದು ಕೊಟ್ಟಿತು. ಶಿಕ್ಷಣದ ರಂಗದಲ್ಲಿ ಸ್ವಯಂ ಹಣಕಾಸಿನ 'ಕ್ಯಾಪಿಟೇಶನ್ ಫೀ' ಪ್ರಕ್ರಿಯೆ ಮೂಡಿ ಬಂದದ್ದು ಕರ್ನಾಟಕದಲ್ಲೇ, ರಾಮಕೃಷ್ಣ ಹೆಗ್ಡೆಯವರ ಅಧಿಕಾರಾವಧಿಯಲ್ಲಿ. ಅದು ಇಲ್ಲಿ ಬೇರೂರಿದ್ದಷ್ಟೇ ಅಲ್ಲ, ದೇಶದ ವಿವಿಧ ಭಾಗಗಳಿಗೂ ಹರಡಿತು, ಅಂತಿಮವಾಗಿ ಕೇರಳದಲ್ಲಿಯೂ ಒಂದು ಸವಾಲು ಹಾಕುವಂತಾಯಿತು.

ಕರ್ನಾಟಕ ಮತ್ತು ಬೆಂಗಳೂರು ಭಾರತದಲ್ಲಿ ಸಾರ್ವಜನಿಕ ವಲಯದ ಮೂಲ ನೆಲೆಯಾಗಿದೆ. ಅದರ ಛಾಯೆ ಟಿಪ್ಪು ಸುಲ್ತಾನನ ಕಾಲದಿಂದ ಆರಂಭವಾಗಿ, ಇಪ್ಪತ್ತನೇ ಶತಮಾನದಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರು ಕಟ್ಟಿದ ಒಂದು ಬಲಿಷ್ಟ ಸಾರ್ವಜನಿಕ ವಲಯ, ಸ್ವಾತಂತ್ರ್ಯಾನಂತರ ನೆಹರೂ ಧೋರಣಗಳ ಅಡಿಯಲ್ಲಿ ಬೆಳೆಯಿತು. ಉದಾರೀಕರಣದ ನಂತರದ ಅವಧಿಯಲ್ಲಿ, ಅದುವರೆಗೆ ಸಾರ್ವಜನಿಕ ವಲಯದ ರಾಜಧಾನಿಯಾಗಿದ್ದ ಬೆಂಗಳೂರು ಸುಮಾರು ಪ್ರತಿಯೊಂದು ಬಹುರಾಷ್ಟ್ರೀಯ ಕಂಪನಿ ಬಂದು ನೆಲೆಸಿರುವ ರಾಜಧಾನಿಯಾಗಿ



ಪರಿವರ್ತನೆಗೊಂಡಿತು. 18ನೇ ಶತಮಾನದ ಅಂತ್ಯದಲ್ಲಿ ಟಿಪ್ಪೂ ಸುಲ್ತಾನನ ವಿಷಯದಲ್ಲಿ ವಿದೇಶಿ ಶಕ್ತಿಗಳು ಮಾಡಿದ್ದಂತೆ, ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸ್ವರೂಪದಲ್ಲಿ ಹಿಂಬಾಗಿಲನ್ನು ತೆರೆಯಲಾಯಿತು.

ಭಿನ್ನಧೋರಣೆಯಿಲ್ಲ

ಬಿಜೆಪಿಗೆ ಕಾಂಗ್ರೆಸಿಗಿಂತ ಭಿನ್ನವಾದ ಧೋರಣೆಯಿರಲಿಲ್ಲ, ಜನತಾ ವಿಭಾಗ ಕೂಡ ತನ್ನದು ಭಿನ್ನ ಧೋರಣೆ ಎಂದು ಹೇಳಿಕೊಳ್ಳುವಂತಿಲ್ಲ. ಅಂದರೆ ಇವೆಲ್ಲ ಸಮಾನ ಪರಂಪರೆ ಹೊಂದಿದವುಗಳು.

ಅದೆಂದರೆ, ಎಲ್‌ಪಿಜಿ ಧೋರಣೆಗಳಿಗೆ ಬದ್ಧತೆ- ಇದು ಒಂದೆಡೆಯಲ್ಲಿ ನೈಸರ್ಗಿಕ, ಮಾನವ ಮತ್ತು ಹಣಕಾಸು ಸಂಪನ್ಮೂಲಗಳಿಂದ ತುಂಬಿದ ಒಂದು ರಾಜ್ಯದಲ್ಲಿ ಇವುಗಳ ಲೂಟಿಗೆ ಅವಕಾಶಗಳನ್ನು ತೆರೆದು ಕೊಟ್ಟಿತು. ಹೆಚ್ಚಿನ ರಾಷ್ಟ್ರೀಕೃತ ಬ್ಯಾಂಕುಗಳು ಸ್ಥಾಪನೆಗೊಂಡದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ; ಅತ್ಯುತ್ತಮ ಖನಿಜ ಅಂದರೆ ಚಿನ್ನದ, ಅತ್ಯುತ್ತಮ ಮಟ್ಟದ ಕಬ್ಬಿಣದ ಅದಿರು ಇಲ್ಲಿದೆ; ತಾಂತ್ರಿಕ ಶಿಕ್ಷಣದಿಂದ ಮತ್ತು ಸಾರ್ವಜನಿಕ ವಲಯದಿಂದ ಇಲ್ಲಿ ಅತ್ಯುತ್ತಮ ಮಾನವ ಸಂಪನ್ಮೂಲ ವಿಕಾಸಗೊಂಡಿತು, ಬೆಳೆಯಿತು: ಇಲ್ಲಿ ಭೂಮಿಯ ಅಪಾರ ಲಭ್ಯತೆ ಮತ್ತು ಅನುಕೂಲ ಹವಾಮಾನಕ್ಕೆ ಸರಿಸಾಟಿಯೇ ಇಲ್ಲ. ಇವನ್ನೆಲ್ಲ ನಿರ್ಲಕ್ಷಿಸಲು ಸಾಧ್ಯವೇ? ಇವೆಲ್ಲವುಗಳಿಂದಾಗಿ, ಮೊದಲು, ಇದು ಸಾರ್ವಜನಿಕ ವಲಯದ ನೆಲೆಯಾಯಿತು, ನಂತರ ಉದಾರೀಕರಣದ ಪ್ರಕ್ರಿಯೆಯಲ್ಲಿ ಜಾಗತೀಕರಣಗೊಂಡ ಖಾಸಗೀ ಆರ್ಥಿಕದ ನೆಲೆಯಾಯಿತು.

ಈ ಧೋರಣೆಗಳನ್ನು ಅನುಸರಿಸುವಲ್ಲಿ ದೇಶದ ಇತರೆಡೆಗಳಂತೆ, ಈ ರಾಜ್ಯದಲ್ಲಿಯೂ ಮುಖ್ಯಧಾರೆಯ ಪಕ್ಷಗಳಲ್ಲಿ ಭಿನ್ನತೆ ಏನೇನೂ ಇಲ್ಲ. ಮೊದಲಿಗೆ ಜನತಾಪಕ್ಷ ಎಂದಾದ, ನಂತರ ಜನತಾದಳವಾದ ಪಕ್ಷ ಆರಂಭಗೊಂಡದ್ದು ಭಾರತ ರಾಷ್ಟ್ರೀಯ ಕಾಂಗ್ರೆಸಿನ 'ಸಿಂಡಿಕೇಟ್'(ಅಥವ ಒ)ಬಣದ, ಜನಸಂಘದ(ಅದೇ ಮುಂದೆ ಬಿಜೆಪಿಯಾಯಿತು) ಮತ್ತು ಸ್ವತಂತ್ರ ಪಕ್ಷದ ಪ್ರತಿಗಾಮಿ ವ್ಯಕ್ತಿಗಳಿಂದ ಮತ್ತು ಲೋಹಿಯಾವಾದಿ ಸಮಾಜವಾದಿಗಳಿಂದ. ಅವರೆಲ್ಲ 1947ರಿಂದ 1983ರ ವರೆಗೆ ಅಖಂಡವಾಗಿ ಆಳಿದ ಅದೇ ಕಾಂಗ್ರೆಸ್ ಸಂಕುಲದಿಂದ ಬಂದವರು. ಕಾಂಗ್ರೆಸ್ ಸಮಾಜವಾದ/ ಕಮ್ಯುನಿಸಂನತ್ತ ವಾಲಿರುವ ಪಕ್ಷ ಎಂದವರು ಅಭಿಪ್ರಾಯ ಹೊಂದಿದ್ದರು. ಆದರೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಒಟ್ಟಿಗೆ ಜೈಲುವಾಸದಲ್ಲಿದ್ದುದರಿಂದ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಡಬೇಕಾಗಿ ಬಂದಿತ್ತು. ಈ ಜನತಾ ಪಾರ್ಟಿಯೇ 1988ರಲ್ಲಿ ಒಡೆದು ಜನತಾ ದಳವಾಯಿತು, ನಂತರ ಬಿಜೆಪಿಯೊಂದಿಗೆ ಎನ್‌ಡಿಎಯ ಭಾಗವಾದ ಜನತಾದಳ (ಯು) ಮತ್ತು ಜನತಾದಳ (ಎಸ್) ಎಂದು ವಿಭಜನೆಗೊಂಡಿತು.

ಇದೇ ಜನತಾ ದಳ(ಎಸ್) ಹೈಜಾಕ್‌ಗೊಂಡು ಬಿಜೆಪಿ ಬಾಲ ಹಿಡಿದು ಕುಮಾರಸ್ವಾಮಿ 20-20 ಮುಖ್ಯ



ಮಂತ್ರಿಯಾಗಲು ಅನುವಾಯಿತು ಮತ್ತು ನಂತರ 20 ತಿಂಗಳು ಯೆಡಿಯೂರಪ್ಪ ಮುಖ್ಯಮಂತ್ರಿಯಾಗುವ ಭರವಸೆ ಪಡೆದರು. 'ವಚನಭ್ರಷ್ಟತೆ'ಯ ಪ್ರಚಾರ, ನಂತರ ರಾಷ್ಟ್ರಪತಿ ಆಳ್ವಿಕೆ, ಅಂತಿಮವಾಗಿ ಚುನಾವಣೆಗಳಲ್ಲಿ ವಿಭೂತಿ ಹಚ್ಚಿಕೊಳ್ಳದ, ಬದಲಿಗೆ ಕುಂಕುಮ ಹಚ್ಚುವ ಲಿಂಗಾಯಿತರಾದ ಯೆಡಿಯೂರಪ್ಪ ಮುಖ್ಯಮಂತ್ರಿಯಾದರು, ಮುಂದೆ 38 ತಿಂಗಳ ಕಾಲದಲ್ಲಿ ಲಿಂಗಾಯಿತ ಕೋಮಿನ ಹೆಸರಲ್ಲಿ, ಆರೆಸ್ಸೆಸ್ ಸಿಬ್ಬಂದಿಯೊಂದಿಗೆ ಮತ್ತು ವಾಸ್ತವಿಕವಾಗಿ ಜಾಗತಿಕ ಹಿತಾಸಕ್ತಿಗಳೊಂದಿಗೆ ಆಡಳಿತ ನಡೆಸಿಕೊಂಡು ಬಂದರು. ಹೀಗೆ ಈ ಅವಧಿಯಾದ್ಯಂತ ಉದಾರೀಕರಣ-ಖಾಸಗೀಕರಣ-ಜಾಗತೀಕರಣದ ಶಕ್ತಿಗಳದ್ದೇ ಅಬಾಧಿತ ಓಡಾಟ. ಇದೇ ಸ್ವಾತಂತ್ರ್ಯಾನಂತರದ ಮೊದಲ ಅವಧಿಯಲ್ಲಿ ಕರ್ನಾಟಕ ಏನಾಗಿತ್ತೊ, ಈಗ ತದ್ವಿರುದ್ಧ ಸ್ವರೂಪ ಪಡೆಯಲು ಕಾರಣವಾಯಿತು.

ಪುಟ 12 ಕ್ಕೆ

ಪಂಜಿನಮೊಗರು ಜೋಡಿ ಕೊಲೆ–ಡಿವೈಎಫ್ಐ ನೇತೃತ್ವದಲ್ಲಿ ಪ್ರತಿಭಟನೆ

ಮಂಗಳೂರು ಮಹಾ ನಗರ ವ್ಯಾಪ್ತಿಯ ಪಂಜಿಮೊಗರಿನ ಒಬ್ಬ ಗೃಹಿಣಿ ಹಾಗೂ ಅವರ 8 ವರ್ಷದ ಮಗಳ ಕೊಲೆ ನಡೆದು 1 ತಿಂಗಳಾಗುತ್ತಾ ಬಂದಿದ್ದರೂ, ಕೊಲೆಗಾರರನ್ನು ಪತ್ತೆಹಚ್ಚುವಲ್ಲಿ ವಿಫಲವಾಗಿದ್ದು, ಅಮಾಯಕರನ್ನು ಪದೇ ಪದೇ ಪೀಡಿಸುತ್ತಿರುವ ಪೋಲೀಸರ ನಡವಳಿಕೆ ವಿರುದ್ಧ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿಯು ನೇತೃತ್ವದಲ್ಲಿ ಪಂಜಿಮೊಗರಿನ ನಾಗರಿಕರು ಜುಲೈ 31 ರಂದು ಕಾವೂರು ಜಂಕ್ಷನ್ನಿನಲ್ಲಿ ಪ್ರತಿಭಟನೆ ನಡೆಸಿದರು.

ಕೊಲೆ ನಡೆದು 1 ತಿಂಗಳಾದರೂ ತನಖೆ ಪೋಲೀಸರಿಗೆ ಸಾಧ್ಯವಾಗದಿರುವುದರಿಂದ, ಸಿಬಿಐ ಅಥವಾ ಸಿಓಡಿಯಂತಹ ಸಂಸ್ಥೆಯಂಥ ಸ್ವತಂತ್ರ ತನಿಖಾ ತಂಡದಿಂದ ತನಿಖೆ ನಡೆಸಬೇಕು; ಈ ವಿಷಯದಲ್ಲಿ ಹಿಂದೇಟು ಹಾಕಿದರೆ ಸಚಿವ ಕೃಷ್ಣ ಪಾಲೆಮಾರ್‌ರ ಮನೆ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಎಚ್ಚರಿಸಿದರು.

ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ಪಂಜಿಮೊಗರು ಘಟಕದ ಅಧ್ಯಕ್ಷ ಬಶೀರ್ ಅಹ್ಮದ್, ಸಾಮಾಜಿಕ ಕಾರ್ಯಕರ್ತೆ ಕ್ಸೆವಿಯರ್ ಡಿಸೋಜ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸಾಜಿದಾ ಅತ್ತಾವರ್, ಪ್ರಗತಿಪರ ಚಿಂತಕರ ವೇದಿಕೆಯ ಅಧ್ಯಕ್ಷ ಪಿ.ಎ.ಪ್ರಸನ್ನ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಭೆಗೂ ಮೊದಲು ಪಂಜಿಮೊಗರಿನಿಂದ ಕಾವೂರುವರೆಗೆ ಮೆರವಣಿಗೆ ನಡೆಸಲಾಯ್ತು.


★

ಬ್ಯಾಂಕ್ ವಿರುದ್ಧ ಶಿರ್ತಾಡಿ ಮತ್ತು ಉಜಿರೆಯಲ್ಲಿ ಪ್ರತಿಭಟನೆಗಳು

ಶೂನ್ಯ ಶಿಲ್ಕಿನಲ್ಲಿ ಬ್ಯಾಂಕ್ ಉಳಿತಾಯ ಖಾತೆಗಳನ್ನು ಬಡವರಿಗೆ ಹಾಗೂ ವಿದ್ಯಾರ್ಥಿಗಳಿಗೆ ತೆರೆಯಬಹುದಾಗಿದೆ ಎಂಬ ಸರ್ಕಾರೀ ನಿರ್ದೇಶನವಿದ್ದರೂ, ಬ್ಯಾಂಕ್‌ಗಳು ಹಾಗೆ ಮಾಡದೆ ಕನಿಷ್ಟ ಠೇವಣಿ ಎಂದು ಖಾತೆದಾರರಿಂದ ವಸೂಲಿ ಮಾಡುತ್ತಿರುವುದರ ವಿರುದ್ಧ ಕಾರ್ಮಿಕರು ಹಾಗೂ ಉದ್ಯೋಗ ಖಾತ್ರಿ ಯೋಜನೆ ಫಲಾನುಭವಿಗಳು ಮೂಡಬಿದರೆ ಪ್ರದೇಶದ ಶಿರ್ತಾಡಿಯಲ್ಲಿ ಹಾಗೂ ಬೆಳ್ತಂಗಡಿ ತಾಲೂಕಿನ ಉಜಿರೆಯಲ್ಲಿ ಸಂಬಂಧಪಟ್ಟ ಬ್ಯಾಂಕುಗಳ ಎದುರು ಪ್ರತಿಭಟನೆ ನಡೆಸಿದರು.

ಆಗಸ್ಟ್ 1 ರಂದು ಶಿರ್ತಾಡಿ ಕಾರ್ಪರೇಶನ್ ಬ್ಯಾಂಕ್ ಎದುರು ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ದ.ಕ.ಜಿಲ್ಲಾ ಬೀಡಿ ಫೆಡರೇಶನ್ ಕಾರ್ಯದರ್ಶಿ ಸುಕುಮಾರ್ ಮಾತನಾಡಿದರು. ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಕಾರ್ಮಿಕ ಮುಖಂಡರಾದ ರಮಣಿ, ರಾಧ, ಗಿರಿಜ, ಸುಂದರ ಶೆಟ್ಟಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಇದಕ್ಕೆ ಮೊದಲು ಶಿರ್ತಾಡಿ ಪೇಟೆಯಿಂದ ಬ್ಯಾಂಕ್ ವರೆಗೆ ಮೆರವಣಿಗೆ ನಡೆಸಲಾಯ್ತು. ಉಳಿತಾಯ ಖಾತೆ ತೆರೆಯಲು ಇರುವ ತೊಂದರೆಗಳನ್ನು ಸರಿಪಡಿಸಲು ಮುಖ್ಯ ಕಚೇರಿಗೆ ತಿಳಿಸುವುದಾಗಿ ಬ್ಯಾಂಕ್ ಮೇನೇಜರ್ ಒಪ್ಪಿಗೆ ನೀಡಿದರು.





ಉಜಿರೆ ವಿಜಯಾ ಬ್ಯಾಂಕಿನ ಎದುರು ಸಿಐಟಿಯು ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಬೀಡಿ ಕಾರ್ಮಿಕರ ಮಕ್ಕಳಿಗೆ ಕೇಂದ್ರ ಸರ್ಕಾರದಿಂದ ಲಭಿಸುವ ವಿದ್ಯಾರ್ಥಿ ವೇತನ ಪಡೆಯಲು ನೆಫ್ಟ್ ಫಾರಂಗೆ ಸಹಿ ಹಾಕಲು ಉಜಿರೆ ವಿಜಯಾ ಬ್ಯಾಂಕಿನಲ್ಲಿ ಪರಿಶೀಲನಾ ಶುಲ್ಕವೆಂದು ರೂ.50 ವಸೂಲು ಮಾಡಲಾಗುತ್ತಿತ್ತು, ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಮುಖಂಡ ಬಿ.ಎಂ.ಭಟ್ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಜಯರಾಂ ಮಯ್ಯ, ಶ್ಯಾಮರಾಜ್ ಮತ್ತಿತರರು ವಹಿಸಿದ್ದರು. ಪ್ರತಿಭಟನೆಯ ಬಳಿಕ ಪ್ರತಿಭಟನಾಕಾರರೊಂದಿಗೆ ಮಾತನಾಡಿದ ಬ್ಯಾಂಕ್ ಮೆನೇಜರ್, ಈ ಹಿಂದೆ ತಾವು ಶುಲ್ಕ ಪಡೆಯುತ್ತಿದ್ದುದಾಗಿಯೂ ಇದೀಗ ಸಿಐಟಿಯು ನೋಟೀಸು ನೀಡಿದ ಬಳಿಕ ಶುಲ್ಕ ಪಡೆಯುವುದನ್ನು ನಿಲ್ಲಿಸಲಾಗಿದೆ ಎಂದು ಪ್ರಕಟಿಸಿದರು. ಸಿಐಟಿಯು ಹೋರಾಟಕ್ಕೆ ಸಂದ ಜಯ ಇದಾಗಿದೆ.

★

ಬಂಟ್ವಾಳದಲ್ಲಿ ಗ್ರಾಮ ಪಂಚಾಯತ್ ನೌಕರರ ಪ್ರತಿಭಟನೆಗಳು

ಗ್ರಾ.ಪಂ.ನೌಕರರಿಗೆ ಕಾನೂನುಬದ್ಧ ಸವಲತ್ತು ಒದಗಿಸಿ ಕೊಡಿ ಎಂದು ಒತ್ತಾಯಿಸಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಗ್ರಾ.ಪಂ.ನೌಕರರ ಸಂಘದ ಬಂಟ್ವಾಳ ತಾಲೂಕು ಸಮಿತಿಯ ನೇತೃತ್ವದಲ್ಲಿ ಆಗಸ್ಟ್ 2 ರಂದು ಬಂಟ್ವಾಳ ತಾಲೂಕು ಪಂಚಾಯತ್ ಕಚೇರಿ ಎದುರು ಪ್ರತಿಭಟನೆ ನಡೆಯಿತು. ತಾಲೂಕಿನ ಗ್ರಾ.ಪಂ.ಗಳಲ್ಲಿ ದುಡಿಯುತ್ತಿರುವ ಬಿಲ್ ಕಲೆಕ್ಟರ್, ಗುಮಾಸ್ತರು, ಪಂಪ್ ಅಪರೇಟರ್‌ಗಳು 70ಕ್ಕೂ ಮಿಕ್ಕಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಗ್ರಾ.ಪಂ.ನೌಕರರ ಸಂಘದ ದ.ಕ.ಜಿಲ್ಲಾಧ್ಯಕ್ಷ ಕೆ.ಯಾದವ ಶೆಟ್ಟಿ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಬಿಎಸ್ಸೆನಲ್ ಅರೆಕಾಲಿಕ ನೌಕರರ ಸಂಘದ ಅಧ್ಯಕ್ಷ ಮನೋಹರ್ ನೇರಂಬೋಳು, ರೈತ ಸಂಘದ ಮುಖಂಡ ಬಿ.ನಾರಾಯಣ, ಸಿಐಟಿಯು ಮುಖಂಡ ರಾಮಣ್ಣ ವಿಟ್ಲ ಮೊದಲಾದವರು ಉಪಸ್ಥಿತರಿದ್ದರು. ಸಂಘದ ಸಂಚಾಲಕರಾದ ರಾಜಶೇಖರ ಎಂ.ಪ್ರಭು, ಅಧ್ಯಕ್ಷ ರಾಬರ್ಟ್, ಕಾರ್ಯದರ್ಶಿ ಜಯರಾಮ ಮಾಸ್ಟರ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

★

ಶೂನ್ಯ ಶಿಲ್ಕುವಿನಲ್ಲಿ ಬ್ಯಾಂಕ್ ಖಾತೆ ತೆರೆಯಲು ಆಗ್ರಹ

ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲು ರೂ.55ನ್ನು ವಸೂಲಿ ಮಾಡಿದ್ದನ್ನು ವಿರೋಧಿಸಿ ಕುಪ್ಪೆಪದವು ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ಆಗಸ್ಟ್ 6 ರಂದು ಕೆನರಾ ಬ್ಯಾಂಕಿನ ಎಡ ಪದವು ಶಾಖೆಯ



ಎದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ಧೇಶಿಸಿ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಹಿರಿಯ ಕಾರ್ಮಿಕ ಮುಖಂಡ ಯು.ಬಿ.ಲೋಕಯ್ಯ, ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಮಾತನಾಡಿದರು. ಇನ್ನೂರಕ್ಕೂ ಹೆಚ್ಚು ಮಂದಿ ಬೀಡಿ ಕೆಲಸಗಾರರು ಪ್ರತಿಭಟನೆಯಲ್ಲಿ ಭಾಗವಹಿಸಿರುತ್ತಾರೆ. ಬ್ಯಾಂಕಿನವರು ಪ್ರತಿಕ್ರಿಯಿಸಿ ತಾವು ವಸೂಲಿ ಮಾಡಿದ್ದ ಶುಲ್ಕವನ್ನು ಸಂಬಂಧಪಟ್ಟವರಿಗೆ ವಾಪಾಸು ಮಾಡಿರುತ್ತಾರೆ. ಸಂಘದ ಮುಖಂಡರಾದ ಎನ್.ಎ.ಹಸನಬ್ಬ, ಸದಾಶಿವ ದಾಸ್, ವಸಂತಿ, ವಾರಿಜ, ಬೇಬಿ, ಭವಾನಿ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

★

ಉಡುಪಿಯಲ್ಲಿ ನಿವೇಶನ ರಹಿತರ ಬೃಹತ್ ಪ್ರತಿಭಟನೆ

ಉಡುಪಿ ತಾಲೂಕಿನ 3,342 ವಸತಿ ಹಾಗೂ ನಿವೇಶನ ರಹಿತರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಆಗಸ್ಟ್ 9 ರಂದು ತಾಲೂಕು ತಹಶೀಲ್ದಾರರಿಗೆ ನಿವೇಶನ ಒದಗಿಸುವಂತೆ ಕೋರಿ ಮನವಿ ಸಲ್ಲಿಸಿದರು ಅಲ್ಲದೆ ಸಾವಿರಕ್ಕೂ ಮಿಕ್ಕಿದ ಸಂಖ್ಯೆಯಲ್ಲಿ ತಾಲೂಕು ಕಚೇರಿ ಮುಂದೆ ಧರಣಿ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಮಾತನಾಡಿ, ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಕೆಲವು ರಾಜಕರಣಿಗಳು ಹಾಗೂ ಅವರ ಬಂಧುಗಳು ಬಡ ರೈತರ ಭೂಮಿಯನ್ನು ಕೆಐಎಡಿಬಿ ಮೂಲಕ ಸ್ವಾಧೀನಪಡಿಸಲು ಅವಕಾಶ ನೀಡಲಾಗಿದೆ; ಆದರೆ ನಿವೇಶನ ರಹಿತ ಬಡವನಿಗೆ ನೀಡಲು ಸರ್ಕಾರ ಹಿಂದೆ ಮುಂದೆ ನೋಡುತ್ತಿದೆ ಎಂದು ಟೀಕಿಸಿದರು.

ಧರಣಿಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಕೆ.ಶಂಕರ್, ಕಾರ್ಯದರ್ಶಿ ವಿಶ್ವನಾಥ ರೈ, ಸಂಘದ ತಾಲೂಕು ಸಂಚಾಲಕ ದೋಗು ಸುವರ್ಣ, ಕುಂದಾಪುರ ತಾಲೂಕು ಸಂಘದ ಕಾರ್ಯದರ್ಶಿ ವೆಂಕಟೇಶ್ ಕೋಣಿ, ರೈತ ಕಾರ್ಮಿಕ ಮುಖಂಡರಾದ ರಮೇಶ್ ಮೆಂಡನ್, ಅದಮಾರು ಶ್ರೀಪತಿ ಆಚಾರ್ಯ, ಕವಿರಾಜ್ ಮತ್ತಿತರರು ಭಾಗವಹಿಸಿದ್ದರು. ಇದಕ್ಕೂ ಮುನ್ನ ಉಡುಪಿ ಬಸ್ಸು ನಿಲ್ದಾಣದಿಂದ ತಾಲೂಕು ಕಚೇರಿವರೆಗೆ ಕಾರ್ಮಿಕರು, ಕೃಷಿಕೂಲಿಕಾರರ ಮೆರವಣಿಗೆ ನಡೆಸಲಾಯ್ತು.

★

ಕುಂದಾಪುರದಲ್ಲಿ ಕೃಷಿ ಕೂಲಿಕಾರರ ಸಮಾವೇಶ

ಕಾರ್ಮಿಕ ಭವನದಲ್ಲಿ ಆಗಸ್ಟ್ 9 ರಂದು ಕರ್ನಾಟಕ ಪ್ರಾಂತ ಕೃಷಿಕೂಲಿಕಾರ ಸಂಘದ ಆಶ್ರಯದಲ್ಲಿ ನಡೆದ ತಾಲೂಕು ಕೃಷಿ ಕೂಲಿಕಾರರ ಸಮಾವೇಶದಲ್ಲಿ ಆಗಸ್ಟ್ 26 ರಂದು ನಿವೇಶನ ರಹಿತರಿಗೆ ಹಕ್ಕುಪತ್ರಕ್ಕಾಗಿ ಒತ್ತಾಯಿಸಿ ಉಡುಪಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ನಿರ್ಣಯಿಸಲಾಯಿತು. ಸಮಾವೇಶವನ್ನು ರಾಜ್ಯ ಸಂಘದ ಅಧ್ಯಕ್ಷ ನಿತ್ಯಾನಂದ ಸ್ವಾಮಿ ಉದ್ಘಾಟಿಸಿದರು. ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ,

ಪುಟ 15



ಅಮೆರಿಕಾದ ಸಾಲ ಯೋಗ್ಯತೆಯ ರೇಟಿಂಗ್‌ನಲ್ಲಿ ಕುಸಿತ ಕಂಡಿರುವುದು ಜಾಗತಿಕವಾಗಿ ಆರ್ಥಿಕ ವಲಯಗಳಲ್ಲಿ ತಳಮಳಗಳನ್ನೇ ಸೃಷ್ಟಿಸಿದೆ. ಹೀಗೇಕಾಯ್ತು? ಕಾರಣಗಳೇನು? ಒಂದು ಅವಲೋಕನ

ಅಮೆರಿಕ ಸರ್ಕಾರ ಸಾಲ ಯೋಗ್ಯತೆ ರೇಟಿಂಗ್ ಕಡಿತ

"ತಂದೆ-ತಾಯಿ ಕೊಂದು, ಅನಾಥನಾದೆ ಅಂತ ಅತ್ತ ಹಾಗೆ.."

"ಸ್ಟಾಂಡರ್ಡ್ ಅಂಡ್ ಪೂರ್" (ಎಸ್&ಪಿ) ಸಂಸ್ಥೆ ಅಮೆರಿಕ ಸರ್ಕಾರದ ಸಾಲ ಯೋಗ್ಯತೆಯ ರೇಟಿಂಗನ್ನು AAA ನಿಂದ AA+ ಗೆ ಇಳಿಸಿ ಜಾಗತಿಕ ಆರ್ಥಿಕದಲ್ಲಿ ಅಲ್ಲೋಲ ಕಲ್ಲೋಲ ತಂದಿದೆ. ಇದು ಈಗಾಗಲೇ ಯುರೋಪಿನ ಹಲವು ದೇಶಗಳ ಸಾಲ ಬಿಕ್ಕಟ್ಟಿನಿಂದ ಕುಸಿದಿದ್ದ ಶೇರು ಮಾರ್ಕೆಟ್ ಇನ್ನಷ್ಟು ಕುಸಿಯುವುದಕ್ಕೆ ಕಾರಣವಾಗಿದೆ. ಅಮೆರಿಕ, ಯುರೋಪು ಮತ್ತು ಭಾರತ ಸೇರಿದಂತೆ ಏಶ್ಯಾದ ಶೇರು ಮಾರ್ಕೆಟ್ ತೀವ್ರ ಕುಸಿತ ಕಂಡಿದೆ. ಅಮೆರಿಕ ಸರ್ಕಾರದ ಬಾಂಡುಗಳಲ್ಲಿ ಹಣ ಹೂಡಿರುವ (ಚೀನಾ, ಭಾರತ ಸೇರಿದಂತೆ ಹಲವು ಸರ್ಕಾರಗಳು ಇತ್ಯಾದಿ) ಎಲ್ಲರಿಗೂ ಇದು ಆಘಾತ ಉಂಟು ಮಾಡಿದೆ. ಕೆಲವರು ಅಮೆರಿಕ ಸರ್ಕಾರ ಈ ರೇಟಿಂಗನ್ನು ಮನ್ನಿಸಿ ಬಾಂಡುಗಳಿಗೆ ಹೆಚ್ಚಿನ ಬಡ್ಡಿ ದರ ಕೊಡಬೇಕು ಎಂದು ಒತ್ತಾಯಿಸಲು ಆರಂಭಿಸಿದ್ದಾರೆ, ಅಮೆರಿಕದ ಬಾಂಡುಗಳಲ್ಲಿ ಹಣ ಹೂಡಿರುವ ಇತರ ಹಣಕಾಸು ಹೂಡಿಕೆ ಸಂಸ್ಥೆಗಳೂ ಆತಂಕಿತವಾಗಿವೆ.

ಅಮೆರಿಕನ್ ಸರ್ಕಾರದ ಹಣಕಾಸು ವಿಶ್ವಾಸಾರ್ಹತೆ ಬಗ್ಗೆ ತನ್ನ ವಿಮರ್ಶೆ ಮಾಡಿರುವ ಎಸ್&ಪಿ ಸಂಸ್ಥೆಯ ವಿಶ್ವಾಸಾರ್ಹತೆ ಎಷ್ಟು ? "ತಂದೆ-ತಾಯಿ ಕೊಂದು ನಾನು ಅನಾಥನಾದೆ ಅಂತ ಅತ್ತ ಹಾಗೆ.." ಇದು ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಪಾಲ್ ಕ್ರುಗ್ ಮನ್ ಎಸ್&ಪಿ ಸಂಸ್ಥೆ ರೇಟಿಂಗ್ ಬಗ್ಗೆ ಮಾಡಿದ ಅತ್ಯಂತ ಖಾರದ ಪ್ರತಿಕ್ರಿಯೆ. 2008 ರ ಬಿಕ್ಕಟ್ಟಿಗೆ ಒಂದು ಪ್ರಮುಖ ಕಾರಣ ಎನ್ನಲಾಗುವ, ಸಬ್ ಪ್ರೈಮ್ ಮನೆ ಸಾಲದ ಆಧಾರದ ಮೇಲೆ ಕೊಡಲಾದ ಹೂಡಿಕೆಗಳಿಗೆಲ್ಲಾ ಇದೇ ಎಸ್&ಪಿ AAA ರೇಟಿಂಗ್ ಕೊಟ್ಟಿತ್ತು. ಸಾಲದ್ದಕ್ಕೆ ಅದೇ ಸಮಯದಲ್ಲಿ ಕುಸಿದು ಬಿಕ್ಕಟ್ಟು ಸೃಷ್ಟಿಸಿದ ಲೆಹರ್‌ಮನ್ ಬ್ರದರ್ಸ್‌ಗೂ ಅದು ದಿವಾಳಿ ಆಗುವ ತಿಂಗಳಿನ ವರೆಗೂ AAA ರೇಟಿಂಗ್ ಕೊಟ್ಟಿತ್ತು. ಮಾತ್ರವಲ್ಲ, ಆ ಮೇಲೂ ತನ್ನ ರೇಟಿಂಗನ್ನು ಸಮರ್ಥಿಸಿ ಕೊಂಡಿತ್ತು. ಸಾಲದ್ದಕ್ಕೆ, ಅಮೆರಿಕನ್ ಸರ್ಕಾರದ ರೇಟಿಂಗ್ ಇಳಿಸಿದ ಹೇಳಿಕೆಗೆ ಕೊಟ್ಟ ಅಂಕೆ-ಸಂಖ್ಯೆಗಳಲ್ಲೂ ಹಣಕಾಸು ಕೊರತೆ ಅಂದಾಜು ಮಾಡುವುದರಲ್ಲಿ ಎರಡು ಲಕ್ಷ ಕೋಟಿ ಡಾಲರ್ ಪ್ರಮಾಣದ ತಪ್ಪು ಮಾಡಿತ್ತು. ಅಮೆರಿಕ ಸರ್ಕಾರದ ವಕ್ತಾರರು ಈ ತಪ್ಪನ್ನು ತೋರಿಸಿ ಅದನ್ನು ಒಪ್ಪಿಕೊಂಡರೂ, ರೇಟಿಂಗ್ ಇಳಿಸುವ ನಿರ್ಣಯ ಬದಲಿಸಲಿಲ್ಲ. ಅಮೆರಿಕದ ಸರ್ಕಾರ ಯಾವುದೇ ಹಣ ಪಾವತಿ ನಿಲ್ಲಿಸಿಲ್ಲ ಅಥವಾ ತಡ ಮಾಡಿಲ್ಲ. ಅಂತಹ ಸಾಧ್ಯತೆ ಸಹ ಇಲ್ಲ. ಆದರೂ ಈ ನಿರ್ಣಯ ತೆಗೆದುಕೊಂಡಿದೆ.


ಎಸ್&ಪಿ ಹಣಕಾಸು ಕಂಪನಿಗಳ "ಬಾಡಿಗೆ ಕೊಲೆಗಾರ"

ಇಂತಹ ಎಸ್&ಪಿ ಸಂಸ್ಥೆ ರೇಟಿಂಗನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು? ನಿಜವಾಗಿಯೂ ತೆಗೆದುಕೊಳ್ಳಬೇಕಿಲ್ಲ. ಆದರೆ ಹಣಕಾಸು ಹೂಡಿಕೆ ಸಂಸ್ಥೆಗಳೂ ಈ ರೇಟಿಂಗುಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತವೆ. ಇತರ ಇಂತಹ ಎರಡು ರೇಟಿಂಗ್ ಸಂಸ್ಥೆಗಳಲ್ಲಿ ಒಂದು ಸಹ ಎಸ್&ಪಿ ನಂತೆ ರೇಟಿಂಗ್ ಇಳಿಸಿದರೆ, ಅಮೆರಿಕನ್ ಸರ್ಕಾರ ತನ್ನ ಬಾಂಡುಗಳ ಮೇಲೆ ಇನ್ನೂ ಹೆಚ್ಚಿನ ಬಡ್ಡಿ ದರ ತೆರಬೇಕಾಗುತ್ತದೆ, ಇದರ ಅರ್ಥ ಬಡವರ ಬೆಂಬಲಾರ್ಥ ಯೋಜನೆಗಳಲ್ಲಿ ತೀವ್ರ ಕಡಿತ. ರೇಟಿಂಗನ್ನು ಇಳಿಸಲು ಕಾರಣವಾದರೂ ಏನು ? ಸಾಲದ ಮಿತಿ ಏರಿಸಲು ಎರಡು ರಾಜಕೀಯ ಪಕ್ಷಗಳ ನಡುವೆ ಸಹಮತದ ಅಭಾವದಿಂದ ಉಂಟಾದ ಬಿಕ್ಕಟ್ಟು, ಸಾಲವನ್ನು ಮಿತಿಗೊಳಿಸಲು ದೂರಗಾಮಿ ಯೋಜನೆಯ ಕೊರತೆ, ಎಸ್&ಪಿ ಕೊಡುವ ಕಾರಣ. ಆದರೆ ನಿಜವಾಗಿಯೂ ಸಾಮಾಜಿಕ ವೆಚ್ಚದಲ್ಲಿ ಇನ್ನಷ್ಟು ಕಡಿತ ಮಾಡಲು ಅಮೆರಿಕನ್ ಸರ್ಕಾರದ ಮೇಲೆ ಒತ್ತಡ ಹಾಕುವುದು ಅದರ ನಿಜವಾದ ಉದ್ದೇಶ

ಎಸ್&ಪಿ ದೈತ್ಯ ಹಣಕಾಸು ಕಂಪನಿಗಳ "ಬಾಡಿಗೆ ಕೊಲೆಗಾರ" ನಂತೆ ವರ್ತಿಸುತ್ತಿದೆ ಎಂದು ಅಮೆರಿಕನ್ ಕಮ್ಯುನಿಸ್ಟ್ ಪಕ್ಷದ ವಾರಪತ್ರಿಕೆ "ಪೀಪಲ್ಸ್ ವರ್ಲ್ಡ್" ಬಣ್ಣಿಸಿದೆ. ಎಸ್&ಪಿ ನಂತಹ ಹಣಕಾಸು ವ್ಯವಹಾರದ ಉದ್ಯಮದ ಭಾಗವಾಗಿರುವ ರೇಟಿಂಗ್ ಸಂಸ್ಥೆಗಳ ಬದಲು ಸ್ವತಂತ್ರ ಸಾರ್ವಜನಿಕ ರೇಟಿಂಗ್ ಸಂಸ್ಥೆ ಇರಬೇಕು ಎಂದು 2008 ಬಿಕ್ಕಟ್ಟಿನ ನಂತರ ಸಾಂಸ್ಥಿಕ ಸುಧಾರಣೆಗಳ ಬಗ್ಗೆ ಅಮೆರಿಕನ್ ಸರ್ಕಾರ ನೇಮಿಸಿದ ಕಮಿಶನ್ ಶಿಫಾರಸು ಮಾಡಿತ್ತು. ಅದನ್ನು ತಕ್ಷಣ ಜಾರಿ ಮಾಡಬೇಕು ಅಂತಲೂ "ಪೀಪಲ್ಸ್ ವರ್ಲ್ಡ್" ಹೇಳಿದೆ.

ತಲೆಮೇಲೆ ಗನ್

ಟೀ ಪಾರ್ಟಿ ಬಣದ ಒತ್ತಡದಿಂದ ಇನ್ನಷ್ಟು ಬಲಪಂಥಕ್ಕೆ ಸರಿಯುತ್ತಿರುವ ರಿಪಬ್ಲಿಕನ್ ಪಕ್ಷ ಬಜೆಟ್ ಪಾಸು ಮಾಡುವಾಗ ಶ್ರಿಮಂತ-ಪರ ಬಡವರ-ವಿರೋಧಿ ನೀತಿ ಹೇರಿತ್ತು. ಬುಶ್-ಕಾಲದ ಶ್ರೀಮಂತರ ಮೇಲಿನ ತೆರಿಗೆ ಕಡಿತ ಅವಧಿ ಮುಗಿದ ಮೇಲೂ ಅದನ್ನು



ಮುಂದುವರೆಸುವಂತೆ, ಬಜೆಟ್ ಸಮತೋಲನ ಮಾಡಲು ಶ್ರೀಸಾಮಾನ್ಯರ ಆರೋಗ್ಯ ಸೇವಾ ಯೋಜನೆ ಹೆಲ್ತ್ ಕೇರ್ ಮತ್ತು ಇತರ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ಕಡಿತ ಮಾಡುವಂತೆ - ಒಬಾಮ ಮೇಲೆ ಒತ್ತಡ ಹೇರುವಲ್ಲಿ ಸಫಲವಾಗಿತ್ತು. ರಿಪಬ್ಲಿಕನ್ ಪಕ್ಷ ಸಾಲ ಮಿತಿ ಏರಿಸುವ ನಿರ್ಣಯಕ್ಕೆ ಬೆಂಬಲ ನೀಡುವುದಕ್ಕೆ ಹೊಸ ಶರತ್ತುಗಳನ್ನು ಹೇರುವುದಿಲ್ಲ ಎಂಬ ಒಪ್ಪಂದ ಆಗಿತ್ತು. ಆದರೆ ಒಬಾಮ ಮತ್ತು ಡೆಮೊಕ್ರಾಟ್ ಪಕ್ಷಗಳ ನಿರೀಕ್ಷೆ ಸುಳ್ಳಾಗಿಸಿ, ರಿಪಬ್ಲಿಕನ್ ಪಕ್ಷ ಪುನಃ, ದೈತ್ಯ ಹಣಕಾಸು ಕಂಪನಿಗಳ ಪರವಾಗಿ ದೇಶದ ತಲೆಯ ಮೇಲೆ ಗನ್ನು ಹಿಡಿದಿದೆ. ಒಬಾಮ ಸಾಲಮಿತಿ ಏರಿಸಲು 2.4 ಲಕ್ಷ ಕೋಟಿಯಷ್ಟು ಹೆಚ್ಚಿನ ಸರ್ಕಾರಿ ವೆಚ್ಚ ಕಡಿತಕ್ಕೆ ಒಪ್ಪಿಕೊಂಡಿದ್ದಾರೆ. ಇದರಿಂದ ಸಾಮಾಜಿಕ ಭದ್ರತೆ, ಹೆಲ್ತ್ ಕೇರ್, ಕಲ್ಯಾಣ ಯೋಜನೆಗಳಲ್ಲಿ ಇನ್ನಷ್ಟು ಕಡಿತ ಆಗಲಿವೆ. ಯಾಕೆಂದರೆ ಶ್ರೀಮಂತರ ಮೇಲಿನ ತೆರಿಗೆ ಕಡಿತ ಮಾಡುವುದಿಲ್ಲ ಅಂತ ಒಬಾಮ ರಿಪಬ್ಲಿಕನ್ ಪಕ್ಷಕ್ಕೆ ವಚನ ನೀಡಿದ್ದಾರೆ.

ಬಜೆಟ್ ಪಾಸಾದ ಮೇಲೂ. ಸಾಲಮಿತಿಯನ್ನು ಏರಿಸಲು ಪಾರ್ಲಿಮೆಂಟ್ ಅನುಮತಿ ಯಾಕೆ ? 1917 ರಲ್ಲಿ ಮಾಡಲಾದ ಒಂದು ತಿಕ್ಕಲು ಕಾನೂನು ಪ್ರಕಾರ ಇದು ಅಗತ್ಯ. ಸಾಮಾನ್ಯವಾಗಿ ಇದು ಮಾಮೂಲಿ ತಿದ್ದುಪಡಿ. ಆದರೆ ಹಣಕಾಸು ಬಂಡವಾಳ ಮತ್ತು ಅದರ ರಿಪಬ್ಲಿಕನ್ ಬೆಂಬಲಿಗರು ತಮ್ಮ ಹಿತಾಸಕ್ತಿಯನ್ನು ದೇಶದ ಮೇಲೆ ಹೊರಿಸಲು ಎಲ್ಲಾ ಕಾನೂನುಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಅಧ್ಯಕ್ಷ ಒಬಾಮ ಮತ್ತು ಡೆಮೊಕ್ರಾಟಿಕ್ ಪಕ್ಷ ಅದಕ್ಕೆ ಯಾವುದೇ ಪ್ರತಿರೋಧ ಒಡ್ಡಲು, ಅದರ ವಿರುದ್ಧ ಜನತೆಯನ್ನು ಅಣಿ ನೆರೆಸಲು ಸಮರ್ಥವಾಗಿಲ್ಲ.

ಬೆಳೆಯಬೇಕಾದ ಪ್ರತಿರೋಧ

2008 ರ ಬಿಕ್ಕಟ್ಟು ಉಂಟು ಮಾಡಿದ್ದು ಹಣಕಾಸು ಬಂಡವಾಳಕ್ಕೆ ಅನುಕೂಲವಾದ ನೀತಿಗಳೇ ಅಂತ ಸರ್ವವೇದ್ಯ. ಆದರೆ ಅದರ ಪರಿಹಾರವಾಗಿ ಅದೇ ಹಣಕಾಸು ಬಂಡವಾಳಕ್ಕೆ "ಬೆಲ್ ಔಟ್" ಕೊಡಲಾಯಿತು. ಬಿಕ್ಕಟ್ಟಿನ ಪರಿಣಾಮದಿಂದ ತತ್ತರಿಸುತ್ತಿದ್ದ ಜನವಿಭಾಗಗಳಿಗೆ ಪರಿಹಾರ ಮತ್ತು ಉತ್ಪಾದಕ ವಿಭಾಗಗಳಿಗೆ ಉತ್ತೇಜನಕ್ಕೆ ಬೇಕಾದ ಹೊಸ ಯೋಜನೆಗಳಿಗೆ ಹಣ ಒದಗಿಸದಿರಲು ಭಾರೀ ಒತ್ತಡ ಹೇರಲಾಗುತ್ತಿದೆ. ಹಣಕಾಸು ಬಂಡವಾಳಕ್ಕೆ ಇನ್ನಷ್ಟು ಹೆಚ್ಚು ಉತ್ತೇಜನ ಕೊಡಲು ಈಗ ಇರುವ ಕಲ್ಯಾಣ ಯೋಜನೆಗಳಲ್ಲಿ ಕಡಿತ ಮಾಡಲಾಗುತ್ತಿದೆ. ಜನತೆಯ ಮೇಲೆ 'ಮಿತವ್ಯಯ' ಹೇರಲಾಗುತ್ತಿದೆ. ಅಧ್ಯಕ್ಷ ಒಬಾಮ, ಎರಡೂ ಪ್ರಮುಖ ಪಕ್ಷಗಳು ಈ ರೀತಿ ಮಾಡುವಂತೆ ಬಲವಂತ ಮಾಡುವಲ್ಲಿ ಹಣಕಾಸು ಬಂಡವಾಳ ಸಫಲವಾಗಿದೆ. ಹಣಕಾಸು ಬಂಡವಾಳದ ಬಲಕ್ಕೆ ಜನತೆಯ ಪ್ರತಿರೋಧ ಬೆಳೆಯುತ್ತಿದ್ದರೂ, ಅದಕ್ಕೆ ಸವಾಲು ಹಾಕುವ ಶಕ್ತಿ ಇನ್ನೂ ಅದಕ್ಕೆ ಬಂದಿಲ್ಲ. ✦



ದೇಶದ ಮತ್ತು ರಾಜ್ಯದ ರೇಷಿಮೆ ಉದ್ದಿಮೆ ಗಂಭೀರ ಬಿಕ್ಕಟ್ಟಿಗೆ ಸಿಲುಕಿದೆ. ಸುಂಕರಹಿತ ಮುಕ್ತ ಆಮದು ನೀತಿಯನ್ನು ಕೇಂದ್ರ ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ರಾಜ್ಯ ಬಿಜೆಪಿ ಸರ್ಕಾರ ರೇಷ್ಮೆ ಉದ್ದಿಮೆಯ ನೆರವಿಗೆ ಬರದೆ ಹೊಣೆಗೇಡಿಯಾಗಿ ವರ್ತಿಸುತ್ತಿದೆ. ಈ ಸಮಸ್ಯೆಯ ಮೂಲವೇನು? ಪರಿಹಾರದ ದಾರಿಯೇನು?

ರೇಷಿಮೆ ಉದ್ದಿಮೆ ಉಳಿಯುವುದೆಂತು?



ಜಿ.ಸಿ. ಬಯ್ಯಾರೆಡ್ಡಿ

ತ್ನ ಬಣ್ಣ, ಕೋಮಲತೆ, ಕಲಾತ್ಮಕತೆಗಳಿಂದ ಜನರನ್ನು ಸೆಳೆಯುವ ಒಂದು ರೇಶಿಮೆ ಸೀರೆಯ ಹಿಂದೆ ಎಷ್ಟೊಂದು ಕೈಗಳ ಪರಿಶ್ರಮ ಅಡಗಿದೆ. ಏನೆಲ್ಲಾ ಸಂಕಷ್ಟಗಳಿವೆ ಎಂದು ಎಷ್ಟೋ ಜನರು ಯೋಚಿಸುವುದೇ ಇಲ್ಲ.

ರೇಷಿಮೆ ಮೊಟ್ಟೆ ತಂದು ಹತ್ತಾರು ಬಗೆಯ ಕೀಟ ಬಾಧೆ, ರೋಗಗಳ ಕಾಟಗಳಿಂದ ಹುಳುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾದು ಕಾಪಾಡಿಕೊಂಡು, ಹಿಪ್ಪು ನೇರಳೆ ಬೆಳೆದು, ಕಾಲ ಕಾಲಕ್ಕೆ ಕೊಟ್ಟು ಪೂರೈಸಿ, ರೇಷಿಮೆ ಬೆಳೆಸಿ ರೈತರು ಮಾರುಕಟ್ಟೆಗೆ ರೇಷಿಮೆ ಗೂಡುಗಳನ್ನು ತರುವ ಹೊತ್ತಿಗೆ ಹತ್ತಾರು ಘಟ್ಟಗಳಲ್ಲಿ ದುಡಿದು ದುಡಿದು ಬೆಂಡಾಗಿ ಹೋಗಿರುತ್ತದೆ ರೈತರ ಬದುಕು. ಮಾರುಕಟ್ಟೆಯಲ್ಲಿ ಒಂದಿಷ್ಟು ಒಳ್ಳೆಯ ಬೆಲೆ ಸಿಕ್ಕಿ ಹಾಕಿದ ಬಂಡವಾಳದ ಮೇಲೆ ಒಂದಷ್ಟು ಲಾಭವಾದರೆ ರೈತರ ಮುಖದಲ್ಲಿ ಸಂತಸ, ಸಂಭ್ರಮ. ಇಲ್ಲವಾದರೆ ರೈತರ ಬದುಕು ರೇಷಿಮೆ ಬಟ್ಟೆಯಲ್ಲ ಮೂರಾಬಟ್ಟೆ.

ಕೆಲ ವರ್ಷಗಳ ಕಾಲ, ಒಂದಷ್ಟು ಲಾಭವನ್ನು ಕಂಡು ಉತ್ಸಾಹದಿಂದ ರೇಷಿಮೆ ಉದ್ದಿಮೆ ವಿಸ್ತರಿಸುತ್ತಿದ್ದ ಪರಿಸ್ಥಿತಿ ಹೋಗಿ ರೇಷಿಮೆ ಬೆಳೆಯುವ ರೈತನ ಮುಖದಲ್ಲೀಗ ಚಿಂತೆಯ ಗೆರೆಗಳು ಮೂಡಿವೆ. ರೇಷಿಮೆಯ ಬೆಲೆ ಕುಸಿದಿದೆ. ರೇಷಿಮೆಯ ಕೃಷಿ ಲಾಭದಾಯಕ ವಾಗಿಲ್ಲ. ಶ್ರಮಕ್ಕೆ ತಕ್ಕ ಪ್ರತಿಫಲವಿರಲಿ, ಹಾಕಿದ ಬಂಡವಾಳವೂ ವಾಪಸ್ ಕೈಗೆ ಸಿಗುತ್ತಿಲ್ಲ. ಕಬ್ಬು ಬೆಳೆದ ರೈತರು, ಹತ್ತಿ ಬೆಳೆದ ರೈತರು, ತೊಗರಿ ಬೆಳೆದ ರೈತರು ಆತ್ಮಹತ್ಯೆಗೆ ಶರಣಾಗುವುದನ್ನು ನೋಡುತ್ತಿದ್ದೆವು. ಈಗ ರೇಷಿಮೆ ಬೆಳೆದ ರೈತರು ಸಾವಿಗೆ ಶರಣಾಗುವ ದುರಂತಮಯ ಸನ್ನಿವೇಶ ಬಂದಿದೆ.

2011 ರ ಜನವರಿ ಫೆಬ್ರವರಿ ತಿಂಗಳುಗಳಲ್ಲಿ ಕೆ.ಜಿ. ರೇಶಿಮೆ ಗೂಡಿಗೆ ಇದ್ದ ಬೆಲೆ 310 ರಿಂದ 312 ರೂಗಳು. ಈಗ ಅಂದರೆ ಆಗಸ್ಟ್ ತಿಂಗಳ ಲ್ಲಿ ರೇಶಿಮೆ ಗೂಡಿಗೆ ಬೆಲೆ ಸಿಗುತ್ತಿರುವ ಬೆಲೆ ಕೆ.ಜಿ.ಗೆ 160 ರೂಗಳು. ಅಂದರೆ ಸುಮಾರು ಅರ್ಧಕ್ಕರ್ಧ ಬೆಲೆ ಕುಸಿತ.

ಅಪರಾಧಿ ಯಾರು ?

ಇಂತಹ ಒಂದು ಸಂಕಷ್ಟ ಎದುರಾಗಲು ಕಾರಣ ಏನು ? ಇದರ ಹೊಣೆ ಯಾರದ್ದು ಎಂದು ನೋಡ ಹೋದರೆ ಅಪರಾಧಿ ಸ್ಥಾನದಲ್ಲಿ ನಿಲ್ಲುವುದು ಕಾಂಗ್ರೇಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರ ಹಾಗೂ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು. ರೇಷಿಮೆ ಬೆಲೆ ಕುಸಿತಕ್ಕೆ ಕಾರಣವೇನು ಎಂದು ಕಂಡು ಕೊಳ್ಳುವಲ್ಲಿ ಸೋತಿರುವುದು ಅಥವಾ ಇನ್ನೂ ಸರಿಯಾಗಿ ಹೇಳಬೇಕೆಂದರೆ ನಿಜವಾದ ಕಾರಣ ಗೊತ್ತಿದ್ದೂ ಕೂಡ ಅದನ್ನು ಗುರುತಿಸಲು ತಯಾರಿಲ್ಲದೇ ಮರೆ ಮಾಚಿ ವಂಚಿಸುತ್ತಾ ಬರುತ್ತಿರುವುದು ಬಿಕ್ಕಟ್ಟು ಇಷ್ಟೊಂದು ಉಲ್ಬಣಿಸಲು ಕಾರಣ.

ಆಮದು ಸುಂಕ ಕಡಿತವೆಂಬ ಗದಾ ಪ್ರಹಾರ

ದೇಶೀಯ ರೇಷಿಮೆ ಉದ್ದಿಮೆಯ ಬೆಳವಣಿಗೆ ಹಾಗೂ ದೇಶಿಯ ರೈತರ ಹಿತರಕ್ಷಣೆ ಮಾಡಬೇಕೆಂಬ ಒತ್ತಡಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಹೊರ ದೇಶದಿಂದ ಆಮದಾಗುವ ಕಚ್ಚಾ ರೇಷಿಮೆಗೆ ಇಲ್ಲಿಯವರೆಗೆ ಹಾಕುತ್ತಿದ್ದ ಶೇ.31 ರಷ್ಟು ಆಮದು ಸುಂಕವನ್ನು ತೀವ್ರವಾಗಿ ಕಡಿತಗೊಳಿಸಿ ಸುಂಕದ ಪ್ರಮಾಣವನ್ನು ಕೇವಲ ಶೇ. 5 ಕ್ಕೆ ಇಳಿಸಿರುವುದು ಬಿಕ್ಕಟ್ಟಿನ ಮೂಲ ಕಾರಣಗಳಲ್ಲಿ ಒಂದು.

ಈ ಬಗೆಗೆ ರೇಷ್ಮೆ ಬೆಳೆಗಾರರು ಕೇಳಿದರೆ ವಾಸ್ತವವನ್ನು ಮರೆ ಮಾಚುವ ಅಂಕಿ ಸಂಖ್ಯೆಗಳ ಕಸರತ್ತಿನ ಮೂಲಕ ತನ್ನ ರೈತದ್ರೋಹಿ, ಜನವಿರೋಧಿ ನೀತಿಗಳನ್ನು ಸಮರ್ಥಿಸಿಕೊಳ್ಳುತ್ತಿರುವುದು ಕೇಂದ್ರ ಸರ್ಕಾರದ ಮತ್ತೊಂದು ದೊಡ್ಡ ಪ್ರಮಾದವಾಗಿದೆ.

ಕೇಂದ್ರ ಸರ್ಕಾರದ ಆಘಾತಕಾರಿ ಉತ್ತರ

ಆಮದು ಸುಂಕ ಕಡಿತ ಪ್ರಸ್ತಾಪ ವಿರೋಧಿಸಿ ಇಲ್ಲಿ ನಡೆದ ಹಲವು ಹಂತದ ಚಳುವಳಿ, ಹೋರಾಟಗಳ ನಂತರ ರಾಜ್ಯ ಸರ್ಕಾರವು ಬಿಕ್ಕಟ್ಟಿನ ಪರಿಹಾರಕ್ಕೆ ಕ್ರಮವಹಿಸಲು ಕೋರಿ ಬರೆದ ಪತ್ರಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರ ಕೊಟ್ಟಿರುವ ಉತ್ತರವನ್ನು ಕೇಳಿದರೆ ಆಘಾತವಾಗುತ್ತದೆ.

"....ಕೇಂದ್ರೀಯ ರೇಷ್ಮೆ ಮಂಡಳಿಯು ರೇಷ್ಮೆ ಗೂಡು ಕೆ.ಜಿ.ಗೆ 165 ರಿಂದ 170 ರೂಪಾಯಿಗಳ ಬೆಂಬಲ ಬೆಲೆಯನ್ನು ನಿಗದಿ ಮಾಡಿದೆ. ಕೇಂದ್ರ ಸರ್ಕಾರವು ಬಜೆಟ್ಟಿನಲ್ಲಿ ಆಮದು ಸುಂಕ ಕಡಿಮೆ ಮಾಡಿದ ನಂತರ ಫೆಬ್ರವರಿ ಕೊನೆಯಲ್ಲಿ ರೇಷ್ಮೆ ಕೆ.ಜಿ.ಗೆ 300–330 ಇದ್ದದ್ದು 194 ರೂಪಾಯಿಗೆ ಕುಸಿದಿರುವುದು ನಿಜವಾದರೂ ಸಹ ಆ ನಂತರ ಮತ್ತೆ ಚೇತರಿಸಿಕೊಂಡು ಮಾರ್ಚ್ 11 ರಂದು ಬೆಲೆ ಸರಾಸರಿ 235 ರೂಪಾಯಿಯನ್ನು ತಲುಪಿದೆ...(ಹಾಗಾಗಿ ರೇಷ್ಮೆ ಬೆಲೆ ಕುಸಿದಿದ್ದರೂ ಯಾರೂ ಏನೂ ಚಿಂತಿಸಬೇಕಿಲ್ಲ. ಇಧರಲ್ಲಿ ಬಿಕ್ಕಟ್ಟು ಅನ್ನುವುದು ಏನು ಇಲ್ಲ.... ಇದು ಕೇಂದ್ರ ಸರ್ಕಾರದ ವಿವರಣೆ.) ಹೀಗೆ ಸರ್ಕಾರದ ಹೊಣೆಗೇಡಿ ವಾದ ಹರಿಯುತ್ತಾ ಸಾಗಿದೆ.

ಬೆಂಬಲ ಬೆಲೆ ನಿಗದಿಗೆ ಆಧಾರವೇನು ?

ಅಸಲಿಗೆ ಕೇಂದ್ರ ರೇಷ್ಮೆ ಮಂಡಳಿಯ ಬೆಂಬಲ ಬೆಲೆ ನಿಗದಿಗೆ ಆಧಾರವೇನು ? ಯಾವ ಓಬಿರಾಯನ ಕಾಲದಲ್ಲಿ ನಿಗದಿಯಾದ ಬೆಂಬಲ ಬೆಲೆ ಇದು. ಒಂದು ಕೆ.ಜಿ. ರೇಷ್ಮೆ ಗೂಡನ್ನು ಉತ್ಪಾದಿಸಲು ತಗಲುವ ವಾಸ್ತವಿಕ ವೆಚ್ಚವೇನು ಎಂಬ ಬಗ್ಗೆ ವ್ಯವಸ್ಥಿತವಾದ, ವಾಸ್ತವಿಕವಾದ ಆಧ್ಯಯನವೇ ನಡೆದಿಲ್ಲ. ಅಂತಹ ಯಾವ ವೈಜ್ಞಾನಿಕ ಲೆಕ್ಕಾರಗಳೇ ಸರ್ಕಾರದ ಬಳಿ ಇಲ್ಲ ಎಂಬುದು ನಿಜಕ್ಕೂ ಒಂದು ದುರಂತದ ವಿಷಯ. ಕೇಂದ್ರ ರೇಷ್ಮೆ ಮಂಡಳಿಯೋ ಮತ್ತೊಂದೋ ಯಾವುದಾದರೂ ಜವಾಬ್ದಾರಿಯುತ ಸಂಸ್ಥೆಯ ಮೂಲಕ ಸರ್ಕಾರ ಇಂಥದ್ದೊಂದು ಕರಾರುವಕ್ಕಾದ ವೆಚ್ಚದ ನಿಷ್ಕರ್ಷೆ ಮಾಡದೇ ಹಗಲು ಇರುಳು ಜೀವ ಸವೆಸಿ ರೇಷ್ಮೆ ಉತ್ಪಾದಿಸುವ ಬಡ ರೈತನ ಬೆನ್ನ ಮೇಲೆ ಬರೆ ಎಳೆಯುವುದನ್ನು ಒಪ್ಪಿಕೊಳ್ಳುವುದು ಸಾಧ್ಯವೇ ಇಲ್ಲ. ಮಾತಿಗೆ ಒಪ್ಪಿಕೊಂಡರು ಈಗ ಆ ಅಂಥಾ ನಿಕೃಷ್ಟ ಬೆಂಬಲ ಬೆಲೆಗಿಂತಲೂ ರೇಷಿಮೆ ಗೂಡಿನ ಬೆಲೆ ಕುಸಿದು ಹೋಗಿದೆಯಲ್ಲ ಯಾರು ಹೊಣೆ ಈ ಬೆಲೆ ಕುಸಿತಕ್ಕೆ ? ಮಂಡ್ಯ ಜಿಲ್ಲೆಯ ರೇಷ್ಮೆ ರೈತ ದಂಪತಿಗಳಾದ ಸ್ವಾಮಿಗೌಡ ಮತ್ತು ಹೆಂಡತಿ ಆತ್ಮಹತ್ಯೆಗೆ ಶರಣಾಗಿ ದ್ದಾದರೂ ಯಾಕೆ ?

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಚಳುವಳಿ ನಿರತ 'ಸುಂಕರಹಿತ ರೇಷ್ಮೆ ಆಮದು ವಿರೋಧಿ ಅಖಿಲ ಭಾರತ ಹೋರಾಟ ಸಮಿತಿ'ಯು ಕೆ.ಜಿ.ಗೆ ಕನಿಷ್ಟ 350 ರೂಪಾಯಿ ಬೆಂಬಲ ಬೆಲೆಯನ್ನು ನೀಡಿ ರೇಷ್ಮೆ ಗೂಡನ್ನು ಖರೀದಿಸಬೇಕೆಂದು ಆಗ್ರಹಿಸುತ್ತಿವೆ. ಅದು ರಸಗೊಬ್ಬರಗಳ ಬೆಲೆ ಹೆಚ್ಚಳ, ಕೂಲಿಯ ವೆಚ್ಚದಲ್ಲಿ ಹೆಚ್ಚಳ, ವಿದ್ಯುತ್ ತೊಂದರೆ, ನೀರಿನ ತೊಂದರೆಗಳು, ಸಾಗಾಣಿಕೆ ಸೇರಿದಂತೆ ವಿವಿಧ ಖರ್ಚು ವೆಚ್ಚಗಳಲ್ಲಿ ಆಗಿರುವ ತೀವ್ರ ಏರಿಕೆ ಇವನ್ನೆಲ್ಲಾ ಭರಿಸಿಕೊಂಡು ರೈತರು ರೇಷ್ಮೆ ಕೃಷಿ ಮಾಡುವುದೇ ಒಂದು ದೊಡ್ಡ ಸಾಹಸವಾಗಿದೆ.

ಅಕ್ರಮ ರೇಷ್ಮೆ ನುಸುಳುವಿಕೆ

ಭಾರತ ದೇಶದ ರೇಷ್ಮೆ ಮಾರುಕಟ್ಟೆಯ ಮೇಲೆ ನೆರೆಯ ನೇಪಾಳ, ಬಾಂಗ್ಲಾ ದೇಶಗಳ ಗಡಿಗಳ ಮೂಲಕವಾಗಿ ಅಕ್ರಮವಾಗಿ ಒಳ ನುಸುಳುವ ಚೀನಾ ದೇಶದ ಕಚ್ಚಾ ರೇಷ್ಮೆ ದೊಡ್ಡ ಪ್ರಮಾಣದಲ್ಲಿ ದಾಳಿ ಇಡುತ್ತಿದೆ. ಈ ಅಂಶ ನಮ್ಮ ಸರ್ಕಾರಗಳ ಲೆಕ್ಕದಲ್ಲಿಯೇ ಇಲ್ಲ. ಏನಿಲ್ಲವೆಂದರೂ ವಾರ್ಷಿಕ ಸುಮಾರು 2,000–3,000 ಮೆ.ಟನ್‌ಗಳಷ್ಟು ಕಚ್ಚಾ ರೇಷ್ಮೆ ಈ ಮಾರ್ಗವಾಗಿ ಭಾರತದ ಮಾರುಕಟ್ಟೆಗೆ ಒಳನುಗ್ಗಿ ಬರುತ್ತಿದೆ ಎನ್ನುತ್ತವೆ ಅಂದಾಜುಗಳು.

ಇದೂ ಕೂಡ ಸಮಸ್ಯೆಯ ಮೂಲ ಕಾರಣಗಳಲ್ಲಿ ಒಂದು. ಚೀನಾದ ರೇಷ್ಮೆ ಗುಣಮಟ್ಟದಲ್ಲಿ ನಮ್ಮ ದೇಶದ್ದಕ್ಕಿಂತ ಉತ್ತಮವಾದುದಾಗಿದೆ. ಆದೇ ಸಮಯಕ್ಕೇ ಅದು ಭಾರತದ ರೇಷ್ಮೆಗಿಂತಲೂ ಕಡಿಮೆ ಬೆಲೆಗೆ ದೊರೆಯುತ್ತದೆ. ಆದ್ದರಿಂದಾಗಿ ಕೇಂದ್ರ ಸರ್ಕಾರದ ಕಟ್ಟುನಿಟ್ಟಿನ ಬಿಗಿ ಕ್ರಮ ಇಲ್ಲದೇ ಹೋದರೆ ಈ ಅಕ್ರಮ ರೇಷ್ಮೆ ಸಾಗಾಣಿಕೆಯನ್ನು ತಡೆಯುವುದು ಸಾಧ್ಯವಿಲ್ಲ. ಸರ್ಕಾರ ಸಮಸ್ಯೆಯನ್ನು ಗುರುತಿಸುವುದಕ್ಕೆ ತಯಾರಿಲ್ಲದಿರುವಾಗ ಇನ್ನು ಸಮಸ್ಯೆಗೆ ಪರಿಹಾರ ನೀಡುತ್ತದೆಂಬುದು ದೂರದ ಮಾತು.

...ಥಾ ಹೊತ್ತಲ್ಲಿ ಈ ಆಮದು ಸುಂಕ ಇಳಿಕೆ ...ಬ ಪ್ರಹಾರ ರೇಷ್ಮೆ ಉದ್ದಿಮೆಯ ಮೇಲೆ ...ದೆರಗಿದೆ. ಈ ಮಟ್ಟದ ಬೆಂಬಲ ಬೆಲೆಯಿಂದ ...ಷ್ಮೆ ರೈತರಿಗೆ ಯಾವ ನ್ಯಾಯವೂ ದಕ್ಕುವುದಿಲ್ಲ. ...ದಲಿಗೆ ಅದರಿಂದ ರೈತರಿಗೆ ಬಾರಿ ದೊಡ್ಡ ...ನ್ಯಾಯವಾಗುತ್ತಿದೆ ಎಂಬುದು ನಮ್ಮ ಅಳುವ ...ನರಿಗೆ ಗೊತ್ತಿಲ್ಲ ಎಂದರೆ ಅದನ್ನು ...ಯಾರೂ ನಂಬಬಾರದು.

...ಮಸ್ಯೆಯ ತೀವ್ರತೆ

2008–09ರ ಸಾಲಿನಲ್ಲಿ ...ೇಶದಲ್ಲಿ ಆದ ಹಿಪ್ಪು ನೇರಳೆ ...ಮೂಲದ ರೇಷಿಮೆಯ ಒಟ್ಟು ...ಉತ್ಪಾದನೆ 15,610 ಮೆಟ್ರಿಕ್ ಟನ್. ...ದೇ ಸಾಲಿನಲ್ಲಿ ಕರ್ನಾಟಕದ ...ಉತ್ಪಾದನೆ 7,238 ಮೆಟ್ರಿಕ್ ಟನ್. ...009–10 ಸಾಲಿನಲ್ಲಿ ಇದು ...ಮವಾಗಿ ಒಟ್ಟು ದೇಶದ್ದು–16,315 ...ಮೆ.ಟನ್. ರಾಜ್ಯದ ಉತ್ಪಾದನೆ– ...360 ಮೆ.ಟನ್. ಅಂದರೆ ದೇಶದ ...ಒಟ್ಟು ಉತ್ಪಾದನೆಯಲ್ಲಿ ಶೇ. 45 ...ಕ್ಕಿಂತಲೂ ಹೆಚ್ಚು ಪಾಲು.

ಕರ್ನಾಟಕ ರಾಜ್ಯದಲ್ಲಿ 1,41,528 ...ಕೃತ ಕುಟುಂಬಗಳು ನೇರವಾಗಿ ರೇಷಿಮೆ ...ಕೃಷಿಯಲ್ಲಿ ತೊಡಗಿವೆ. 83,098 ಹೆಕ್ಟೇರ್ ಪ್ರದೇಶದಲ್ಲಿ ರೇಷಿಮೆ ಕೃಷಿ ನಡೆಯುತ್ತಿದೆ ಎಂದು ...ಸರ್ಕಾರದ ಅಂಕಿ ಸಂಖ್ಯೆಗಳೇ ಹೇಳುತ್ತಿವೆ.

ರೇಷಿಮೆ ಕೃಷಿಯ ಮೇಲೆ ಅವಲಂಬಿಸಿರುವ ...ಕೃಷಿ ಕೂಲಿಕಾರರು, ರೇಷ್ಮೆ ಮೊಟ್ಟೆ ...ಉತ್ಪಾದಕರು, ರೀಲರುಗಳು, ಕಾರ್ಮಿಕರು, ...ನೇಕಾರರು, ಚಾಕಿ ಕೇಂದ್ರಗಳ ಮಾಲಿಕರು, ...ವ್ಯಾಪಾರಸ್ಥರು... ಹೀಗೆ ವಿವಿಧ ವಿಭಾಗದ ಜನರ ...ಪ್ರಮಾಣವನ್ನು ನೋಡಿದರೆ ಇದು ಒಂದು ...ಬೃಹತ್ ಉದ್ದಿಮೆ. ಯಂತ್ರೋಪಕರಣಗಳು ...ಸಾಕಷ್ಟು ಉದ್ಯೋಗಾವಕಾಶಗಳನ್ನು ನುಂಗಿ ...ಹಾಕುವ ಇತರ ಉದ್ದಿಮೆಗಳಿಗಿಂತ ಭಿನ್ನವಾಗಿ ...ಇಲ್ಲಿ ಮನುಷ್ಯನ ದುಡಿಮೆಗೆ, ಅಂದರೆ ಅತಿ ...ಹೆಚ್ಚು ಉದ್ಯೋಗಗಳ ಸೃಷ್ಟಿಗೆ ಅವಕಾಶವಿದೆ.

ಹೀಗಾಗಿ ವ್ಯಾಪಕ ಬೆಳವಣಿಗೆಯ ಅವಕಾಶಗಳನ್ನು, ಇನ್ನಷ್ಟು ವ್ಯಾಪಕ ಉದ್ಯೋಗಾವಕಾಶದ ಸಾಧ್ಯತೆಗಳನ್ನು ಒಡಲಲ್ಲಿ ಇಟ್ಟುಕೊಂಡಿರುವ ಕ್ಷೇತ್ರ ರೇಷ್ಮೆ ಉದ್ದಿಮೆ.

ಆದರೆ ಕೇಂದ್ರ ಸರ್ಕಾರದ ಸುಂಕ ನೀತಿ ಉದ್ದಿಮೆಗೆ ಈಗ ಮಾರಣಾಂತಿಕ ಪೆಟ್ಟು ನೀಡಿದೆ.



ಚೀನಾದ ಆಮದು ರೇಷ್ಮೆಗೆ ವಿಧಿಸುತ್ತಿದ್ದ ಸುಂಕದಲ್ಲಿ ಏಕಾಏಕಿ ಸು.ಶೇ. 26 ರಷ್ಟು ಕಡಿತ ಮಾಡಿದೆ. ಇದಕ್ಕೆ ಕೇಂದ್ರ ಸರ್ಕಾರ ಕೊಡುವ ಕಾರಣವೇನು ? '...ಕಚ್ಚಾ ರೇಷ್ಮೆಯ ಆಮದಿನ ಮೇಲೆ ಹಾಕುವ ಸುಂಕ ಹಾಗೂ ಸಿದ್ದ ರೇಷಿಮೆ ಉತ್ಪನ್ನಗಳ ರಪ್ತಿನ ಮೇಲೆ ಹಾಕಲಾಗುವ ತೆರಿಗೆಗಳ ನಡುವೆ ಬಾರಿ ಅಸಮಾನತೆ ಇದೆ. ಈ ಬಾರಿ ಅಂತರವನ್ನು ಕಡಿಮೆ ಮಾಡಿ ಸಮಾನತೆ ತರಬೇಕಿದೆ. ಆದ್ದರಿಂದ ಈ ರೀತಿಯಲ್ಲಿ ಆಮದು ಸುಂಕವನ್ನು ಕಡಿತ ಮಾಡಲಾಗಿದೆ....' ಇದು ಸರ್ಕಾರದ ವಾದ. ತೆರಿಗೆಗಳ ನಡುವೆ ಅಸಮಾನತೆಯಿದೆ. ನಿಜ, ಇದು ಸರಿಯಲ್ಲ ಎಂಬುದು ನಿಜ. ಆದರೆ ನಮ್ಮ ಪ್ರಶ್ನೆ. ಈ ಅಸಮಾನತೆಯನ್ನು ತೆಗೆಯಲು ರೇಷ್ಮೆ ಆಮದು ಮೇಲಿದ್ದ ಶೇ.31 ರಷ್ಟು ತೆರಿಗೆಯನ್ನು ಉಳಿಸಿಕೊಂಡು, ಆಮದಾಗುತ್ತಿರುವ ರೇಷ್ಮೆ ಸಿದ್ದ ಉಡುಪುಗಳ ಮೇಲಿನ ತೆರಿಗೆಯನ್ನು ಶೇ.11 ರಿಂದ ಶೇ.40ಕ್ಕೆ ಏರಿಸಬಹುದಾಗಿತ್ತಲ್ಲ. ಇದರಿಂದ

1. ರೇಷ್ಮೆ ಬೆಳೆಗಾರರ ಗೂಡಿನ ದರಗಳು ಕುಸಿತ ಉಂಟಾಗುತ್ತಿರಲಿಲ್ಲ. 2. ಸಿದ್ಧ ಉಡುಪುಗಳ ಮೇಲಿನ ಆಮದು ಸುಂಕವನ್ನು ಶೇ.40ಕ್ಕೆ ಏರಿಸಲು ಸಾಧ್ಯವಾಗಿದ್ದರೆ, ವಿದೇಶಗಳಿಂದ ಈಗ ಸದ್ಯ ಆಮದಾಗುತ್ತಿರುವ ಸುಮಾರು 3265 ಲಕ್ಷ ಮೀಟರ್ ಬಟ್ಟೆಯ ಆಮದು ನಿಯಂತ್ರಿಸಬಹುದಾಗಿತ್ತು. ಇದು ಸಾಧ್ಯವಾಗಿದ್ದರೆ ದೇಶೀಯ ಬಟ್ಟೆ ಉತ್ಪಾದನೆಗೆ ಸಹಾಯವಾಗುತ್ತಿತ್ತು. ಇವರಿಂದ ಲಕ್ಷಾಂತರ ಕುಟುಂಬಗಳಿಗೆ ಉದ್ಯೋಗ ಸಿಗುತ್ತಿತ್ತು. ಇವಲ್ಲವೇ ಸುಂಕ ಹೆಚ್ಚಳದಿಂದ ಹೆಚ್ಚಿನ ತೆರಿಗೆಯಾದರೂ ಸಂಗ್ರಹವಾಗುತ್ತಿತ್ತು.

ನಾವುಗಳು ಇಂತಹ ವಾದ ಮಾಡಿದರೆ, ಅದಕ್ಕೆ ಕೇಂದ್ರ ಸರ್ಕಾರದ ವಾದ:

ಕಚ್ಚಾ ರೇಷ್ಮೆ ಕೆ.ಜಿ. ಬೆಲೆ 2600–2700ರೂ. ದಾಟಿದರೆ, ನೇಕಾರರಿಗೆ ಕಷ್ಟವಾಗುತ್ತದೆ. ಅದರಿಂದ ಬೆಲೆಯನ್ನು ನಿಯಂತ್ರಿಸಲು ಆಮದು ಸುಂಕವನ್ನು ಶೇ.31 ರಿಂದ 5ಕ್ಕೆ ಇಳಿಸಲಾಯಿತು ಎಂದು ಉತ್ತರ ಸಿಗುತ್ತದೆ.

ಈ ಉತ್ತರದ ಸತ್ಯಾಸತ್ಯತೆಯನ್ನು ಹುಡುಕಿಕೊಂಡು ಹೋದರೆ ಸಿಗುವ ಅಂಕಿ ಅಂಶಗಳು ಈ ವಾದದಲ್ಲಿಯೂ ಹುರುಳಿಲ್ಲ ಎಂಬ ವಾಸ್ತವತೆ ತಿಳಿಯುತ್ತದೆ. ಏಕೆಂದರೆ ಫೆಬ್ರವರಿ 28,2011ರಂದು ಬಜೆಟ್ ಮೂಲಕ ಸುಂಕ ಕಡಿತದ ಘೋಷಣೆಯನ್ನು ಮಾಡಿದ್ದು, ಈ ಘೋಷಣೆಯ ನಂತರದಲ್ಲಿ ಈತನಕ ಸಂಕಷ್ಟದಲ್ಲಿ ಇರುವ ನೇಕಾರರನ್ನು ರಕ್ಷಿಸಲು ಕಡಿಮೆ ದರದ ರೇಷ್ಮೆ ಆಮದು ಆದದ್ದು ಎಷ್ಟು? ಸರ್ಕಾರದ ಲೆಕ್ಕಗಳ ಪ್ರಕಾರವೇ ಕೇವಲ 1800 ಮೆ.ಟನ್. ಅಂದರೆ ತುಂಬಾ ದೊಡ್ಡ ರೀತಿಯಲ್ಲಿ ರೇಷ್ಮೆ ಆಮದಾಗಿಲ್ಲ. ಮಾತ್ರವಲ್ಲ ಆಮದಾಗುತ್ತಿರುವ ಕೇವಲ ಶೇ. 5 ಸುಂಕದ ಚೀನಾ ರೇಷ್ಮೆಯ ಬೆಲೆ ಕೆ.ಜಿ. ಸುಮಾರು 2,500 ರೂ ಇದೆ. ಇದು ದೇಶಿಯ ರೇಷ್ಮೆಗಿಂತ ಕೇವಲ 500–600 ರೂ. ನಷ್ಟು ಮಾತ್ರವೇ ಕಡಿಮೆ. ಹೀಗಾಗಿ ಸಂಕಷ್ಟದಲ್ಲಿರುವ ನೇಕಾರರಿಗೂ ಇದರಿಂದ ಸಹಾಯವಾಗಿರಲಿಕ್ಕೆ ಸಾಧ್ಯವಿಲ್ಲ. ಆದರೆ ಸುಂಕ ಕಡಿತ, ಬೆಲೆಗಳಲ್ಲಿನ ಏರುಪೇರು ರೇಷ್ಮೆ ಬೆಳೆಗಾರರನ್ನು ತೀವ್ರತರ ಸಂಕಷ್ಟಕ್ಕೆ ತಳ್ಳಿದೆ. ರೇಷ್ಮೆ ಬೆಳೆಯ ವಿಸ್ತರಣೆಯ ಬಗ್ಗೆ ಯೋಚನೆ ಮಾಡುತ್ತಿದ್ದ ರೈತ, ರೇಷ್ಮೆ ಬೆಳೆಯನ್ನು ತೆಗೆದು ಹಾಕುವ ಬಗ್ಗೆ ಚಿಂತಿಸುತ್ತಿದ್ದಾನೆ.

'ಕೊರತೆ ನೀಗಿಸಲು ಆಮದು' ಎಂಬ ಪೊಳ್ಳು ವಾದ

ದೇಶದಲ್ಲಿ ಅಗತ್ಯವಾದಷ್ಟು ಪ್ರಮಾಣದಲ್ಲಿ

ಪುಟ 10 ಕ್ಕೆ

ರಾಜ್ಯ ಸರ್ಕಾರ ಕನಿಷ್ಠ ಏನು ಮಾಡಬೇಕಾಗಿತ್ತು!

ದೇಶದ ಶೇ.50ರಷ್ಟು ರೇಷ್ಮೆ ಉತ್ಪಾದನೆ ಮಾಡುವ ರಾಜ್ಯದ ಲಕ್ಷಾಂತರ ರೈತರು ತೀವ್ರತರ ಸಂಕಷ್ಟದಲ್ಲಿ ಇರುವ ಬಗ್ಗೆ ಏನನ್ನು ಮಾಡದೇ ಕಾಲಹರಣ ಮಾಡುತ್ತಿದೆ ಬಿಜೆಪಿ ರಾಜ್ಯ ಸರ್ಕಾರ. ಈ ಬಗ್ಗೆ ಎಷ್ಟು ಹೇಳಿದರೂ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪ ಕಿವಿಗೇ ಹಾಕಿಕೊಳ್ಳುತ್ತಿಲ್ಲವೆಂದು ಸ್ವತಃ ರೇಷ್ಮೆ ಮಂತ್ರಿಗಳೇ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಇವರು ಬಜೆಟ್‌ನಲ್ಲಿ ತೆಗೆದುಕೊಡುವುದು ಏನು ಬೇಕಾಗಿಲ್ಲ. ಏಕೆಂದರೆ ರೇಷ್ಮೆ ಬೆಳೆಗಾರರು, ತಮ್ಮ ಗೂಡುಗಳನ್ನು ಸರ್ಕಾರಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವ ಪ್ರತಿಬಾರಿಯು ಶೇ.1 ರಷ್ಟು ಶುಲ್ಕವನ್ನು ರಾಜ್ಯ ಸರ್ಕಾರಕ್ಕೂ ಪಾವತಿಸುತ್ತಾರೆ. ಇದು ವಾಸ್ತವವಾಗಿ ಮೊದಲು, ರೈತರು ಸಂಕಷ್ಟಕ್ಕೆ ಸಿಲುಕಿದಾಗ, ನೆರವನ್ನು ನೀಡಲು ಹಿಂದಿನ ಸರ್ಕಾರಗಳು ರೂಪಿಸಿದ್ದ 'ಬೆಲೆ ನಿಯಂತ್ರಣ ನಿಧಿ'(PSF) ಹೀಗಾಗಿ ವಸೂಲಿಯಾದ ಸುಮಾರು 300 ಕೋಟಿ ರೂ.ಗಳು 'ರಾಜ್ಯ ಸರ್ಕಾರ ಬೇರೆಯದಕ್ಕಾಗಿ ಖರ್ಚು ಮಾಡಿಕೊಂಡಿದೆ. ಇದನ್ನಾದರೂ ಖರ್ಚು ಮಾಡಿ ಈ ಹಿಂದೆ ರಾಜ್ಯ ಸರ್ಕಾರ ಇಂತಹ ಸಂದರ್ಭದಲ್ಲಿ ನೀಡಿದಂತೆ, ಪ್ರೋತ್ಸಾಹ ನಿಧಿಯನ್ನು ಕೆ.ಜಿ. ಗೂಡಿನ ಮೇಲೆ ನೀಡಿ ಎಂದರೆ, ಇದನ್ನೂ ಮಾಡುತ್ತಿಲ್ಲ. ಹೀಗೆ ಸಂಕಷ್ಟದಲ್ಲಿರುವ ರೈತರ ಕಷ್ಟಕ್ಕೆ ಕನಿಷ್ಠ ಸ್ಪಂದನೆಯನ್ನು ನೀಡಲು ಯೋಚಿಸುತ್ತಿಲ್ಲ. ಈ ನಿರ್ಲಕ್ಷ್ಯತೆಯನ್ನು ಬಿಟ್ಟು ತಕ್ಷಣ ಕೆ.ಜಿ. ಗೂಡಿಗೆ ರೂ. 50.00 ರಿಂದ ರೂ.100.00 ನೀಡಬೇಕಿದೆ.

ಶಾಶ್ವತ ಪರಿಹಾರದ ದಾರಿ

ಆಮದು ಕಚ್ಚಾ ರೇಷ್ಮೆಯ ಮೇಲೆ ಮೊದಲಿನಂತೆ ಶೇ. 31 ರಷ್ಟು ಸುಂಕ ವಿಧಿಸುವುದು. ಚೀನಾ ಮೂಲದ ಕಚ್ಚಾ ರೇಷಿಮೆಯ ಸಕ್ರಮ ಸಾಗಾಣಿಕೆ ಅಂದರೆ ಸ್ಮಗಲಿಂಗ್ ಅನ್ನು ತಪ್ಪಿಸಲು ಬಿಗಿ ಕ್ರಮ ವಹಿಸುವುದು. ರೇಷ್ಮೆ ಗೂಡಿಗೆ ಕೆ.ಜಿ.ಗೆ 350 ರೂಪಾಯಿ ಬೆಂಬಲ ನೀಡುವುದು ಮುಂತಾದ ಕ್ರಮಗಳನ್ನು ಚಳುವಳಿ ಆಗ್ರಹಿಸುತ್ತಿದೆ. ಸದ್ಯದ ಸಂದರ್ಭದ ತುರ್ತು ಬೇಡಿಕೆಗಳು. ಆದರೆ ರೇಷ್ಮೆ ಉದ್ದಿಮೆಯನ್ನು ಬಾಧಿಸುತ್ತಿರುವ ಸಮಸ್ಯೆಗಳಿಗೆ ಸಮಗ್ರ ಪರಿಹಾರ ರೂಪಿಸುವುದು. ರೇಷ್ಮೆ ಉದ್ದಿಮೆಯು ಸರ್ವಾಂಗೀಣವಾಗಿ ಅಭಿವೃದ್ಧಿ ಸಾಧಿಸಲು ಹಲವು ದೂರಗಾಮಿ ಕ್ರಮಗಳು ಅಗತ್ಯವಾಗಿದೆ.

ವೈಜ್ಞಾನಿಕ ಸಂಶೋಧನೆಗಳು

ಉತ್ತಮ ಹಿಪ್ಪು ನೇರಳೆ ತಳಿಯ ಅಭಿವೃದ್ಧಿ, ಮೊಟ್ಟೆ ಉತ್ಪಾದನೆ, ಹುಳು ಸಾಕಾಣಿಕೆ, ತೋಟ, ಮನೆಗಳ ನಿರ್ವಹಣೆ, ರೋಗಗಳ ನಿಯಂತ್ರಣ, ನಿವಾರಣೆ, ರೇಷ್ಮೆ ಸಂಸ್ಕರಣೆಯ ಹಾಗೂ ನೇಯ್ಗೆಯ ವಿವಿಧ ಪ್ರಶ್ನೆಗಳಲ್ಲಿ ಎಷ್ಟೋ ಹೊಸ ಹೊಸ ಅವಿಷ್ಕಾರ, ಸಂಶೋಧನೆಗಳಿಗೆ ಅವಕಾಶಗಳಿವೆ. ಚೀನಾ ದೇಶ ಅಂತಹ ಗಮನ ಮತ್ತು ಆದ್ಯತೆ ಕೊಟ್ಟಿರುವ ಕಾರಣದಿಂದಲೇ ಚೀನಾದ ರೇಷಿಮೆ ಗುಣಮಟ್ಟದಲ್ಲಿ ಉತ್ತಮ, ಬೆಲೆಯೂ ಅಗ್ಗ. ಭಾರತ ದೇಶದ ಪರಿಸರ, ಅಗತ್ಯಗಳಿಗೆ ತಕ್ಕಂತಹ ತಳಿಗಳ ಅಭಿವೃದ್ಧಿ ಮಾಡುವಲ್ಲಿ ವ್ಯಾಪಕವಾದ ಅವಕಾಶವಿದೆ.

ಒಂದು ಕಡೆ ಅಪಾರವಾದ ಮಾನವ ಸಂಪತ್ತು, ಮತ್ತೊಂದೆಡೆ ವ್ಯಾಪಕವಾದ ನಿರುದ್ಯೋಗ ತಾಂಡವ ಇರುವ ಭಾರತದಲ್ಲಿ ರೇಷ್ಮೆ ಉದ್ದಿಮೆಯು ಬೆಳವಣಿಗೆಗೆ ವ್ಯಾಪಕವಾದ ಅವಕಾಶಗಳಿವೆ. ಜಾಗತಿಕವಾಗಿ ರೇಷಿಮೆಗೆ ಬೇಡಿಕೆ ದಿನೇ ದಿನೇ ಬೆಳೆಯುತ್ತಲೇ ಇದ್ದು ಉತ್ತಮ ಗುಣಮಟ್ಟದ ರೇಷಿಮೆ ಉತ್ಪಾದನೆಯ ಮೂಲಕ ಜಗತ್ತಿನ ಒಂದು ಪ್ರಮುಖ ರೇಷ್ಮೆ ಉತ್ಪಾದಕ ದೇಶವಾಗಿ ಹೊಮ್ಮಲು ಅವಕಾಶ ಇಲ್ಲವೆಂದೇನೂ ಇಲ್ಲ. ಅದಕ್ಕೆ ಬೇಕಾದದ್ದು ಜನಪರ ಅಭಿವೃದ್ಧಿಯ ಕಣ್ಣೋಟ. ವೈಜ್ಞಾನಿಕ ದೃಷ್ಟಿಕೋನ.

ಅದು ನಮ್ಮ ಆಳುವ ಜನರಲ್ಲಿ ಇಲ್ಲ ಎಂಬುದು ಪದೇ ಪದೇ ಸಾಬಿತಾಗುತ್ತಾ ಬರುತ್ತಿದೆ. ಆಳುವ ಜನ, ಆಳುವ ಸರ್ಕಾರಗಳು ತಮ್ಮ ಕರ್ತವ್ಯದ ಭಾಗವಾಗಿ ನಿರ್ವಹಿಸಿಬೇಕಾದ ಹೊಣೆಗಾರಿಕೆಗಳನ್ನು ನಿರ್ವಹಿಸದೇ ಹೋದಾಗ ಜನತೆ ಚಳುವಳಿ, ಹೋರಾಟದ ಒತ್ತಡ–ಚಾಟಿ ಏಟುಗಳ ಮೂಲಕವಾದರೂ ಆಗಬೇಕಾದದ್ದನ್ನು ಸಾಧಿಸಬೇಕಿದೆ.

ರೇಷಿಮೆ ಉದ್ದಿಮೆ....

ಪುಟ 9 ರಿಂದ

ರೇಷ್ಮೆ ಉತ್ಪಾದನೆ ಆಗುತ್ತಿಲ್ಲ. ಲಕ್ಷಾಂತರ ಕುಟುಂಬಗಳು ಅವಲಂಬಿಸಿರುವ ಇಲ್ಲಿಯ ರೇಷ್ಮೆ ಮಾರುಕಟ್ಟೆ, ರೇಷ್ಮೆ ಉದ್ದಿಮೆ ಉಳಿಯಬೇಕಾದರೆ ವಿದೇಶದ ರೇಷ್ಮೆ ಆಮದಿಗೆ ಅವಕಾಶ ನೀಡಲೇ ಬೇಕು. ಸುಂಕ ನೀತಿಯು ಅದಕ್ಕೆ ಪ್ರೋತ್ಸಾಹಕವಾಗಿರ ಬೇಕು ಎಂಬುದು ಸರ್ಕಾರದ ವಾದ. ಸರ್ಕಾರದ ಈ ವಾದಕ್ಕೆ ಆಧಾರವೇನು ಎಂದರೆ ಸಿದ್ದ ಅಂಕಿ ಸಂಖ್ಯೆಗಳನ್ನು ಸರ್ಕಾರ ನಮ್ಮ ಮುಂದೆ ಗುಡ್ಡೆ ಹಾಕುತ್ತದೆ.

"....ದೇಶದಲ್ಲಿ ಸದ್ಯಕ್ಕೆ ಕಚ್ಚಾ ರೇಷ್ಮೆಗೆ ಇರುವ ವಾರ್ಷಿಕ ಬೇಡಿಕೆಯ ಪ್ರಮಾಣ. 30,000 ಮೆ.ಟನ್. ಆದರೆ ನಮ್ಮ ದೇಶದಲ್ಲಿ ಆಗುತ್ತಿರುವ ಉತ್ಪಾದನೆ 20,000 ಮೆ. ಟನ್‌ಗಿಂತಲೂ ಕಡಿಮೆ. 10.000 ಮೆ.ಟನ್‌ಗಳಿಂತಲೂ ಹೆಚ್ಚು ಕಚ್ಚಾ ರೇಷ್ಮೆ ಕೊರತೆ ಬೀಳುತ್ತದೆ. ಕೊರತೆ ಬೀಳುವ ರೇಷ್ಮೆಯನ್ನು ಮುಖ್ಯವಾಗಿ ಚೀನಾದಿಂದ ಆಮದು ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ. ಸಾಕಷ್ಟು ರೇಷ್ಮೆ ವಿದೇಶದಿಂದ ದೇಶಕ್ಕೆ ಬರದೇ ಹೋದರೆ ದೇಶೀಯ ರೇಷ್ಮೆ ಉದ್ದಿಮೆಯಲ್ಲಿ ಹಾಹಾಕಾರವೇಳುತ್ತದೆ. ಉದ್ದಿಮೆ ತೀವ್ರ ಬಿಕ್ಕಟ್ಟಿಗೆ ಸಿಲುಕುತ್ತದೆ...." ಇದು ಸರ್ಕಾರದ ವಾದ.

ಸರ್ಕಾರದ ವಾದ, ಕೊಡುವ ಅಂಕಿ ಸಂಖ್ಯೆಗಳನ್ನು ಒಮ್ಮೆ ಸರಿಯಾಗಿ ಪರಿಶೀಲಿಸಿದರೆ ಸಾಕು. ವಿಚಾರ ಸ್ಪಷ್ಟವಾಗಿ ಹೋಗುತ್ತದೆ.

ಸರ್ಕಾರದ ಅಧಿಕೃತ ಅಂಕಿ ಸಂಖ್ಯೆಗಳ ಆಧಾರದಲ್ಲೆ ವಿವೇಚಿಸೋಣ.

2003-04 ರ ಸಾಲು ಕಳೆದ ಹತ್ತು ವರ್ಷಗಳಲ್ಲೆ ಅತಿ ಕಡಿಮೆ ದೇಶಿಯ ರೇಷ್ಮೆ ಉತ್ಪಾದನೆ ಕಂಡಿರುವ ವರ್ಷ. 13,970 ಮೆ.ಟನ್ ಕಚ್ಚಾ ರೇಷ್ಮೆ ಆ ವರ್ಷ ಉತ್ಪಾದನೆಯಾಗಿದೆ. ಆ ವರ್ಷ ವಿದೇಶದಿಂದ 9,258 ಮೆ.ಟನ್ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗಿದೆ. ಅಂದರೆ ಒಟ್ಟಾರೆ 23,228 ಮೆ. ಟನ್. 2009-10 ರ ಸಾಲಿನಲ್ಲಿ ದೇಶಿಯ ಕಚ್ಚಾ ರೇಷ್ಮೆ ಉತ್ಪಾದನೆ 16,515 ಮೆ.ಟನ್. ಆಮದು 7,341 ಮೆ.ಟನ್. ಇದು ಕಳೆದ ಹತ್ತು ವರ್ಷಗಳಲ್ಲೇ ಅತಿ ಕಡಿಮೆ ಪ್ರಮಾಣದಲ್ಲಿ ಕಚ್ಚಾ ರೇಷ್ಮೆ ಆಮದು ಮಾಡಿಕೊಳ್ಳಲಾದ ವರ್ಷ. ಅಂದರೆ ಒಟ್ಟಾರೆ 23,856 ಮೆ.ಟನ್. ಇಲ್ಲಿ ಮುಖ್ಯವಾಗಿ ಕೆಲವು ವಿಷಯಗಳನ್ನು ಗಮನಿಸಬೇಕು. ದೇಶಿಯ ಉತ್ಪಾದನೆ, ಆಮದು ಹಾಗೂ ಕಳ್ಳ ಸಾಗಾಣಿಕೆಯ ಮೂಲಕ ಬರುತ್ತಿರುವ ಸುಮಾರು 2000-3000 ಮೆ.ಟನ್ ಕಚ್ಚಾ ರೇಷ್ಮೆ ಒಟ್ಟು ಸೇರಿದರೂ 25,000 ಮೆ.ಟನ್‌ಗಿಂತ ಕಡಿಮೆ ರೇಷ್ಮೆ ಬಳಕೆಯಾಗುತ್ತಿದೆ.



ಕೋಲಾರ- ಬಿಕೋ ಎನ್ನುವ ಬಸ್ ನಿಲ್ದಾಣ

ಹೀಗಾಗಿ ನಮ್ಮ ದೇಶದ 30,000 ಮೆ.ಟನ್ ಬೇಡಿಕೆ ಎನ್ನಲಾಗುತ್ತಿರುವ ಪ್ರಮಾಣಕ್ಕಿಂತ ಇದು ತುಂಬಾ ಕಡಿಮೆ ಇದೆ. ಅಂದರೆ ಚೀನಾ ದೇಶದ ಕಚ್ಚಾ ರೇಷ್ಮೆ ಭಾರತಕ್ಕೆ ಬರಲು ಬೇಕಾದ ಪ್ರೋತ್ಸಾಹಕ ವಾತಾವರಣ ಸೃಷ್ಟಿಸುವುದು ಹಾಗೂ ಸುಂಕ ಕಡಿತ ಇವೆಲ್ಲಾ ಅಗತ್ಯವಾಗಿ ಬೇಕಾದ ಕ್ರಮಗಳೇನೂ ಅಲ್ಲ. ಇಲ್ಲಿ ಗಮನಿಸಿ ಬೇಕಾದ ಮತ್ತೆರಡು ಮುಖ್ಯ ವಿಚಾರಗಳಿವೆ.

ಒಂದು, ದೇಶದ ಕಚ್ಚಾ ರೇಷ್ಮೆಯ ಅಗತ್ಯ 30,000 ಮೆ.ಟನ್ ಎಂಬ ವಾದವೇ ಮೊದಲಿಗೆ ಸುಳ್ಳು ಎಂಬುದು. ಎರಡನೆಯ ಅಂಶ ಭಾರತ ದೇಶದ ರೇಷ್ಮೆ ಮಾರುಕಟ್ಟೆಗೆ ವಾರ್ಷಿಕ ಸು. 2000-3000 ಮೆ.ಟನ್‌ಗಳಷ್ಟು ಚೀನಾ ದೇಶದ ಕಚ್ಚಾ ರೇಷ್ಮೆ ಅಕ್ರಮವಾಗಿ ಕಳ್ಳ ಸಾಗಾಣಿಕೆಯ ಮೂಲಕ ಹರಿದು ಬರುತ್ತಿದೆ ಎಂಬ ವಿಷಯವನ್ನು ಇಲ್ಲಿ ಪರಿಗಣಿಸಿಯೇ ಇಲ್ಲ ಎಂಬುದು.

ಶೇ. 31 ರಿಂದ 5 ಕ್ಕೆ ಸುಂಕ ಇಳಿಕೆಯ ನಂತರವೂ ಚೀನಾ ರೇಷ್ಮೆ ದರ, ದೇಶಿಯ ರೇಷ್ಮೆಗಿಂತ ಹೆಚ್ಚು ಮತ್ತು ಆಮದಾಗಿರುವುದು ತೀರ ಕಡಿಮೆ.

ಹೀಗಾಗಿ ರೇಷ್ಮೆ ಗೂಡಿನ ದರ ಕುಸಿತಕ್ಕೂ, ಸುಂಕ ಕಡಿತಕ್ಕೂ ಸಂಬಂಧವಿಲ್ಲ ಎನ್ನುವ ವಾದ ಮಂಡಿಸಲಾಗುತ್ತಿದೆ. ಇದಕ್ಕೆ ಕಾರಣ ವಾಸ್ತವವಲ್ಲದ ಬೇಡಿಕೆ, ಅಂಕೆಸಂಖ್ಯೆ, ಆಧಾರ ಕಾರಣ. 30,000 ಬೇಡಿಕೆ, 20,000 ಉತ್ಪಾದನೆ ಕೊರತೆ, 10,000 ಹೆಚ್ಚು 'ಆಮದು' ಮಾಡಿಕೊಳ್ಳಬೇಕೆನ್ನುವ 'ಲಾಬಿ' ಪರವಾದ ಅಂಕೆ ಸಂಖ್ಯೆಗಳು. ದುರುದೃಷ್ಟವೆಂದರೆ ಕೇಂದ್ರ ಸರ್ಕಾರವಾಗಲಿ, ಶೇ. 50 ರಷ್ಟು ರೇಷ್ಮೆ ಉತ್ಪಾದನೆ ಮಾಡುವ ರಾಜ್ಯದ ಪರವಾಗಿ, ರಾಜ್ಯ ಸರ್ಕಾರವಾಗಲಿ ಬೇಡಿಕೆ, ಉತ್ಪಾದನೆ ಕೊರತೆ ಇತ್ಯಾದಿಗಳ ಬಗ್ಗೆ 'ಖಚಿತ' ವೈಜ್ಞಾನಿಕ ಅಂಕಿಸಂಖ್ಯೆಗಳು ಸಂಗ್ರಹಮಾಡದಿರುವುದು.

ಹೀಗಾಗಿ, ಕೋಟ್ಯಾಂತರ ರೂಗಳ ಲಾಭವನ್ನು ಮಾಡುತ್ತಿರುವ 'ವ್ಯಾಪಾಸ್ಥರ ಪರ ಲಾಬಿ'ಯ ಲೆಕ್ಕಾಚಾರಗಳನ್ನು ತಿರಸ್ಕರಿಸಬೇಕಿದೆ. ವಾಸ್ತವವಲ್ಲದ ಅಂಕೆ ಸಂಖ್ಯೆಗಳನ್ನು ಮುಂದೆ ಮಾಡಿ, ಅಗತ್ಯಕ್ಕಿಂತ ಹೆಚ್ಚಿನ 'ಆಮದು' ಮಾಡಿಕೊಂಡು, ದೇಶಿಯ ಉತ್ಪಾದನೆಗೆ ಸಹಾಯಕವಾಗುವ ಬದಲಿಗೆ, ಅನಾನೂಕಲ ವಾಗುವ ಸ್ಥಿತಿಯನ್ನು ನಿರ್ಮಾಣ ಮಾಡಲಾಗುತ್ತಿದೆ. ಈ ಬಗ್ಗೆ ಸರ್ಕಾರಗಳು, ವಿಶೇಷವಾಗಿ ರೈತರು, ರೈತ ಸಂಘಟನೆಗಳು ಎಚ್ಚರಗೊಳ್ಳಬೇಕಿದೆ.

2010 ರಲ್ಲಿ ರೇಷ್ಮೆ ಗೂಡಿನ ಬೆಲೆಗೆ ಕಿಲೋಗೆ 312 ರೂಗಳಿದ್ದಾಗ ಗಾರ್ಡೆನಿಯಾ ಸಿಲ್ಕ್ ಮಿಲ್ಸ್ ಕಂಪನಿ ಒಂದು ತ್ರೈ ಮಾಸಿಕದಲ್ಲಿ ಶೇ. 236 ಲಾಭ ಗಳಿಸಿದರೆ, ಸಿಯಾರಾಂ ಸಿಲ್ಕ್ ಮಿಲ್ಸ್ ಶೇ. 216 ಲಾಭ ಗಳಿಸಿದೆ.

ದೊಡ್ಡ ಕುಳಗಳ ಸೂಪರ್ ಲಾಭಕ್ಕಾಗಿ

ನಮ್ಮ ದೇಶದ ರೇಷ್ಮೆ ಉದ್ದಿಮೆ ಒಂದು ರೀತಿಯ ಪಿರಿಮಿಡ್ಡಿನ ಸ್ವರೂಪದಲ್ಲಿದೆ. ಇದರಲ್ಲಿ ವಿವಿಧ ಸ್ಥರಗಳಲ್ಲಿ ವಿವಿಧ ವೃತ್ತಿ ಕೌಶಲ್ಯಗಳ ಜನರು ವಿವಿಧ ಪ್ರಮಾಣಗಳಲ್ಲಿ ಹರಡಿಕೊಂಡಿದ್ದಾರೆ.

ಪಿರಿಮಿಡ್ಡಿನ ತಳದಲ್ಲಿ ರೇಷ್ಮೆ ಬೆಳೆಗಾರ ರೈತರು, ಕೃಷಿಕೂಲಿಕಾರರು. ಆನಂತರದ ಹಂತದಲ್ಲಿ ರೀಲರುಗಳು, ಅದರ ಮೇಲೆ ಕಾರ್ಮಿಕರು, ಅದರ ಮೇಲೆ ನೇಕಾರರು. ಈ ಪಿರಿಮಿಡ್ಡಿನೊಳಗಿನ ಶೇ. 90 ಭಾಗದ ಜನ ವಿವಿಧ ರೀತಿಯಲ್ಲಿ ತಮ್ಮ ಪರಿಣತಿ, ಹಾಗೂ ಶ್ರಮವನ್ನು ತೊಡಗಿಸಿ ದುಡಿಯುವ ಶ್ರಮ ಜೀವಿಗಳಾಗಿದ್ದಾರೆ. ಒಂದಷ್ಟು ಭಾಗದ ಜನರು ಸಣ್ಣ ವ್ಯಾಪಾರಿಗಳಾಗಿದ್ದಾರೆ. ಉಳಿದ ಶೇ. 10 ಜನರು ಎಂದರೆ ಅವರು ದೊಡ್ಡ ಜನಗಳು. ಇಡೀ ರೇಷ್ಮೆ ಉದ್ದಿಮೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಆಳ ಬಯಸುವ ಭಾರಿ ಕುಳಗಳು. ಇಡೀ ದೇಶಕ್ಕೆ ಇಂತಹ ಕುಳಗಳ ಸಂಖ್ಯೆ 15-20 ಇರಬಹುದು. ಗಾರ್ಡನ್ ಸಿಲ್ಕ್ಸ್, ಸಿಯಾರಾಂ ಇಂತಹ ಕೆಲವು ಕಂಪನಿಗಳಲ್ಲಿ ಬರುವಂತಹವು.

ಆಳುವ ಸರ್ಕಾರಗಳಿಗೆ ಈ ಪಿರಿಮಿಡ್ಡಿನ ತಳಭಾಗದಲ್ಲಿರುವ ಶೇ.90 ರಷ್ಟು ಜನರ ಹಿತರಕ್ಷಣೆ ಹಾಗೂ ಆ ಮೂಲಕ ರೇಷ್ಮೆ ಉದ್ದಿಮೆಯ ಆರೋಗ್ಯಕರ ಬೆಳವಣಿಗೆ ಮುಖ್ಯವಾದರೆ ಆಗ ಜಾರಿಯಾಗುವ ನೀತಿಗಳೇ ಬೇರೆ. ಆದರೆ ನಮ್ಮ ಆಳುವ ಜನರಿಗೆ ತಮ್ಮ ವರ್ಗ ಬಂಧುಗಳಾದ ಶೇ. 10 ರಷ್ಟು ಜನ ಬಂಡವಾಳಿಗರ ಮೇಲೆ ಹಾಗೂ ಅವರ ಮಾಲೀಕತ್ವದ ಕಂಪನಿಗಳ ಮೇಲೆಯೆ ಮಮಕಾರ.

ಶೇ. 90 ಜನರನ್ನು ಸುಲಿದು ಹಾಗೂ ಜನ ಸಾಮಾನ್ಯರಿಂದ ಕಿತ್ತು ಶೇ. 10 ರಷ್ಟು ಇರುವ ದೊಡ್ಡ ಜನಗಳ ಬಕಾಸುರ ಬಾಯಿಗೆ ಸುರಿಯುವುದೇ ತಮ್ಮ ಕರ್ತವ್ಯ ಎಂದು ಈ ನಮ್ಮ ಆಳುವವರು ಭಾವಿಸಿದ್ದಾರೆ. ಈ ಕೆಲಸಕ್ಕೆ ನಾನಾ ಹೆಸರುಗಳು. ಅಭಿವೃದ್ಧಿ, ಮಾರುಕಟ್ಟೆ ಸ್ನೇಹಿ ನೀತಿ, ಉದ್ದಿಮೆ ಪರ ನೀತಿ, ಇತ್ಯಾದಿ, ಇತ್ಯಾದಿ.... ಆದರೆ ಈ ಎಲ್ಲ ನೀತಿಗಳ ಸಾರ ಏನೆಂದು ನೋಡಿದರೆ ಶ್ರೀಮಂತ ಬಂಡವಾಳಿಗರ, ದೊಡ್ಡ ಕಂಪನಿಗಳ ಮಾಲೀಕರ

ಪುಟ 15 ಕ್ಕೆ

ಜುಲೈ 30 ವ್ಯಾಪಕ ಬಂದ್

ಹೋರಾಟ ಸಮಿತಿಯ ಬಂದ್ ಕರೆಗೆ ರೇಷ್ಮೆ ಬೆಳೆಯುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ಚಾಮರಾಜನಗರಗಳಲ್ಲಿ ವ್ಯಾಪಕ ಬೆಂಬಲ ವ್ಯಕ್ತಗೊಂಡು ಬಂದ್ ಪ್ರಚಂಡ ಯಶಸ್ವಿಗಳಿಸಿದೆ. ಹಾವೇರಿ, ಗದಗ, ಶಿರಹಟ್ಟಿ, ರಾಣೆಬೆನ್ನೂರಿನಲ್ಲಿ ಪ್ರತಿಭಟನೆ ಕರೆಗೆ ಸ್ಪಂದನೆ ತೋರೆದಿವೆ.

ಕೋಲಾರ, ಮುಳಬಾಗಿಲು, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಶಿಡ್ಲಘಟ್ಟ, ರಾಮನಗರ, ಕನಕಪುರ, ಮಾಗಡಿ, ಮಂಡ್ಯ, ಮಳವಳ್ಳಿ, ಪಾಂಡವಪುರ, ವಿಜಯಪುರ, ಶ್ರೀರಂಗಪಟ್ಟಣ, ಮದ್ದೂರು, ಕೆ.ಎಂ.ದೊಡ್ಡಿ, ಕುಣಿಗಲ್, ಹುಲಿಯೂರುದುರ್ಗ ಹೀಗೆ ಎಷ್ಟೋ ನಗರ ಪಟ್ಟಣಗಳಲ್ಲಿ ಜನರೇ ಇಲ್ಲದೆ ಶಾಲಾ ಕಾಲೇಜು, ವ್ಯಾಪಾರ ವಹಿವಾಟುಗಳಲ್ಲದೇ ಬಿಕೋ ಎನ್ನುವ ವಾತಾವರಣ ಸಾಮಾನ್ಯವಾಗಿತ್ತು. ಶಿಡ್ಲಘಟ್ಟದಲ್ಲಿ ಕೇಂದ್ರ ಸಚಿವ ವೀರಪ್ಪ ಮೊಯಿಲಿಯವರಿಗೆ ಚಳುವಳಿಕಾರರು ಘೇರಾವ್ ಹಾಕಿದ್ದಾರೆ. ಸಮಸ್ಯೆ ಪರಿಹರಿಸದಿದ್ದರೆ, ಚಳುವಳಿ ತೀವ್ರಗೊಳಿಸುವುದಾಗಿ ಚಳುವಳಿಕಾರರು ಎಚ್ಚರಿಕೆ ನೀಡಿದ್ದಾರೆ.

ನಿಯೋಗದಿಂದ ಕೇಂದ್ರ ಸಚಿವರುಗಳ ಭೇಟಿ

ಚಳುವಳಿಯ ಬೇಡಿಕೆಯನ್ನು ಮನವರಿಕೆ ಮಾಡಲು ಕೇಂದ್ರ ಸರ್ಕಾರಕ್ಕೆ ರಾಜ್ಯ ರೈತರ ನಿಯೋಗ ಒಯ್ಯಬೇಕೆಂಬ ಬೇಡಿಕೆ ಆಧಾರದಲ್ಲಿ ಜುಲೈ 24 ರಂದು ರಾಜ್ಯದ ರೇಷ್ಮೆ ಸಚಿವ ಬಿ.ಎನ್.ಬಚ್ಚೇಗೌಡರ ನೇತೃತ್ವದಲ್ಲಿ ರೈತರ ಪರವಾಗಿ ಜಿ.ಸಿ.ಬಯ್ಯಾರೆಡ್ಡಿ, ಮಳ್ಳೂರು ಶಿವಣ್ಣ ಮುಂತಾದವರನ್ನೊಳಗೊಂಡ ನಿಯೋಗವು ಕೇಂದ್ರ ಜವಳಿ ಖಾತೆ ಸಚಿವ ಆನಂದಶರ್ಮ, ಕೇಂದ್ರ ಹಣಕಾಸು ಸಚಿವ ಪ್ರಣವ್ ಮುಖರ್ಜಿ ಯವರನ್ನು ಕಂಡು ಸಮಸ್ಯೆಯ ಕುರಿತು ವಿವರವಾಗಿ ಚರ್ಚಿಸಿ ಬೇಡಿಕೆಗಳ ಬಗೆಗೆ ಒತ್ತಾಯಿಸಲಾಗಿದೆ.

ಸರ್ಕಾರ ಬೇಡಿಕೆಗಳ ಕುರಿತು ಗಂಭೀರವಾಗಿ ಪರಿಗಣಿಸದಿದ್ದರೆ ಸೆ. 2011 ರಲ್ಲಿ ಪಾರ್ಲಿಮೆಂಟ್ ಚಲೋ ಇತ್ಯಾದಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಹೋರಾಟ ಸಮಿತಿಯು ಎಚ್ಚರಿಕೆ ನೀಡಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಕ್ರಮ ಗಣಿಗಾರಿಕೆಯ ನಾನಾ ರೂಪ ವೈವಿಧ್ಯಗಳನ್ನು ಕಂಡು ದಂಗಾಗುವ ಸರದಿ ರಾಜ್ಯದ ಜನತೆಯದ್ದು. ಅಗೋ ನೋಡಿ ಗಣಿ ಅಕ್ರಮಗಳ ಕುರಿತ ಲೋಕಾಯುಕ್ತ ವರದಿ ಮತ್ತೊಂದು ಕಂತು. ಇಲ್ಲಿದೆ ರೆಡ್ಡಿ ಗ್ಯಾಂಗಿನ ವಿರಾಟ ಲೂಟಿಯ ಕೆಲವು ತುಣುಕುಗಳು

ಗಣಿ ಲೂಟಿಗೆ ಸಮರ್ಥ ನಾಯಕತ್ವ ನೀಡಿದ್ದ ಬಿಜೆಪಿ ಸರ್ಕಾರ

ಅಕ್ರಮ ಗಣಿಗಾರಿಕೆ ಕುರಿತ ಲೋಕಾಯುಕ್ತರ ವರದಿ

■ ಜಯ

ಲೋಕಾಯುಕ್ತರು ಸರ್ಕಾರಕ್ಕೆ ಸಲ್ಲಿಸಿರುವ ಅಕ್ರಮ ಗಣಿಗಾರಿಕೆ ಕುರಿತ ವರದಿಯ ಪ್ರಮುಖವಾದ ಪರೋಕ್ಷ ಸಂದೇಶವೆಂದರೆ ಇಷ್ಟು ದೊಡ್ಡ ಪ್ರಮಾಣದ ಅಕ್ರಮ ಗಣಿಗಾರಿಕೆಯನ್ನು ವ್ಯವಸ್ಥಿತ ದಂಧೆಯಾಗಿ ರಫ್ತು ಮಾಡುವಲ್ಲಿ ಗಣಿ ಕಂಟ್ರ್ಯಾಕ್ಟುದಾರರು, ಸಾಗಣೆ ಕಂಪನಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಪುಢಾರಿಗಳು, ದೊಡ್ಡ ಮಂತ್ರಿ ಮಹೋದಯರುಗಳು ಮಾತ್ರವಲ್ಲದೇ ರಾಷ್ಟ್ರ ಮಟ್ಟದ ನಾಯಕರುಗಳು ಮತ್ತು ಬೃಹತ್ ಕಂಪನಿಗಳ ಷಾಮೀಲಾತಿಯೂ ಇರದಿದ್ದಲ್ಲಿ ಬೃಹತ್ ಪ್ರಮಾಣದ ಅಕ್ರಮ ಸಾಧ್ಯವಾಗುತ್ತಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ, ಅಕ್ರಮ ಗಣಿಗಾರಿಕೆಯ ಜಾಲ ಇಡೀ ದೇಶದಾದ್ಯಂತ ಹರಡಿದ್ದು, ಕರ್ನಾಟಕದ ಅದಿರನ್ನು ಸಾಗಿಸುವಲ್ಲಿ ಕನಿಷ್ಟ 3–4 ರಾಜ್ಯಗಳಲ್ಲಿನ ಜಾಲವನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ರಾಷ್ಟ್ರದಾದ್ಯಂತ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ನಾಯಕರು ಮತ್ತು ಮಂತ್ರಿಗಳು ಇಂತಹ ಜಾಲದ ಭಾಗವಾಗಿ ಅಕ್ರಮ ಗಣಿಗಾರಿಕೆ ಕಂಪನಿಗಳೊಂದಿಗೆ ಬಿಸಿನೆಸ್ ಪಾಲುದಾರಿಕೆ ಹೊಂದಿ ಲೂಟಿಯಲ್ಲಿ ಭಾಗಿಯಾಗಿರುವುದನ್ನು ಹಲವು ರಾಜ್ಯಗಳಲ್ಲಿ ನಾವು ಕಾಣುತ್ತಿದ್ದೇವೆ.

ರೆಡ್ಡಿಗಳ ಭೂಗತ–ಬಹಿರಂಗ ಕಾರ್ಯಾಚರಣೆಗಳು ಮತ್ತು ಲೂಟಿ:

ಲಕ್ಷಾಂತರ ಕೋಟಿ ಬಿಸಿನೆಸ್ ವಹಿವಾಟು ಮಾಡುತ್ತಲೇ ಮಂತ್ರಿಗಿರಿಯನ್ನು ಭ್ರಷ್ಟತೆಗೆ ಬಳಸಿಕೊಂಡಿರುವ ರೆಡ್ಡಿ ಸಹೋದರರ ಲೂಟಿಯ ವಿಧಾನಗಳನ್ನು ಲೋಕಾಯುಕ್ತರ ವರದಿಯಲ್ಲಿ ನೋಡಿದರೆ, ಇವರಷ್ಟು ಅಪಾಯಕಾರಿ ಕ್ರಿಮಿನಲ್‌ಗಳು ಸಮಾಜದಲ್ಲಿಯೇ ಇಲ್ಲವೆನಿಸುತ್ತದೆ. ಏಕೆಂದರೆ ಜನಾಧಿಕಾರವನ್ನು ಕ್ರಿಮಿನಲ್ ಮತ್ತು ಭ್ರಷ್ಟ ಚಟುವಟಿಕೆಗಳಿಗೆ ತೊಡಗಿಸಿಕೊಳ್ಳುವುದು ಹೆಚ್ಚು ಅನೈತಿಕ ಮತ್ತು ಅಪಾಯಕಾರಿ.ಬೇನಾಮಿ ಹೆಸರಿನಲ್ಲಿ ಸಾವಿರಾರು ಕೋಟಿ ಅಕ್ರಮ ವಹಿವಾಟು ನಡೆಸುತ್ತಿರುವುದಕ್ಕೆ ಒಂದು ಸಣ್ಣ ಉದಾಹರಣೆಯೆಂದರೆ ಇಲ್ಲಿದೆ. ಕಾಶಿ ವಿಶ್ವನಾಥ ಎಂಬುವನ ಹೆಸರಿನಲ್ಲಿ ಶ್ರೀ ಭಕ್ತ ಮಾರ್ಕಂಡೇಶ್ವರ ಮಿನರಲ್ಸ್ ಹೊಸಪೇಟೆ ಕಂಪನಿಯು ಇದ್ದು, ಇದರ ಬ್ಯಾಂಕ್ ಖಾತೆಯಲ್ಲಿ ಕಳೆದ ಒಂದೇ ವರ್ಷದಲ್ಲಿ ರೂ. 45 ಕೋಟಿ ಬಂದು ಹೋಗಿದೆ. ಕಾಶಿ ವಿಶ್ವನಾಥ ಒಂದು ಸಣ್ಣ ಕಿರಾಣಿ ಅಂಗಡಿ ಇಟ್ಟುಕೊಂಡಿದ್ದವ, ಅದು ನಷ್ಟ ಅನುಭವಿಸಿದ್ದರಿಂದ ಯಾವುದೋ ಕಂಪನಿಯಲ್ಲಿ ಸಣ್ಣ ಉದ್ಯೋಗಕ್ಕಾಗಿ ಸೇರಿಕೊಂಡ. ಆದರೆ, ಇವನ ಹೆಸರಿನಲ್ಲಿ ಶ್ರೀ ಭಕ್ತ ಮಾರ್ಕಂಡೇಶ್ವರ ಮಿನರಲ್ಸ್ ಕಂಪನಿಯನ್ನು ನೊಂದಣಿ ಮಾಡಿಸಿ, ಅವನಿಗೇ ಗೊತ್ತಿಲ್ಲದ ಹಾಗೇ ಸಾವಿರಾರು ಟನ್ ಅದಿರು ರಫ್ತಾಗಿದ್ದು, ರೂ. 45 ಕೋಟಿ ಈ ಕಂಪನಿಯ ಖಾತೆಗೆ ಜಮೆಯಾಗಿದ್ದು, ಅಲ್ಲಿಂದ ಅದೇ ಹಣ ಗಾಲಿ ಜನಾರ್ಧನ ರೆಡ್ಡಿ ಸಾರ್ ಖಾತೆಗೆ ವರ್ಗಾವಣೆಯಾಗಿರುವ ದಾಖಲೆಗಳು ಲೋಕಾಯುಕ್ತರಿಗೆ ದೊರೆತಿವೆ. ಕಾಶಿ ವಿಶ್ವನಾಥನನ್ನು ವಿಚಾರಣೆಗೊಳಪಡಿಸಿದಾಗ ಅವನಿಗೆ ಅದಿರು ಸಾಗಣೆ ವ್ಯವಹಾರವೇ ಗೊತ್ತಿಲ್ಲದಿರುವುದು ತಿಳಿದುಬಂದಿದೆ.

ರೆಡ್ಡಿ ಒಡೆತನದ ಬ್ರಹ್ಮಣಿ ಸ್ಟೀಲ್ ಕಂಪನಿ ಮತ್ತು ಓಬಳಾಪುರಂ ಮೈನಿಂಗ್ ಕಂಪನಿಯ ಉದ್ಯೋಗಿಗಳ ಹೆಸರಿನಲ್ಲೇ ಕೆಲವು ಬೇನಾಮಿ ಸಾಗಣೆ ಕಂಪನಿಗಳನ್ನು ತೆರೆದಿರುವ ದಾಖಲೆಗಳು ದೊರೆತಿವೆ.



ರೆಡ್ಡಿಗಳ ಭೂಗತ–ಬಹಿರಂಗ ಕಾರ್ಯಾಚರಣೆಗಳ ವಿಧಾನಗಳು ಲೋಕಾಯುಕ್ತರು ಕಂಡಂತೆ ಹೀಗಿವೆ:

- ಗಡಿ ವಿವಾದ ಹೊಂದಿರುವ, ಪರವಾನಗಿ ಇಲ್ಲದೇ ಗಣಿಗಾರಿಕೆ ನಡೆಸುತ್ತಿರುವ ಅಥವಾ ಇನ್ನಾವುದೇ ವಿವಾದವಿರುವ ಗಣಿ ಕಂಪನಿಗಳನ್ನು ಮೊದಲು ಗುರುತಿಸುವುದು.
- ರೆಡ್ಡಿಗಳ ಹಿಡಿತದಲ್ಲಿ 'ಮುಂಚೂಣಿ ಕಂಪನಿಗಳ'ನ್ನು ಸ್ಥಾಪಿಸುವುದು.
- ವಿವಾದಕ್ಕೆ ಸಿಲುಕಿ ಗಣಿಗಾರಿಕೆ ನಡೆಸುತ್ತಿರುವ ಕಂಪನಿಗಳನ್ನು ಮಾತುಕತೆಗೆ ತರುವುದು ಮತ್ತು ಇಂತಹ ಅವುಗಳನ್ನು ರೆಡ್ಡಿ ಒಡೆತನದ ಮುಂಚೂಣಿ ಕಂಪನಿಗಳ ಹಿಡಿತಕ್ಕೆ ತಂದು ಒಪ್ಪಂದ ಮಾಡಿಸುವುದು.
- ರೆಡ್ಡಿಗಳೊಂದಿಗೆ 60:40 ಅಥವಾ 40:60 ಒಪ್ಪಂದದ ಒತ್ತಡಕ್ಕೆ ಸಿಲುಕಿದ ಕಂಪನಿಗಳು, ರೆಡ್ಡಿಗಳಿಗೆ ಪಾವತಿಸಬೇಕಾದ 'ಮೊತ್ತ'ವನ್ನು ಪೂರೈಸಲು ಹೆಚ್ಚಿನ ಪ್ರಮಾಣದ ಅಕ್ರಮ ಗಣಿ ನಡೆಸಿ ಅದಿರು ಸಾಗಿಸುವುದು.
- ಈ ಕಾರ್ಯಾಚರಣೆಗಳಿಗೆ ಕಂಟ್ರ್ಯಾಕ್ಟುದಾರರು, ಸಾಗಣೆದಾರರು, ಮಧ್ಯಮ ಹಂತದ ವ್ಯಾಪಾರಿಗಳನ್ನು ಬಿಟ್ಟು ಅಕ್ರಮ ರಫ್ತು ಸುಗಮಗೊಳಿಸುವುದು.
- ಗಣಿ ಪ್ರದೇಶದಿಂದ ಬಂದರಿನವರೆಗೆ ಅದಿರು ಸಾಗಣೆಯಾಗುವವರೆಗೂ ಆಡಳಿತಾಂಗ ಯಾವುದೇ ರೀತಿ ಅಡ್ಡ ಬರದಂತೆ ರೆಡ್ಡಿಗಳ ರಾಜಕೀಯ ಪ್ರಭಾವದಿಂದ ನೋಡಿಕೊಳ್ಳುವುದು.

ಸ್ವಸ್ತಿಕ್ ನಾಗರಾಜ್ ಮತ್ತು ಖಾರ ಪುಡಿ ಮಹೇಶರ ಅಕ್ರಮಗಳು:

ಸ್ವಸ್ತಿಕ್ ನಾಗರಾಜ್ ಮತ್ತು ಖಾರಪುಡಿ ಮಹೇಶ್ ಎಂಬುವರು ದೊಡ್ಡ ಪ್ರಮಾಣದ ಅಕ್ರಮ ಅದಿರು ಸಾಗಣೆ ಮಾಡಿರುವುದು ಲೋಕಾಯುಕ್ತರಿಗೆ ದಾಖಲೆ ಸಮೇತ ದೊರೆತಿದ್ದು, ಇದರಿಂದ ಲಾಭ ಗಳಿಸಿರುವ ಕಂಪನಿಗಳೆಂದರೆ: ಜಿಂದಾಲ್ ಸ್ಟೀಲ್, ಕಲ್ಯಾಣಿ, ಕಿರ್ಲೋಸ್ಕರ್, ಶಾತವಾಹನ, ಜಿಆರ್‌ಎಂಟಿಸಿ ಮತ್ತು ಇತರೆ ಕಂಪನಿಗಳು. ಇವರಿಂದ ಒಟ್ಟು ರೂ. 32 ಕೋಟಿ ವಸೂಲಾತಿ ಮಾಡಬೇಕೆಂದು ಡಾ: ಯು.ವಿ ಸಿಂಗ್ ಶಿಫಾರಸ್ಸು ಮಾಡಿದ್ದಾರೆ.

ಗೋವಾ ಬಂದರಿನ ಮೂಲಕ ಅಕ್ರಮ ರಫ್ತು:

ಉದಾಹರಣೆಗೆ, ಕರ್ನಾಟಕದ ಅದಿರನ್ನು ಗೋವಾ ಮೂಲಕ ರೈಲು ಮೂಲಕ ಮಾತ್ರವೇ ಸಾಧ್ಯ. ಅಕ್ರಮವಾಗಿ ರಫ್ತು ಮಾಡಲು ಬಳಸಿಕೊಂಡಿರುವ ಗೋವಾದಲ್ಲಿನ ಎರಡು ಪ್ರಮುಖ ಬಂದರುಗಳೆಂದರೆ: ಮರ್ಮಗೋವಾ ಮತ್ತು ಪಣಜಿ. ಇಡೀ ದೇಶದಲ್ಲಿಯೇ ಅತಿ ಹೆಚ್ಚು ಅದಿರು ರಫ್ತಾಗಿರುವುದು ಮರ್ಮಗೋವಾ ಬಂದರಿನಿಂದಲೇ. ಅಲ್ಲದೇ ಇದರಲ್ಲಿ ಅತಿ ಹೆಚ್ಚು ಪ್ರಮಾಣ ಕರ್ನಾಟಕದ ಅದಿರು ರಫ್ತಿಗೆ [illegible] ಈ ಬಂದರಿನ [illegible] ಅಧಿಕಾರಿಗಳು ಪರಿಶೀಲನೆ ನಡೆಸಿದಾಗ [illegible] ರವಾನೆ ಹಡಗುಗಳು ಮತ್ತು [illegible] ಹೊತ್ತೊಯ್ಯುತ್ತಿರುವ [illegible] ದಾಖಲೆಗಳನ್ನೇ [illegible] ನಿರ್ವಹಿಸದಿರುವುದು ಕಂಡು ಬಂದಿದೆ [illegible] ಕರ್ನಾಟಕದಿಂದ ಈ ಬಂದರಿಗೆ 2006–07 ರಿಂದ 2010–11ರ ಅವಧಿಯಲ್ಲಿ ರೈಲು ಮೂಲಕ ಅಕ್ರಮವಾಗಿ ರವಾನೆಯಾಗಿರುವ ಒಟ್ಟು ಅದಿರಿನ ಪ್ರಮಾಣ 45,59,365 ಮೆಟ್ರಿಕ್ ಟನ್. ಹೀಗೆ ಅಕ್ರಮವಾಗಿ ಅದಿರು ಸಾಗಿಸಿರುವ 40 ಸಾಗಣೆದಾರರಿಂದ ಇದರ ಹಣ ವಸೂಲು ಮಾಡಬೇಕೆಂದು ಡಾ: ಯು.ವಿ ಸಿಂಗ್ ಶಿಫಾರಸ್ಸು ಮಾಡಿದ್ದಾರೆ.

ತುಮಕೂರು ಅಕ್ರಮ ಗಣಿ ಸಮೀಕ್ಷೆ:

ತುಮಕೂರು ಪ್ರದೇಶದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತರ ವರದಿಯಲ್ಲಿ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ ಸಿಇಸಿ ಪರಿಶೀಲನೆ ನಡೆಸಿದಾಗ ಕೆಳಕಂಡ ಅಕ್ರಮಗಳು ಕಂಡುಬಂದಿವೆ:

- ಮೂಲ ಗಡಿ ರೇಖೆಯನ್ನು ಮಾರ್ಪಾಟು ಮಾಡಿ ಗಣಿಗಾರಿಕೆ ನಡೆಸಲಾಗಿದೆ.
- ಅರಣ್ಯ ಒತ್ತುವರಿ ಮಾಡಿ ಅದಿರು ತೆಗೆಯಲಾಗಿದೆ.
- ಅರಣ್ಯ ಇಲಾಖೆ ಮಂಜೂರಾತಿ ಪತ್ರವೇ ಇಲ್ಲದೆ ಗಣಿಗಾರಿಕೆ ನಡೆಸಿ, ಅತಿಯಾದ ತ್ಯಾಜ್ಯವನ್ನು ಅಲ್ಲಿ ಸುರಿಯಲಾಗಿದೆ.
- ಪಟ್ಟಾ ಭೂಮಿಯಲ್ಲಿ ಕಾನೂನುಬಾಹಿರವಾಗಿ ಮಣ್ಣು ಸುರಿಯಲಾಗಿದೆ.

ಅಲ್ಲದೆ, ತಿಪಟೂರು ತಾಲ್ಲೂಕಿನ ಹತ್ಯಾಳ್ ಬೆಟ್ಟ, ರಜತಾದ್ರಿಪುರ, ಗುಬ್ಬಿ ತಾಲ್ಲೂಕಿನ ಮುಸ್‌ಕೊಂಡ್ಲಿ, ಶಿವಸಂದ್ರ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಬ್ಬಿಗೆಗುಡ್ಡ, ಸೊಪ್ಪಿನಗುಡ್ಡ, ರೆಡ್‌ಹಿಲ್ಸ್ ಬೆಟ್ಟಗಳಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದಿರುವ ಕಂಪನಿಗಳಲ್ಲಿ 13 ರ ಪೈಕಿ 9 ಕಂಪನಿಗಳು ಅಕ್ರಮಗಳಲ್ಲಿ ಭಾಗಿಯಾಗಿವೆ. ಜಿಲ್ಲೆಯಲ್ಲಿ 569 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದಿದ್ದು, 115 ಎಕರ ಪ್ರದೇಶದಲ್ಲಿ ಅಕ್ರಮ ನಡೆದಿದೆ. □

ಬಿಜೆಪಿಯ ಕರ್ನಾಟಕ ಪರ್ವ

ಪುಟ 7 ರಿಂದ

ಬಿಜೆಪಿ ಪಾಲಾದ ಕಾಂಗ್ರೆಸ್-ವಿರೋಧಿ ಅವಕಾಶ

ಹೀಗೆ, ಈ ರಾಜ್ಯದಲ್ಲಿ ಆರಂಭದಲ್ಲಿ ಸಾರ್ವಜನಿಕ ವಲಯವನ್ನು ಬೆಳೆಸುವ ಪ್ರಕ್ರಿಯೆ ಭರದಲ್ಲಿ ಸಾಗಿದರೆ, ನಂತರ ಉದಾರೀಕರಣದ ಪ್ರಕ್ರಿಯೆ ಲಂಗುಲಗಾಮಿಲ್ಲದೆ ಹರಿದು ಬಂತು. ಎಂಭತ್ತರ ದಶಕದಲ್ಲಿ ಕಾರ್ಮಿಕ ವರ್ಗ ಮತ್ತು ಶ್ರಮಿಕ ಜನಸಮೂಹಗಳ ನಡುವೆ ಬೆಳೆದು ಬಂದ ಶಕ್ತಿಗಳು ಕಾಂಗ್ರೆಸ್-ವಿರೋಧಿ ಶಕ್ತಿಯೊಂದನ್ನು ಸೃಷ್ಟಿಸಿದವು. ಇದು ಕಾಂಗ್ರೆಸ್ಸೇತರ, ಬಿಜೆಪಿಯೇತರ ಪರ್ಯಾಯ ಕರ್ನಾಟಕದಲ್ಲಿ ರಂಗದ ಮೇಲೆ ಬರಲು ಅವಕಾಶ ಕಲ್ಪಿಸಿತು. ಆಂತರಿಕ ಕಿತ್ತಾಟಗಳಿಂದ ಜನತಾ ಪರಿವಾರ ದುರ್ಬಲಗೊಂಡಾಗ, ನೇಪಥ್ಯದಲ್ಲಿ ಕಾಯುತ್ತಿದ್ದ ಬಿಜೆಪಿ ಈ ಕಾಂಗ್ರೆಸ್-ವಿರೋಧಿ ಅವಕಾಶವನ್ನು ತನ್ನದಾಗಿಸಿಕೊಂಡಿತು.

ಬಿಜೆಪಿ ಮತ್ತು ಯೆಡ್ಯೂರಪ್ಪ ಜನತಾದಳ ತೆರವು ಮಾಡಿಕೊಟ್ಟ ಸ್ಥಳವನ್ನು ತುಂಬಿ, ಉದಾರೀಕರಣದ ಪ್ರಕ್ರಿಯೆ ತೆರೆದುಕೊಟ್ಟ ಅವಕಾಶಗಳನ್ನು ತರಾತುರಿಯಿಂದ ಬಾಚಿಕೊಂಡರು. ಕುಮಾರಸ್ವಾಮಿಯೊಂದಿಗೆ ಅಧಿಕಾರ ಹಂಚಿಕೆಯಲ್ಲಿ 2007ರಲ್ಲಿ ಯೆಡಿಯೂರಪ್ಪ ಉಪ ಮುಖ್ಯಮಂತ್ರಿಯಾಗಿ ಅಧಿಕಾರದ ರುಚಿ ಕಂಡದ್ದು ಕಬ್ಬಿಣದ ಅದಿರಿನ ಲಾಬ್ಬಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದ ವಾತಾವರಣದಲ್ಲಿ. ಕಬ್ಬಿಣದ ಅದಿರಿನ ಬೆಲೆಗಳು ಎಷ್ಟೊಂದು ಹೆಚ್ಚಿದವೆಂದರೆ, ಚೀನಾ ಜಾಗತೀಕರಣದ ಧೋರಣೆಯ ಅಡಿಯಲ್ಲಿ ಬಹಳಷ್ಟು ಕಬ್ಬಿಣದ ಅದಿರನ್ನು ಆಮದು ಮಾಡಿಕೊಳ್ಳಲಾರಂಭಿಸಿತು. ಈ ಪ್ರಕ್ರಿಯೆಯೇ, ಓಬಳಾಪುರಂ ಮೈನಿಂಗ್ ಕಂಪನಿಯ ರೆಡ್ಡಿಗಳು ಲೋಕಾಯುಕ್ತರು ಬಣ್ಣಿಸಿರುವ 'ಬಳ್ಳಾರಿಯ ಗಣತಂತ್ರ'ವನ್ನು ನಡೆಸುವ ಅವಕಾಶ ನಿರ್ಮಿಸಿ ಕೊಟ್ಟಿತು.

ಮೊದಲ ಐದು ಪಕ್ಷೇತರ ಶಾಸಕರನ್ನು ಖರೀದಿಸಲು ಹಣಕಾಸು ಒದಗಿಸಿ ಮೇ 2009ರಲ್ಲಿ ಯೆಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಪ್ರತಿಜ್ಞೆ ಸ್ವೀಕರಿಸಲು ಅನುವು ಮಾಡಿಕೊಟ್ಟ, ಮುಂದಿನ ಆಪರೇಶನ್ ಕಮಲಕ್ಕೆ ಹಣಕಾಸು ಒದಗಿಸಿದ ಸರ್ವಶಕ್ತ ಗಣಿ ಮಾಫಿಯಾಕ್ಕೆ ಜೋಡಿಯಾಗಿ, ಬೆಂಗಳೂರಿನಲ್ಲಿ ಭೂಮಾಫಿಯಾವನ್ನುಕೂಡ ಅವರು ಗಳಿಸಿದರು. ನೂರಾರು ಚದರ ಕಿಲೋಮೀಟರ್ ಕೃಷಿ ಭೂಮಿಯನ್ನು ನಗರಭೂಮಿಯಾಗಿ ಬೆಳೆಸಿದ ನಗರೀಕರಣದ ಪ್ರಕ್ರಿಯೆಯಲ್ಲಿ, ಮಾಹಿತಿ ತಂತ್ರಜ್ಞಾನ ಮತ್ತು ಅದನ್ನು ಅವಲಂಬಿಸಿದ ಉದ್ದಿಮೆಗಳ ವಲಯ, ಸಂಪರ್ಕ ವಲಯ ಮತ್ತು ಸೇವಾ ವಲಯದಿಂದ ಹೀರಿಕೊಳ್ಳುವ ಪ್ರಕ್ರಿಯೆಯಲ್ಲಿ ಅಪಾರ ಸಂಪತ್ತು ಸೃಷ್ಟಿಯಾಯಿತು. ಇನ್ನು ಶಿಕ್ಷಣ ವಲಯದ ಲಾಬ್ಬಿಯನ್ನು, ಅದರಲ್ಲಿ ಧಾರ್ಮಿಕ ಸಂಸ್ಥೆಗಳ ಶಕ್ತಿಯ ಕೇಂದ್ರೀಕರಣವನ್ನು ನಿರ್ಲಕ್ಷಿಸುವಂತಿಲ್ಲ.

ಒಂದು ಚುನಾವಣೆ ಪ್ರಕಟವಾದಾಗ, ಈ ಎಲ್ಲಾ ಲಾಬ್ಬಿಗಳ ಮಂದಿ ಈ ಪಕ್ಷಗಳ ಕಚೇರಿಗಳ ಸುತ್ತ ಓಡಾಡುವುದನ್ನು, ಚುನಾವಣಾ ಟಿಕೇಟುಗಳನ್ನು ಪಡೆದಾಗ ಈ ಪಕ್ಷಗಳ ಬ್ರಾಂಡುಗಳ ಮಾರಾಟಗಾರರಾಗುವುದನ್ನು ನಾವು ನೋಡುತ್ತೇವೆ. ಹೀಗೆ ಹಿಂದೆ ಕಾಂಗ್ರೆಸಿನಲ್ಲಿದ್ದವರು, ನಂತರ ಜನತಾದಳದಲ್ಲಿ ಕಾಣಿಸಿಕೊಂಡವರು ಬಿಜೆಪಿ ಮಂದಿಯಾಗಿ ಬಿಡುವುದು, ಯೆಡ್ಡಿ/ರೆಡ್ಡಿ ಬಣಗಳ ನಡುವೆ ಓಲಾಡುವುದು ಕಾಣಬರುತ್ತದೆ. ಇದೇ ಯೆಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹಲವು ಬಿಕ್ಕಟ್ಟುಗಳನ್ನು ಸೃಷ್ಟಿಸಿದ್ದನ್ನು ಕೂಡ ನೋಡಿದ್ದೇವೆ.

'ಆತ್ಮವಿಶ್ವಾಸ'ದ ಹಿಂದೆ


ರಾಷ್ಟ್ರೀಯ ಮಟ್ಟದಲ್ಲಿಯೂ ಬಿಜೆಪಿ ಮುಖಂಡತ್ವ ಇದಕ್ಕಿಂತ ಭಿನ್ನವಾಗಿರಲು ಸಾಧ್ಯವಿರಲಿಲ್ಲ. ಏಕೆಂದರೆ, 'ಬೇಟಿ'(ಮಗಳು) ಮತ್ತು 'ಬಹು'(ಸೊಸೆ) ನಡುವಿನ ಬಳ್ಳಾರಿ ಸಮರ ಸಾಗಿದ್ದಾಗ ಇದಕ್ಕೆಲ್ಲ ಕೃಪಾಪೋಷಣೆ ಇತ್ತವರು ಅವರೇ ತಾನೇ. ಸೋನಿಯಾ ಗಾಂಧಿ



ಕೃಪೆ : ಪ್ರಜಾವಾಣಿ

ಬಳ್ಳಾರಿಯಲ್ಲಿ ಗೆದ್ದರೂ ಅದನ್ನು ಬಿಟ್ಟುಕೊಟ್ಟು ರಾಯ್‌ಬರೇಲಿಯನ್ನೇ ಆರಿಸಿಕೊಂಡು, ಬಳ್ಳಾರಿಯಲ್ಲಿ ಅವಕಾಶವನ್ನು ಸುಷ್ಮಾ ಮತ್ತು ಬಿಜೆಪಿಗೆ ಒಪ್ಪಿಸಿದರು. ಯೆಡ್ಡಿ ಬಣದಲ್ಲಿ ಬಿಕ್ಕಟ್ಟು ಬಂದಾಗಲೆಲ್ಲ ಸುಷ್ಮಾ ಸ್ವರಾಜ್‌ರವರು ರೆಡ್ಡಿಗಳ ರಕ್ಷಣೆಗೆ ಬರುತ್ತಿದ್ದುದು ಕಾಣುತ್ತಿತ್ತು. ಈಗ ಸುಷ್ಮಾರಾಗಲೀ, ಅರುಣ್ ಜೇಟ್ಲಿಯಾಗಲೀ, ಅಥವ ಬೇರಾವ ಬಿಜೆಪಿ ರಾಷ್ಟ್ರೀಯ ಮುಖಂಡರಾಗಲೀ, ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ವರಮಹಾಲಕ್ಷ್ಮಿ ವ್ರತಕ್ಕೆ ಬಳ್ಳಾರಿಗೆ ಬಂದೇ ಬರುತ್ತಿದ್ದ 'ಬೇಟಿ' ಸುಷ್ಮಾ ಈ ಬಾರಿ ಬರುತ್ತಿಲ್ಲವಂತೆ.

ಕಳೆದ ಭಾನುವಾರ ರಾಜೀನಾಮೆ ಕೊಡುವಾಗಲೂ ವಿಜಯ ಚಿಹ್ನೆಯನ್ನು ಪ್ರದರ್ಶಿಸುತ್ತಿದ್ದ ಯೆಡಿಯೂರಪ್ಪನವರ ಆತ್ಮವಿಶ್ವಾಸದ ಹಿಂದೆ ಇರುವುದೇನು? ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಜೋತು


ಜೈಲಿಗೆ ಕಾಲಿಟ್ಟ ಕಟ್ಟಾ

ಬಿದ್ದಿರಬೇಕಾದರೆ ಅದು ಆತನ ಮೇಲ್ದೆಯೇ ಅವಲಂಬಿಸಬೇಕಾಗಿದೆ ಎಂಬ ಸಂಗತಿ. ಡಿ ವಿ ಸದಾನಂದ ಗೌಡರು ಯೆಡಿಯೂರಪ್ಪನವರಿಂದ ದೂರ ಉಳಿದರೆ ಒಂದು ದಿನವೂ ಅಧಿಕಾರದಲ್ಲಿಯೂ ಉಳಿಯುವಂತಿಲ್ಲ ಎಂಬ ಸಂಗತಿಯಿಂದಾಗಿ ಯೆಡಿಯೂರಪ್ಪನವರ ಬ್ರಾಂಡ್ ಆಗಿ ಬಿಟ್ಟಿರುವ ವಿಜಯ ಚಿಹ್ನೆ ಈಗಲೂ ಮುಂದುವರೆಯುತ್ತಿದೆ. ಸಂಪುಟ ರಚನೆಯೂ ಇದೀಗ ಅದು ಪ್ರದರ್ಶನಗೊಂಡಿದೆ. ಜಗದೀಶ ಶೆಟ್ಟರ್ ಎಂದಾದರೂ ಮುಖ್ಯಮಂತ್ರಿಯಾಗುವ ಬಗ್ಗೆ ಯೋಚಿಸುವುದಿರಲಿ, ಉಪಮುಖ್ಯಮಂತ್ರಿ ಹುದ್ದೆ ಪಡೆಯುವುದು ಕೂಡಾ ಸಾಧ್ಯವಿಲ್ಲ ಎಂಬುದನ್ನು ಯೆಡಿಯೂರಪ್ಪ ತೋರಿಸಿಕೊಟ್ಟಿದ್ದಾರೆ.

ಕರ್ನಾಟಕದಲ್ಲಿನ ಸಾಧನೆಗಳೇನು?

ಕರ್ನಾಟಕದಲ್ಲಿ ಬಿಜೆಪಿ ರೈತರಿಗೆ ಗುಂಡೇಟು, ಕ್ರೈಸ್ತರ ಮೇಲೆ ಹಲ್ಲೆಗಳು, ಕೋಮು ತಿಕ್ಕಾಟಗಳು, ಗೋಹತ್ಯೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ಅವಕಾಶ, ನೈಸರ್ಗಿಕ ಸಂಪನ್ಮೂಲಗಳ ಲೂಟಿಕೋರರಿಗೆ ರಕ್ಷಣೆಯ ವ್ಯವಸ್ಥೆ ಮತ್ತು ಭ್ರಷ್ಟಾಚಾರದ 'ಡೀಲ್'ಗಳಲ್ಲಿ ರಾಜ್ಯದ ಸಂಪನ್ಮೂಲಗಳ ಲೂಟಿಯನ್ನು ಬಿಟ್ಟು ಬೇರೆ ಏನನ್ನು ತಾನೇ ತನ್ನ ಸಾಧನೆಗಳೆಂದು ತೋರಿಸಬಲ್ಲುದು? ಶಾಲಾ ಮಕ್ಕಳಿಗೆ ಸೈಕಲುಗಳು, ಭಾಗ್ಯಲಕ್ಷ್ಮಿ ಸೀರೆ ಮುಂತಾದ ಸ್ಕೀಮುಗಳು ಕಾಂಗ್ರೆಸಿನ ಧೋರಣೆಗಳಿಗಿಂತ ಹೇಗೆ ತಾನೇ ಭಿನ್ನವಾಗಿವೆ? ಇದು ವ್ಯಕ್ತಿಗಳಿಂದಲ್ಲ, ಸಿದ್ಧಾಂತದ ಆಧಾರದಲ್ಲಿ ಆರೆಸ್ಸೆಸ್ ನಡೆಸುತ್ತಿರುವ 'ಶಿಸ್ತಿ'ನ ಪಕ್ಷವೆಂದು ಹೇಳಿಕೊಳ್ಳುತ್ತಿದ್ದ ಪಕ್ಷದಲ್ಲಿ 'ಶಿಸ್ತು' ಎಂಬುದು ಎಲ್ಲಿದೆ? ಲೋಕಾಯುಕ್ತ ವರದಿ ಮಾತ್ರವಲ್ಲ, ತನ್ನದೇ ಅಖಿಲ ಭಾರತ ಮುಖಂಡತ್ವ ಹೇಳಿದಾಗಲೂ ರಾಜೀನಾಮೆಗೆ ನಿರಾಕರಿಸಿದ, ಅಂತಿಮವಾಗಿ ಅದಕ್ಕೆ ತಲೆಬಾಗಿದಾಗಲೂ ವಿಜಯ ಚಿಹ್ನೆಯನ್ನು ಮೆರೆಸುತ್ತಿರುವ ಯೆಡಿಯೂರಪ್ಪ ತಾನೇ ಮುಖಂಡನಾಗಿರಬೇಕು ಎಂಬುದಷ್ಟೇ ತನ್ನ ಏಕೈಕ ಸಿದ್ಧಾಂತ ಎಂದು ತೋರಿಸಿಕೊಟ್ಟಿಲ್ಲವೇ? ಈ ಪ್ರಶ್ನೆಗಳಿಗೆ ಉತ್ತರಗಳು, ತಾನು ಕಾಂಗ್ರೆಸಿಗಿಂತ ಭಿನ್ನವಾದ ಪಕ್ಷ ಎಂಬ ಬಿಜೆಪಿಯ ಮಾತಿನ ಟೊಳ್ಳುತನವನ್ನು ಸ್ಪಷ್ಟವಾಗಿ ಬಯಲಿಗೆಳೆಯುತ್ತವೆ.

ಈ 38 ತಿಂಗಳಲ್ಲಿ ಕರ್ನಾಟಕದ ಜನತೆಯ ಸಾಧನೆಗಳೇನು? ರೈತರ ಆತ್ಮಹತ್ಯೆಗಳು, ಉದ್ಯೋಗ ಕಳಕೊಂಡು ಹಸಿದಿರುವ ಕಾರ್ಮಿಕರು, ಮೆರೆಯುತ್ತಿರುವ ಕಾಂಟ್ರಾಕ್ಟರುಗಳು, ಎಲ್ಲ ಹೋರಾಟಗಳ ಉಪೇಕ್ಷೆ, ಇನ್ನೂ ನರಳುತ್ತಿರುವ 2009ರ ಮಳೆ ವಿಪತ್ತಿಗೆ ತುತ್ತಾದವರು, ಆಳುವವರಿಗೆ ಪ್ರಿಯವಾದ, ಆದರೆ ಜನತೆಗೆ ಬೇಡವಾದ ಯೋಜನೆಗಳಿಗೆ ಸಾವಿರಾರು ಎಕ್ರೆ ಭೂಮಿಯ ಸ್ವಾಧೀನ, ಶಿಕ್ಷಣದ ಕೋಮುವಾದೀಕರಣ, ದಲಿತರ, ಅಲ್ಪಸಂಖ್ಯಾತರ, ಮಹಿಳೆಯರ ಶೋಷಣೆ ಇತ್ಯಾದಿ, ಇತ್ಯಾದಿ. ಬೆಲೆಯೇರಿಕೆಯ ಸಂಕಟಗಳಿಂದಂತೂ ಜನತೆಗೆ ಮುಕ್ತಿಯೇ ಇಲ್ಲ.

ಬಿಜೆಪಿ, ಈ ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಿಲ್ಲ, ಈ ಸಮಸ್ಯೆಗಳಿವೆ, ಅವನ್ನು ಎದುರಿಸಬೇಕು ಎಂದು ಒಪ್ಪಿಕೊಳ್ಳುವುದೂ ಇಲ್ಲ. ಅವರಿಗೆ ಕಾಣುವ ಏಕೈಕ ಅಭಿವೃದ್ಧಿಯೆಂದರೆ, ರಾಜಧಾನಿ ಮತ್ತು ಇಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಸಮೃದ್ಧಿ; ಇದಕ್ಕಾಗಿ ಅವರು ಬಯಸುವುದು ಜಾಗತಿಕ ಹೂಡಿಕೆದಾರರ ಸಭೆಗಳನ್ನು, ಉದ್ದಿಮೆಗಳಲ್ಲಿ ಮಾತ್ರವಲ್ಲ, ಕೃಷಿಯಲ್ಲಿ ಕೂಡ.


ಹೀಗೆ, 'ಸದಾನಂದ' ಗೌಡರು ಯಾವುದೇ ಕಾರ್ಯಕ್ರಮ, ಜನತೆಯ ಪ್ರಶ್ನೆಗಳನ್ನು ಎದುರಿಸುವ ಆಡಳಿತದ ಬಗ್ಗೆ ಮಾತಾಡಿದರೂ, ಶ್ರೀರಾಮನ ಪಾದದ ಬಳಿ ಹನುಮಂತನ 'ಆನಂದ'ವನ್ನೇ ಪ್ರದರ್ಶಿಸುತ್ತಿರುವಂತೆ ಕಾಣುತ್ತಿದೆ. ಪಟ್ಟಾಭಿಷೇಕದ ವೇಳೆಯಲ್ಲಿ ಈ ಯೆಡಿಯೂರಪ್ಪ ಎಂಬ ಶ್ರೀರಾಮನ ಪಕ್ಕದಲ್ಲಿ ಸೀತಾದೇವಿ ಕಾಣೆಯಾಗಿದ್ದಾಳೆ ಎಂಬ ಬೇಸರವೂ ಇಲ್ಲದೆ.

ಎಪ್ಪತ್ತರ ಮತ್ತು ಎಂಭತ್ತರ ದಶಕದಲ್ಲಿ ಕಾಂಗ್ರೆಸಿನ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟದಲ್ಲಿ ಮೂಡಿ ಬಂದ ನಿಜವಾದ ಕಾಂಗ್ರೆಸ್-ವಿರೋಧಿ ಶಕ್ತಿಗಳು ಮತ್ತು ಬಿಜೆಪಿ ಹಾಗೂ ಅದರಂತಹ ಪಕ್ಷಗಳ ವಿರುದ್ಧ ನಿಜವಾದ ಹೋರಾಟ ಕರ್ನಾಟಕದಲ್ಲಿ ಎಲ್‌ಪಿಜಿ ಧೋರಣೆಗಳ ವಿರುದ್ಧ ಹೋರಾಟದಲ್ಲಿ ಮೂಡಿ ಬರಬೇಕಾಗಿದೆ. ಇದರಿಂದ ಮಾತ್ರವೇ ಕರ್ನಾಟಕದ ಜನತೆಗೆ ರಾಜ್ಯದ ನಿರ್ವಹಣೆಯಲ್ಲಿ ಅಗ್ರಸ್ಥಾನ ಮತ್ತು ಜನತೆಯ ಹಿತಾಸಕ್ತಿಯಿಂದ ಮಾತ್ರವೇ ರಾಜ್ಯದ ಆಡಳಿತ ನಡೆಯುವಂತೆ ಮಾಡಲು ಸಾಧ್ಯ.

ನಾವು ಇದರ ಪ್ರತಿಪಾದಕರಾಗಿ ಆಂದೋಲನಗಳನ್ನು ನಡೆಸಬೇಕಾಗಿದೆಯಷ್ಟೇ.

ಕನ್ನಡ ವಾರಪತ್ರಿಕೆ

ಈ ವಾರ ಸಿಎಜಿ ವರದಿಗಳೇ ಬಹಳ ಸುದ್ದಿಯಲ್ಲಿದ್ದು ಯುಪಿಎ-2 ಮತ್ತು ಅದರ ನೇತೃತ್ವ ವಹಿಸಿರುವ ಕಾಂಗ್ರೆಸಿನ ವಕ್ತಾರರು ಆಕ್ರೋಶ ವ್ಯಕ್ತಪಡಿಸುವಷ್ಟು ಮುಜುಗರ ತಂದಂತಿದೆ. ಕಾಮನ್ವೆಲ್ತ್ ಕ್ರೀಡಾಕೂಟ ಹಗರಣದ ವರದಿಯ ಆಧಾರದಲ್ಲಿ ದಿಲ್ಲಿಯ ಕಾಂಗ್ರೆಸ್ ಮುಖ್ಯಮಂತ್ರಿ ರಾಜೀನಾಮೆಯೇನೂ ಕೊಡಬೇಕಾಗಿಲ್ಲ ಎಂದು ಸಮರ್ಥಿಸಿಕೊಳ್ಳುವಷ್ಟರಲ್ಲಿ, ಕೇರಳದ ಪಾಮೊಲಿನ್ ಆಮದು ಹಗರಣದಲ್ಲಿ ಈಗಿನ ಕಾಂಗ್ರೆಸ್ ಮುಖ್ಯಮಂತ್ರಿಗಳು ಆಗ ಹಣಕಾಸು ಮಂತ್ರಿಯಾಗಿ ವಹಿಸಿದ ಪಾತ್ರದ ತನಿಖೆ ಅಗತ್ಯ ಎಂದು ವಿಜಿಲೆನ್ಸ್ ಕೋರ್ಟಿನ ಆದೇಶದ ಹಿನ್ನೆಲೆಯಲ್ಲಿ ರಾಜೀನಾಮೆ ಕೊಡಲು ಸಿದ್ಧರಿದ್ದರೂ, ಅದರ ಅಗತ್ಯವಿಲ್ಲ ಎಂದು ಸಮಜಾಯಿಷಿ ಕೊಡಬೇಕಾಗಿ ಬಂದಿದೆ. ಈ ನಡುವೆ ಮನಮೋಹನ ಸಿಂಗ್‌ರವರು ಸೂಪರ್ ಮಂತ್ರಿಯೇನೂ ಅಲ್ಲವಲ್ಲ ಎಂದು ಅವರು ನೇಮಿಸಿದ ಯೋಜನಾ ಆಯೋಗದ ಉಪಾಧ್ಯಕ್ಷರು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಆ ಭರದಲ್ಲಿ ಅವರು 'ಪ್ರಧಾನ' ಮಂತ್ರಿಗಳು, ತಮ್ಮ ಸಂಪುಟದ ಮಂತ್ರಿಗಳ ಕೆಲಸಗಳ ಪರಿಣಾಮಗಳ ಬಗ್ಗೆ ದೇಶಕ್ಕೆ ಉತ್ತರ ಕೊಡಲು, ತಮ್ಮ ಬಳಿ ನೇರವಾಗಿ ಗಂಭೀರ ದೂರುಗಳು ಬಂದಾಗಲಾದರೂ ಅದರತ್ತ ಗಮನ ಹರಿಸುವುದಕ್ಕೆ ಬಾಧ್ಯರು ಎಂಬುದನ್ನು ಅವರು ಮರೆತಂತಿದೆ.




ವೇದರಾಜ ಎನ್.ಕೆ.

ಜಾಗತೀಕರಣದ ನೀತಿಗಳು

ಪಾಠ ಕಲಿಯಲಾರದ ಯುಪಿಎ-2 ಸರಕಾರ

ಜಾಗತಿಕ ಆರ್ಥಿಕ ಕುಸಿತವನ್ನು ತಂದ ಬೃಹತ್ ಹಣಕಾಸು ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳುವ ಬದಲು ಅಮೆರಿಕಾ ಸರಕಾರ ಅವರನ್ನು ತಾವೇ ಸೃಷ್ಟಿಸಿದ ಬಿಕ್ಕಟ್ಟಿನಿಂದ ಪಾರು ಮಾಡಲಿಕ್ಕಾಗಿ ಸರಕಾರದ ಖಜಾನೆಯಿಂದ, ತೆರಿಗೆದಾರರ ನೂರಾರು ಕೋಟಿ ಡಾಲರುಗಳನ್ನು ಸುರಿದುದರ ಫಲವಾಗಿ ಅದೀಗ ಸಾಲ ಬಿಕ್ಕಟ್ಟಿಗೆ ಸಿಲುಕಿಕೊಂಡು ಇಡೀ ಜಗತ್ತಿನ ಶೇರು ಮಾರುಕಟ್ಟೆಗಳು ತಲ್ಲಣಗೊಂಡಿರುವುದು, ಭಾರತದ ಶೇರು ಮಾರುಕಟ್ಟೆಯಲ್ಲಿ ಒಂದು ವಾರದಲ್ಲಿಯೇ ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂಬ ಸಂಗತಿ ಯುಪಿಎ-2 ಸರಕಾರವನ್ನೂ ತಲ್ಲಣಗೊಳಿಸಿದೆ. ಆದರೂ ಏನೇನೂ ಭೀತಿ ಬೇಡ ಎಂದು ಯುಪಿಎ-2 ಹಣಕಾಸು ಮಂತ್ರಿಗಳು ಭಾರತದ ಮೇಲ್ವರ್ಗಗಳಿಗೆ ಭರವಸೆ ಕೊಟ್ಟಿದ್ದಾರೆ. ಅಮೆರಿಕಾದಲ್ಲಿ, ಯುರೋಪಿನಲ್ಲಿ ಏನೇ ಆಗಲಿ, ಮುಂದೆಯೂ ಭಾರತ ಅಂತರ್ರಾಷ್ಟ್ರೀಯ ಹೂಡಿಕೆದಾರರಿಗೆ ಆಕರ್ಷಕವಾಗಿಯೇ ಉಳಿಯುತ್ತದೆ, ಅದಕ್ಕೆ ಬೇಕಾದ 'ಸುಧಾರಣೆಗಳನ್ನು' ಮುಂದುವರೆಸಲಾಗುವುದು, ಬಾಕಿ ಉಳಿದಿರುವ ಸುಧಾರಣೆಗಳನ್ನು ಪೂರೈಸಲಾಗುವುದು ಎಂದು ಅಂತರ್ರಾಷ್ಟ್ರೀಯ ಹೂಡಿಕೆದಾರರಿಗೆ ವಿಶೇಷ ಭರವಸೆ ನೀಡಲು ಮರೆಯಲಿಲ್ಲ. ಭಾರತದ ಆರ್ಥಿಕದ ಮೂಲಾಂಶಗಳು ಬಲಿಷ್ಟವಾಗಿವೆ ಎಂಬ ಮಾತನ್ನು ಅವರು ಪುನರುಚ್ಚರಿಸಿದ್ದಾರೆ.

ಸಂಸತ್ತಿನಲ್ಲಿ ಬೆಲೆಯೇರಿಕೆ, ಭ್ರಷ್ಟಾಚಾರಗಳ ಬಗ್ಗೆ ಯುಪಿಎ-2 ಸರಕಾರವನ್ನು ತರಾಟೆಗೆ ತಗೊಳ್ಳುವ ಪೋಸು ಕೊಡುತ್ತಿರುವ ಬಿಜೆಪಿಯ ಒಬ್ಬ ಮುಖಂಡರು, ಮಾಜಿ ಹಣಕಾಸು ಮಂತ್ರಿಗಳೂ ಆದ ಯಶವಂತ ಸಿನ್ಹಾ ಕೂಡ ಭೀತಿ ಬೇಕಿಲ್ಲವೆಂದು ದನಿಗೂಡಿಸಿದ್ದಾರೆ. ಆದರೆ, ಈ ಭರವಸೆಗೆ ಕಾರಣ ನಮ್ಮ ಹಣಕಾಸು ವಲಯದಲ್ಲಿ ಈಗಲೂ ಸಾರ್ವಜನಿಕ ವಲಯದ ಬ್ಯಾಂಕುಗಳ ಪಾತ್ರವೇ ಪ್ರಧಾನವಾಗಿರುವುದು ಒಂದು ಮುಖ್ಯ ಕಾರಣ ಎಂದೂ ಒಪ್ಪಿಕೊಂಡಿದ್ದಾರೆ. ಆದರೆ ಯುಪಿಎ-2 ಸರಕಾರ ಹಣಕಾಸು ವಲಯದ 'ಸುಧಾರಣೆ'ಗಳನ್ನು ತೀವ್ರಗೊಳಿಸುವ ಹೆಸರಿನಲ್ಲಿ ಈ ಪಾತ್ರವನ್ನೇ ಬುಡಮೇಲು ಮಾಡಲು ಹೊರಟಿದೆ, ಇದನ್ನು ಪ್ರತಿಭಟಿಸಿ ಒಂದು ವಾರದ ಹಿಂದೆಯಷ್ಟೇ(ಆಗಸ್ಟ್ 5ರಂದು) ದೇಶಾದ್ಯಂತ


ಕೃಪೆ: ದಿ ಹಿಂದೂ

10 ಲಕ್ಷ ಬ್ಯಾಂಕ್ ನೌಕರರು ಮತ್ತೆ ಮುಷ್ಕರ ನಡೆಸಿದ್ದಾರೆ. ಯುಪಿಎ-1 ಸರಕಾರದ ಅವಧಿಯಲ್ಲಿ ಅದಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿದ್ದ ಎಡಪಕ್ಷಗಳ ಸತತ ಒತ್ತಡಗಳಿಂದಾಗಿ ಈ 'ಸುಧಾರಣೆ'ಗಳಿಗೆ ಲಗಾಮು ಬಿದ್ದದ್ದೇ 2008ರಲ್ಲಿ ಜಾಗತಿಕ ಹಣಕಾಸು ಕುಸಿತದ ದುಷ್ಪರಿಣಾಮಗಳು ಭಾರತವನ್ನು ತೀವ್ರವಾಗಿ ಬಾಧಿಸದಂತೆ ತಡೆದದ್ದು, ಈಗ ಯುಪಿಎ-ಎನ್‌ಡಿಎ ಹಾಲಿ-ಮಾಜಿ ಹಣಕಾಸು ಮಂತ್ರಿಗಳು ಭರವಸೆ ನೀಡಲು ಅವಕಾಶ ಉಳಿಸಿಕೊಂಡದ್ದು ಎಂಬ ಪಾಠವನ್ನು ಕಲಿಯಲು ಈಗಲೂ ಯುಪಿಎ-2 ಸರಕಾರ ಸಿದ್ಧವಿದ್ದಂತಿಲ್ಲ.

'ಬಾಕಿ ಉಳಿದಿರುವ ಸುಧಾರಣೆಗಳ ಅನುಷ್ಠಾನವನ್ನು ತ್ವರಿತಗೊಳಿಸಲಾಗುವುದು' ಎಂಬ ಹಣಕಾಸು ಮಂತ್ರಿಗಳ ಭರವಸೆ ಮುಖ್ಯ ಅಂಶವನ್ನು ಮರೆತಿದೆ ಎಂದು ಆರ್ಥಿಕ ತಜ್ಞ ಪ್ರೊ. ಸಿ.ಪಿ.ಚಂದ್ರಶೇಖರ್ ಹೇಳಿದ್ದಾರೆ. ಇಲ್ಲಿ ಸಮಸ್ಯೆ ಭಾರತ ಸಾಕಷ್ಟು 'ಸುಧಾರಣೆ' ಮಾಡಿಲ್ಲ ಎಂಬುದಲ್ಲ, ಬದಲಿಗೆ ಇದುವರೆಗೆ ಮಾಡಿರುವ 'ಸುಧಾರಣೆ'ಗಳು ಭಾರತದಲ್ಲಿನ ಹಣಕಾಸಿನ ಹರಿವನ್ನು ಈಗಾಗಲೇ ಜಾಗತಿಕ ಹಣಕಾಸಿನೊಂದಿಗೆ ಬೆಸೆದಿವೆ ಎಂಬುದೇ ಸಮಸ್ಯೆ ಎಂದು ಅವರು ವಿಶ್ಲೇಷಿಸಿದ್ದಾರೆ. ನಮ್ಮ ಮೀಸಲು ನಿಧಿ ಹೆಚ್ಚಿರುವುದು ಚೀನಾದಂತೆ ಚಾಲ್ತಿ ಖಾತೆ ಮಿಗುತೆಗಳಿಂದಲ್ಲ, ಬದಲಿಗೆ ವಿದೇಶಿ ಹೂಡಿಕೆದಾರರ ಹಣದಿಂದ. ಆದ್ದರಿಂದ ಈ ವಿದೇಶಿ ಹೂಡಿಕೆದಾರರ ಲಾಭದಾಹವನ್ನು ತಣಿಸುವುದು ನಮ್ಮ ಆರ್ಥಿಕ ಸ್ಥಿರತೆಗೆ ಮುಖ್ಯವಾಗುತ್ತದೆಯೇ ಹೊರತು ನಮ್ಮ ಆರ್ಥಿಕ ಮೂಲಾಂಶಗಳು ಬಲಿಷ್ಟವಾಗಿದೆಯೇ ಇಲ್ಲವೇ ಎಂಬ ಸಂಗತಿಯಲ್ಲ. ಈ ಪಾಠವನ್ನೂ ಯುಪಿಎ-2 ಮುಖಂಡರು ಕಲಿತಂತಿಲ್ಲ.

ಭಾರತದ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ಕ್ಕೆ ಹೋಲಿಸಿದರೆ ಸಾರ್ವಜನಿಕ ಸಾಲದ ಪ್ರಮಾಣ 2007ರಿಂದ 2010ರ ನಡುವೆ 75.8%ದಿಂದ 66.2%ಕ್ಕೆ ಇಳಿದರೂ, ಈಗಲೂ ಅದು ಏಶ್ಯಾದ ದೇಶಗಳಲ್ಲಿ ಅತಿ ಹೆಚ್ಚಿನ ಸಾಲ ಪ್ರಮಾಣ. ಮಲೇಷ್ಯಾದ್ದು 55.1%, ಪಾಕಿಸ್ತಾನದ್ದು 54.1%, ಫಿಲಿಪೈನ್ಸ್ 47%, ಥಾಯ್ಲೆಂಡ್ 43.7%, ಇಂಡೋನೇಸ್ಯಾ 25.4% ಹಾಗೂ ಚೀನಾ 16.5%. ಈಗ ಹಣಕಾಸು ಮಾರುಕಟ್ಟೆಗಳ ಗಮನ ಸಾರ್ವಜನಿಕ ಸಾಲಪ್ರಮಾಣದತ್ತ- ಗ್ರೀಸ್, ಸ್ಪೇನ್, ಪೊರ್ತುಗಾಲ್ ಮತ್ತಿತರ ದೇಶಗಳ ಅನುಭವಗಳು ಇದನ್ನು ತೋರಿಸುತ್ತಿವೆ ಎಂಬ ಸಂಗತಿಯತ್ತ ಈ ಆರ್ಥಿಕ ತಜ್ಞರು ಗಮನ ಸೆಳೆದಿದ್ದಾರೆ. ಯುಪಿಎ-2 ಸರಕಾರ ಇದಕ್ಕೆ ಕುರುಡಾಗಿ ಸಾಗುತ್ತಿದೆ.

★

'ಬೇಲಿಯೇ ಹೊಲ ಮೇದರೆ?'- ಸಿಎಜಿಯ ಇನ್ನೊಂದು ಛಾಟಿಯೇಟು

ಕಾಮನ್ವೆಲ್ತ್ ಕ್ರೀಡಾಕೂಟ ಹಗರಣದಲ್ಲಿ ಕೂಟದ ಸಂಘಟನಾ ಸಮಿತಿಯದ್ದು ಮಾತ್ರವಲ್ಲ, ದಿಲ್ಲಿ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ಪಾತ್ರವೂ ಇದೆ ಎಂದು ಬೊಟ್ಟು ಮಾಡಿರುವ ಮಹಾ ಲೆಕ್ಕ ಪರಿಶೋಧನಾಕಾರರ ಕಚೇರಿಯ (ಸಿಎಜಿ) ವರದಿಯ ಮೇಲೆ ಕಾಂಗ್ರೆಸ್ ವಕ್ತಾರರು ಹರಿಹಾಯುತ್ತಿದ್ದಂತೆಯೇ, ಅದು ತನ್ನ 'ಹದ್ದು' ಮೀರುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದಂತೆಯೇ, ಅದೇ ಸಿಎಜಿ ಅದೇ ಯುಪಿಎ-2 ಸರಕಾರದ ಇನ್ನೊಂದು ಹಗರಣದ ಮೇಲಿನ, ಅಂದರೆ ಆದರ್ಶ ಹೌಸಿಂಗ್ ಸೊಸೈಟಿ ಹಗರಣದ ಮೇಲಿನ ತನ್ನ ವರದಿಯಲ್ಲಿ ಹೇಳಿರುವ ಮಾತಿದು. ಮಹಾರಾಷ್ಟ್ರದ ಮೂವರು ಮುಖ್ಯಮಂತ್ರಿಗಳು, ಉನ್ನತ ಮಿಲಿಟರಿ ಮತ್ತು ಸರಕಾರೀ ಅಧಿಕಾರಿಗಳ ದುಷ್ಟಕೂಟ ಆಡಳಿತವನ್ನೇ ಬುಡಮೇಲು ಮಾಡಿ, ಮೇಲೆ ಹೇಳಿದ ಗಾದೆ ಮಾತಿಗೆ ಜ್ವಲಂತ ಉದಾಹರಣೆಯಾಗಿರುವ ಹಗರಣವಿದು ಎಂದು

ಪುಟ 15ಕ್ಕೆ

ಜನಾರೋಗ್ಯಕ್ಕಿಂತ ಕೀಟನಾಶಕ ತಯಾರಕರ ಹಿತ ಮುಖ್ಯ!

ಈ ಅಂಕಣದಲ್ಲಿ ವರದಿ ಮಾಡಿದ ಎಂಡೋಸಲ್ಫಾನ್ ಕುರಿತಂತೆ ಸರ್ವೋಚ್ಚ ನ್ಯಾಯಾಲಯದಲ್ಲಿ ಯುಪಿಎ-2 ಸರಕಾರದ ಅಫಿಡವಿಟ್ ಮತ್ತು ಕೀಟನಾಶಕ ತಯಾರಕರ ವಕೀಲ ಹಾಗೂ ಕಾಂಗ್ರೆಸಿನ ಒಬ್ಬ ವಕ್ತಾರನೂ ಆಗಿರುವ ಅಭಿಷೇಕ್ ಸಿಂಗ್ವಿಯ ವಾದವನ್ನು ನೋಡಿದವರಿಗೆ ಹೀಗನಿಸದಿರದು. ಇಲ್ಲಿ ವಿಜ್ಞಾನಕ್ಕಿಂತ ವಾಣಿಜ್ಯದ ಕೈಮೇಲಾಗಿದೆ, 'ಸಿನಿಕತನ' ಎಂಬ ಪದಕ್ಕೆ ಇದು ಅತ್ಯುತ್ತಮ ಉದಾಹರಣೆ ಎಂದು ಒಬ್ಬರು ಉದ್ಗರಿಸಿದ್ದಾರೆ. ಸುಪ್ರಿಂ ಕೋರ್ಟಿನಲ್ಲಿ ಈ ಕೀಟನಾಶಕವನ್ನು ನಿಷೇಧಿಸುವಂತೆ ಅರ್ಜಿ ಸಲ್ಲಿಸಿರುವ ಡಿವೈಎಫ್‌ಐ 'ಕೇಂದ್ರ ಸರಕಾರ ತನ್ನ ನಿಲುವನ್ನು ವಿವರಿಸುವ ಬದಲು ಎಂಡೋಸಲ್ಫಾನ್ ತಯಾರಿಸುತ್ತಿರುವ ಎಕ್ಸೆಲ್ ಗುಂಪಿನ ಪರವಾಗಿ ಲಾಬ್ಬಿ ನಡೆಸಲು ಹೊರಟಿರುವುದಾದರೂ ಏಕೆ' ಎಂದು ಪ್ರಶ್ನಿಸಿದೆ. ಡಿವೈಎಫ್‌ಐ ಈಗಾಗಲೇ ದೇಶದೆಲ್ಲೆಡೆಗಳಿಂದ ಜನಾರೋಗ್ಯಕ್ಕೆ ಇದರ ಗಂಭೀರ ಕೇಡುಗಳನ್ನು ಕುರಿತ 315 ವಿಭಿನ್ನ ಅಧ್ಯಯನಗಳನ್ನು ಸಂಗ್ರಹಿಸಿದ್ದು ಅವುಗಳಲ್ಲಿ ಕೆಲವನ್ನು ನ್ಯಾಯಾಲಯಕ್ಕೂ ಸಲ್ಲಿಸಿದೆ.

ಅತ್ತ ಕೇರಳದ ಹಿರಿಯ ಕಾಂಗ್ರೆಸ್ ಮುಖಂಡ ಶ್ರೀಧರನ್ ಅವರು ಸಿಂಗ್ವಿ ಕೋರ್ಟಿನಲ್ಲಿ ಕೀಟನಾಶಕ ಉತ್ಪಾದಕರನ್ನು ಪ್ರತಿನಿಧಿಸಿರುವುದನ್ನು ಬಲವಾಗಿ ಟೀಕಿಸಿದ್ದಾರೆ; ಕಾಂಗ್ರೆಸ್ ವಕ್ತಾರ ಕೋರ್ಟಿನಲ್ಲಿ ಏನೇ ಹೇಳಿರಲಿ, ಎಂಡೋಸಲ್ಫಾನ್ ನಿಷೇಧ ಕುರಿತಂತೆ ತಮ್ಮ ಪಕ್ಷದ ನಿಲುವು ಬದಲಾಗಿಲ್ಲ ಎಂದು ಕೇರಳದ ಮುಖ್ಯಮಂತ್ರಿಗಳು ಪುನರುಚ್ಚರಿಸಿದ್ದಾರೆ. ಆದರೆ ಮತ್ತೆ ಅವೇ ಪ್ರಶ್ನೆಗಳು- ಏನದು ನಿಲುವು, ಅವರ ಪಕ್ಷದ ನೇತೃತ್ವದ ಕೇಂದ್ರ ಯುಪಿಎ-2 ಸರಕಾರದ ನಿಲುವು ಇದಕ್ಕಿಂತ ಭಿನ್ನವಾಗಿದೆಯೇ? ಇಲ್ಲವಾಗಿದ್ದರೆ ಆ ವಕ್ತಾರನ ವಿರುದ್ಧ ಕ್ರಮ ಕೈಗೊಂಡಿಲ್ಲವೇಕೆ? ಅಥವ ಕೀಟನಾಶಕ ತಯಾರಕ ಲಾಬ್ಬಿ ಮತ್ತು ಕಾಂಗ್ರೆಸ್ ನಡುವೆ 'ಅಪವಿತ್ರ ಶಾಮೀಲು' ಇದೆಯೆಂಬ ಟೀಕೆಯೇ ನಿಜವಿರಬಹುದೇ? •

ಜಗದಗಲ

ಶರತ್‌ಚಂದ್ರ

ತಾರತಮ್ಯ-ದೌರ್ಜನ್ಯಗಳ ವಿರುದ್ಧ ಸ್ಫೋಟಿಸಿದ ಅತೃಪ್ತಿ

ಬ್ರಿಟನಿನಲ್ಲಿ ವ್ಯಾಪಕ ದೊಂಬಿ

ಲಂಡನಿನಲ್ಲಿ ಆರಂಭವಾಗಿ ಬ್ರಿಟನಿನ ಹಲವು ನಗರಗಳಲ್ಲಿ ಭಾರಿ ದೊಂಬಿ ಮತ್ತು ಅರಾಜಕತೆ ಆರಕ್ಕೂ ಹೆಚ್ಚು ದಿನಗಳ ಕಾಲ ಹಬ್ಬಿದೆ. ಲಂಡನಿನ ಟೊಟೆನ್ ಹ್ಯಾಮ್ ಎಂಬಲ್ಲಿ ಹತ್ತಿದ ಒಂದು ಕಿಡಿಯಿಂದ ಲಂಡನ್ ಮತ್ತು ಐದಕ್ಕೂ ಹೆಚ್ಚು ನಗರಗಳ ಹಲವು ಪ್ರದೇಶಗಳು ಹತ್ತಿ ಉರಿಯುತ್ತಿವೆ. ಲೂಟಿ, ಕಾರು ಅಂಗಡಿಗಳು ಕಂಡದ್ದಕ್ಕೆಲ್ಲಾ ಬೆಂಕಿ ಕೊಡುವುದು, ಪೋಲಿಸರ ಮೇಲೆ ದಾಳಿಗಳು – ವ್ಯಾಪಕವಾಗಿ ಹಬ್ಬಿದೆ. ನೂರಾರು ಜನರ ಗ್ಯಾಂಗುಗಳು ಹಗಲು ರಾತ್ರಿಯೆನ್ನದೆ ದೊಂಬಿಯಲ್ಲಿ ತೊಡಗಿವೆ. ಈ ಪ್ರದೇಶಗಳಲ್ಲಿ ಭಾರಿ ಪೋಲೀಸು ತುಕಡಿಗಳನ್ನು ಹಾಕಲಾಗಿದ್ದರೂ, ದೊಂಬಿ ಯಾವುದೇ ನಿಯಂತ್ರಣಕ್ಕೆ ಬರುತ್ತಿಲ್ಲ. 1980 ರ ದಶಕದಲ್ಲಿ ಟೋರಿ ಆಡಳಿತದ ಕಾಲದಲ್ಲೇ ನಡೆದ ಭಾರೀ ದೊಂಬಿಯ ನಂತರ ನಡೆದ ಅತಿ ದೊಡ್ಡ ದೊಂಬಿ ಇದು ಎನ್ನಲಾಗಿದೆ. ಆಗಲೂ ಇದೇ ರೀತಿಯ ಪೋಲಿಸರ ದಮನ ದೊಂಬಿಯ ಕಿಡಿ ಆಗಿತ್ತು ಎಂಬುದು ಆಕಸ್ಮಿಕ ಏನಲ್ಲ.

ಮೂದಲಿಕೆ ಮಾತುಗಳು

ಆಳುವ ಮತ್ತು ವಿರೋಧ ಪಕ್ಷಗಳ ನಾಯಕರು ವಿದೇಶಗಳಲ್ಲಿ ತಮ್ಮ ಬೇಸಗೆ ರಜಾ-ಮಜ ಕಡಿತ ಮಾಡಿ ಲಂಡನಿಗೆ ಧಾವಿಸಿದ್ದಾರೆ. ಈ ಪ್ರದೇಶಗಳಲ್ಲಿ ಪೋಲಿಸರಿಗೆ ಹೆಚ್ಚಿನ ದಮನ ಅಧಿಕಾರ ಕೊಡುವ ಮತ್ತು ಸೈನ್ಯವನ್ನು ಕಳಿಸುವ ಬಗ್ಗೆ ಸರ್ಕಾರ ಯೋಚಿಸುತ್ತಿದೆ. ಈಗಾಗಲೇ ತೀವ್ರ ಸಾರ್ವಜನಿಕ ಸೌಲಭ್ಯ ವೆಚ್ಚ ಕಡಿತದಿಂದ ಜನಾಕ್ರೋಶಕ್ಕೆ ಗುರಿಯಾಗಿರುವ ಬ್ರಿಟನಿನ ಟೋರಿ-ಲಿಬರಲ್ ಸಮ್ಮಿಶ್ರ ಸರ್ಕಾರಕ್ಕೆ ಇದೊಂದು ತೀವ್ರ ಬಿಕ್ಕಟ್ಟು ಆಗಿದೆ. ಲಂಡನ್ ಒಲಿಂಪಿಕ್ಸ್‌ನ ಕೆಲವೇ ತಿಂಗಳುಗಳ ಮೊದಲು ಈ ದೊಂಬಿ ಸರ್ಕಾರಕ್ಕೆ ಮುಖಭಂಗಕ್ಕೂ ಕಾರಣವಾಗಿದೆ. "ಮಾನವ ಹಕ್ಕುಗಳ ಉಲ್ಲಂಘನೆ" ಬಗ್ಗೆ ಬ್ರಿಟಿಷ್ ಟೀಕೆಗೆ ಹಿಂದೆ ಗುರಿಯಾದ ಹಲವು ನಾಯಕರಿಂದ, "ಬೇರೆಯವರಿಗೆ ಉಪದೇಶ ಮಾಡುವ ಮೊದಲು, ನಿಮ್ಮ ಮನೆ ಬೆಂಕಿ ಆರಿಸಿ" ಎಂಬ



ಮೂದಲಿಕೆ ಕೇಳಬೇಕಾಗಿದೆ. ಇಂತಹ ಮೂದಲಿಕೆಗಳು ಜಿಂಬಾಬ್ವೆ, ಇರಾನ್ ಮತ್ತು ಈಜಿಪ್ಟ ಸರ್ಕಾರಗಳ ನಾಯಕರಿಂದ ಬಂದಿವೆ.

ದೊಂಬಿ ಆರಂಭಕ್ಕೆ

ಈ ದೊಂಬಿಗಳಿಗೆ ಕಿಡಿಯಾದ ಘಟನೆ ಲಂಡನ್ನಿನ ಟೊಟೆನ್ ಹ್ಯಾಮ್ ಎಂಬ ಕಪ್ಪು ವರ್ಣೀಯರು ಬಹಸಂಖ್ಯಾತರಿರುವ ಪ್ರದೇಶದಲ್ಲಿ ನಡೆದಿದೆ. ಕರಿಯ ಯುವಕನೊಬ್ಬನನ್ನು ಪೋಲಿಸರು ಗುಂಡಿಕ್ಕಿ ಕೊಂದರು. ಯುವಕ ತಮ್ಮನ್ನು ಬೆದರಿಸಿದ ಎಂದು ಪೋಲೀಸರ ಹೇಳಿಕೆ. ಯುವಕ ನಿರಪರಾಧಿ ಎಂದು ಆ ಪ್ರದೇಶದ ಸಮುದಾಯದ ನಾಯಕರ ಹೇಳಿಕೆ. ಈ ಕೊಲೆ ಪ್ರತಿಭಟಿಸಿ ಪೋಲಿಸ್ ಸ್ಟೇಶನ್ ಮುಂದೆ ಶಾಂತಿಯುತ ಧರಣಿ ನಡೆದಿದೆ. ಆಗಲೂ ಅವರ ಜತೆ ಮಾತುಕತೆ ಮಾಡಲು, ಸಮಾಧಾನ ಮಾಡಲು ಯಾವುದೇ ಪೋಲಿಸ್ ಅಧಿಕಾರಿಗಳು ಬರದಿದ್ದದ್ದು ಯುವಕರನ್ನು ಕೆರಳಿಸಿದೆ. ಕೆಲವು ಕುಪಿತ ಯುವಕರು ದೊಂಬಿ ಆರಂಭಿಸಿದರು. ಪೋಲಿಸ್ ಅಧಿಕಾರಿಗಳು ಆ ಮೇಲೂ ಎಚ್ಚೆತ್ತು ಸಂಧಾನಕ್ಕೆ ಪ್ರಯತ್ನಿಸಲಿಲ್ಲ. ಕಿಡಿಯಾದ ಘಟನೆ ಬಗೆಗೂ ಯಾವುದೇ ಮಾಹಿತಿ, ಸಮಜಾಯಿಷಿ ಬರದಿದ್ದದ್ದು ದೊಂಬಿ ವ್ಯಾಪಕವಾಗಿ ಹರಡಲು ಕಾರಣವಾಯಿತು.

ಪೋಲಿಸರ, ಸರ್ಕಾರದ ಮತ್ತು ಒಟ್ಟಾರೆ ವ್ಯವಸ್ಥೆ ವಿರುದ್ಧ ದೀರ್ಘ ಕಾಲ ಅದುಮಿಟ್ಟಿದ್ದ ಕೋಪ, ಆಕ್ರೋಶ ಸ್ಫೋಟಗೊಂಡಿತು. ಅದು ಜನಾಂಗೀಯ ಅಸಮಾನತೆ ಮತ್ತು ದಮನದ ವಿರುದ್ಧ ಬರಿಯ ಕರಿಯರ ಸ್ಫೋಟವಾಗಿ ಉಳಿಯಲಿಲ್ಲ. ದೊಂಬಿಗಳಲ್ಲಿ ಕರಿಯ, ಬಿಳಿಯ, ಏಶ್ಯನ್ ಯುವಕರ ಗುಂಪುಗಳು ಭಾಗವಹಿಸಿದ್ದು ಇದನ್ನು ತೋರಿಸುತ್ತದೆ. ಇದೊಂದು ಕಾನೂನು ವ್ಯವಸ್ಥೆಯ ಸಮಸ್ಯೆ, ಯುವಕರನ್ನು ಸರಿಯಾಗಿ ನೋಡಿಕೊಳ್ಳಲಾಗದ ಪಾಲಕರ ವೈಫಲ್ಯ ಎಂಬ ಬ್ರಿಟಿಷ್ ಆಳುವವರ ಹಾಸ್ಯಾಸ್ಪದ ಹೇಳಿಕೆಗಳು, ಈ ಸಾಮಾಜಿಕ ಸ್ಫೋಟವನ್ನು ಅವರು ಅರ್ಥ ಮಾಡಿಕೊಂಡಿಲ್ಲ ಅಥವಾ ಸಾರ್ವಜನಿಕವಾಗಿ ಒಪ್ಪಿಕೊಳ್ಳಲು ತಯಾರಿಲ್ಲ ಅಂತ ತೋರಿಸುತ್ತದೆ.

ಅಭಿವೃದ್ಧಿ ಅಸಮಾನತೆ

1980 ರ ದಶಕದ ನಂತರ ಬ್ರಿಟನ್ ವರ್ಗ ಮತ್ತು ಜನಾಂಗಗಳ ನಡುವೆ ಭಾರೀ ಕಂದಕಗಳು ಉಂಟಾಗಿವೆ. 1990 ದಶಕದ ನವ-ಉದಾರವಾದಿ ನೀತಿಗಳ ನಂತರ ಅದು ವಿಪರೀತವಾಗಿ ಹೆಚ್ಚಿದೆ. ಬ್ರಿಟನಿನ ಅಸಮಾನತೆ ಅಭಿವೃದ್ಧಿ ಹೊಂದಿದ ದೇಶಗಳಲ್ಲೇ ಅತಿ ಹೆಚ್ಚು ಎನ್ನಲಾಗಿದೆ. ಬ್ರಿಟನಿನ ಶೇ. 10 ಅತಿ ಶ್ರೀಮಂತರು ಅತಿ ಬಡವರ 100 ಪಟ್ಟು ಆದಾಯ ಹೊಂದಿದ್ದಾರೆ. ಇದ್ದ ಬಡ್ಡ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆ ಯೋಜನೆಗಳು ತೀವ್ರ ಕಡಿತಕ್ಕೆ ಒಳಗಾಗಿದ್ದು ಬಹಸಂಖ್ಯಾತ ದುಡಿಯುವ ಜನರು ಮತ್ತು ಯುವಕರಲ್ಲಿ ಭವಿಷ್ಯದ ಬಗ್ಗೆ ತೀವ್ರ ಹತಾಶೆ, ಆಕ್ರೋಶ ಉಂಟಾಗಿದೆ. ಬಡ ದುಡಿಯುವ ಜನರಿರುವ ಪ್ರದೇಶಗಳು ಬೆಳವಣಿಗೆಯ ದೃಷ್ಟಿಯಿಂದಲೂ ಅವಗಣನೆಗೆ ಗುರಿಯಾಗಿವೆ. ಇದರಿಂದ ಕ್ರಿಮಿನಲ್ ಗ್ಯಾಂಗುಗಳು ಹುಟ್ಟಿಕೊಂಡಿವೆ.

ಜ್ವಾಲಾಮುಖಿಯ ಮೇಲೆ

ಈ ಗ್ಯಾಂಗುಗಳದ್ದೇ ನೆಪ ಮಾಡಿಕೊಂಡು ಎಲ್ಲಾರನ್ನು ಪೋಲಿಸರು ತೀವ್ರ ದಮನಕ್ಕೆ ಗುರಿ ಮಾಡಿದ್ದಾರೆ. ವಿನಾ ಕಾರಣ ಶಾಂತಿಯುತ ಜನರನ್ನೂ ತಡೆಯುವುದು, ತಪಾಸಣೆಗೆ ಒಳಪಡಿಸುವುದು, ಬೆದರಿಸುವುದು ಮತ್ತು ವ್ಯಾಪಕ ಭ್ರಷ್ಟಾಚಾರ – ಪೋಲಿಸರ ವಿರುದ್ಧ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಅದರಲ್ಲೂ ಕರಿಯರು ಮತ್ತು ಇತರ ಅಲ್ಪಸಂಖ್ಯಾತರು ವಿಶೇಷ ಪೋಲಿಸ್ "ಆತಿಥ್ಯ"ಕ್ಕೆ ಒಳಗಾಗುತ್ತಿರುವುದು ನಿತ್ಯ ಸತ್ಯ. ಕಳೆದ ವರ್ಷ ನಡೆದ "ಪೋಲೀಸು ಜುಲುಮ್" ಯಂತಹ 400ಕ್ಕೂ ಹೆಚ್ಚು ಘಟನೆಗಳು ನಡೆದಿದ್ದು, ಇವುಗಳ ಬಗ್ಗೆ ಯಾವುದೇ ಪೋಲಿಸ್ ಅಧಿಕಾರಿಯ ವಿರುದ್ಧ ಕ್ರಮ ಜರುಗಿಸಿಲ್ಲ. ಇದು ಆಕ್ರೋಶ ವ್ಯವಸ್ಥೆ ಬಗ್ಗೆ ಅಪನಂಬಿಕೆಯನ್ನು ಇನ್ನಷ್ಟು ಹೆಚ್ಚಿಸಿದೆ. ಬ್ರಿಟನ್ ಒಂದು ಸಾಮಾಜಿಕ ಜ್ವಾಲಾಮುಖಿಯ ಮೇಲಿದೆ. ಬಂಡವಾಳಶಾಹಿ ಅದರ ಅತ್ಯಂತ ಅಭಿವೃದ್ಧಿ ಹೊಂದಿದ ದೇಶದಲ್ಲೂ ಜನರ ಆಶೋತ್ತರಗಳನ್ನು ಈಡೇರಿಸಲಾರದು. ಬದಲಾಗಿ ಅಸಮಾನತೆ ಯಾವಾಗ ಬೇಕಾದರೂ ಸ್ಫೋಟಕ್ಕೆ ಹಾದಿ ಮಾಡಿಕೊಡಬಹುದಾದ ಸಾಮಾಜಿಕ ವಿಘಟನೆ ಸ್ಥಿತಿ ಉಂಟು ಮಾಡುತ್ತದೆ ಎಂದು ಈ ದೊಂಬಿಗಳು ತೋರಿಸಿವೆ

ಬಾಲ ಕಾರ್ಮಿಕ ಪದ್ಧತಿಯ...

ಪುಟ16 ರಿಂದ

ಬೆಳವಣಿಗೆಗೆ ಸರ್ಕಾರಗಳ ಕೊಡುಗೆ ಇದ್ದಂತಾಗಲಿಲ್ಲವೇ?

ಶಾಲೆಯ ಆಚೆ ಕಾಣೆಯಾದವರು :

ಅಂತಿಮವಾಗಿ, ವಿಶ್ವದಲ್ಲಿ 5ರಿಂದ 14 ವರ್ಷದೊಳಗಿನ 210 ಮಿಲಿಯನ್ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಅಂದರೆ ಶಾಲೆಗೆ ಹಾಜರಾಗಬೇಕಾದ ಒಟ್ಟು ಪ್ರಮಾಣದ 1/5 ಮಕ್ಕಳು ಅಕ್ಷರ ಕಲಿಕೆಯಿಂದ ದೂರವಿದ್ದಾರೆ. ಭಾರತದ ಸಂದರ್ಭಕ್ಕೆ ಹೋಲಿಸಿದರೆ, ಅಕ್ಷರ ಕಲಿಕೆಯಿಂದ ಹೊರಗಿರುವ ಮಕ್ಕಳ ಸರಾಸರಿಗೆ ಅಗಾಧ ಕೊಡುಗೆ ನಮ್ಮದೇ. ಅಂದರೆ, 5ರಿಂದ 14 ವರ್ಷದೊಳಗಿನ 203 ಮಿಲಿಯ ಮಕ್ಕಳಲ್ಲಿ 116 ಮಿಲಿಯ ಮಕ್ಕಳು ಶಾಲೆಯಲ್ಲಿ ಹಾಜರಾದರೆ, ಉಳಿದಂತೆ 87 ಮಿಲಿಯ ಮಕ್ಕಳಲ್ಲಿ 12.6 ಮಿಲಿಯ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ಬಾಲ ಕಾರ್ಮಿಕರಾಗಿದ್ದಾರೆ. ಇನ್ನುಳಿದ 74 ಮಕ್ಕಳ ಸ್ಥಿತಿ ಏನಾಗಿದೆ ಎಂಬುದು ಗೊತ್ತಿಲ್ಲ ಎಂದು ಸರ್ಕಾರದ ಅಂಕಿ-ಸಂಖ್ಯೆ ಹೇಳುತ್ತಿದೆ. ಕರ್ನಾಟಕದ ಅರ್ಹ ವಯಸ್ಸಿನ ಒಟ್ಟು 10 ಮಿಲಿಯನ್ ಮಕ್ಕಳಲ್ಲಿ 0.85 ಮಿಲಿಯನ್ ಮಕ್ಕಳು ಶಾಲೆಯಿಂದ ಹೊರಗೆ.

ಹಾಗಾದರೆ, ಈ ಮಕ್ಕಳಿಗೇನು ಬೇಕು?

ಅವರೇ ಅಲ್ಲವೇ ಮುಂದಿನ ಪ್ರಕಾಶಿಸುವ ಭಾರತದ ಹೊಳಪುಗಳು? ಆಹಾರ-ಆರೋಗ್ಯ- ಶಿಕ್ಷಣ, ಪ್ರೀತಿ, ಗೌರವ, ಸಾಕ್ಷರತೆ, ರಕ್ಷಣೆ, ಮನೋರಂಜನೆ, ಪ್ರೋತ್ಸಾಹ, ಸ್ವಂತ ಸೂರು, ಹಾಸಲು-ಹೊದಿಯಲು-ಉಡಲು ಬಟ್ಟೆ, ವಿಶ್ರಾಂತಿ, ತನ್ನನ್ನು ಹೆತ್ತವರಿಗೆ ಕೈತುಂಬ ಕೆಲಸ ಅದಕ್ಕೆ ತಕ್ಕ ಕೂಲಿ (ಗ್ರಾಹಕ ಬೆಲೆ ಸೂಚ್ಯಂಕಕ್ಕೆ ಅನುಗುಣವಾಗಿ), ದುಡಿದುಣ್ಣಲು ಭೂಮಿ ಹಕ್ಕು ಆ ಮಗು ನಿರೀಕ್ಷಿಸಿದರೆ ತಪ್ಪೇ? ಅದನ್ನೂ ಈ ಸರ್ಕಾರದಿಂದ ಪೂರೈಸಲಾರದಷ್ಟು ಭಾರತ ಬಡವಾಗಿದೆಯೇ? ಕೊಳ್ಳುಬಾಕ ಹಾಗೂ ಕೊಳ್ಳೆಬಾಕರಿಗೆ ಭಾರತವನ್ನೇ ತೆರೆದಿಡಲು ಹೊರಟ ಆಳುವವರಿಗೆ ಈ ಧ್ವನಿ ಕೇಳಿಸಲು ನಾವು-ನೀವು ಮುಂದಾಗೋಣ. ನಮ್ಮದೂ ಕೂಡ ಜವಾಬ್ದಾರಿಯುತ ನಡವಳಿಕೆ ಅಗತ್ಯವಿದೆ. ಆಗಲೇ ನಮ್ಮ ಮುಂದಿನ ಬಾಲರು ನೆಮ್ಮದಿಯ ಭವಿಷ್ಯ ಕಲ್ಪಿಸಿಕೊಳ್ಳಲು ಅರ್ಹತೆ ಬರುವುದು.

ಯುಪಿಎ-2 ದರ್ಬಾರ್

ಟ 13 ರಿಂದ

ದು ಸಾಕಷ್ಟು ಖಾರವಾಗಿಯೇ ಹೇಳಿದೆ.

ಮೂವರು ಮುಖ್ಯಮಂತ್ರಿಗಳು, ಮೂವರು ೇನಾಧಿಕಾರಿಗಳು ಮತ್ತು ಅದೆಷ್ಟೋ ಉನ್ನತ ರಕಾರೀ ಅಧಿಕಾರಿಗಳು ಒಳಗೊಂಡಿರುವ ಈ ಗರಣದಲ್ಲಿ ಭಾಗಿಯಾದವರ ಮೇಲೆ ಮುಂದೆ ತರರಿಗೆ ಉದಾಹರಣೆಯಾಗುವ ರೀತಿಯಲ್ಲಿ ರಿಪಡಿಕೆ ಮತ್ತು ಶಿಕ್ಷಾ ಕ್ರಮಗಳನ್ನು ಗೊಳ್ಳದಿದ್ದರೆ ಸರಕಾರದ ವಿಶ್ವಾಸಾರ್ಹತೆಯೇ ಂದಿ ಹೋಗುತ್ತದೆ.. ಸಾರ್ವಜನಿಕ ವಿಶ್ವಾಸಕ್ಕೆ ಂಚನೆಯಾಗದಂತೆ ಸಂಸತ್ತು ಮತ್ತು ಸರಕಾರ ೋಡಿಕೊಳ್ಳಬೇಕಾಗಿದೆ" ಎಂದು ಸಿಎಜಿ ಳಿದೆ.

★

ರೈಲು ನಿರ್ವಹಣೆಹದಗಡುತ್ತಾ ಸಾಗಿದೆ

ಇದು ಸಿಎಜಿ ಕೊಟ್ಟಿರುವ ಇನ್ನೊಂದು ವರದಿಯ ಸಾರಾಂಶ. ಯುಪಿಎ-1 ಸರಕಾರದ ರೈಲು ಮಂತ್ರಿ ಲಾಲು ಪ್ರಸಾದ್‌ರವರ ಅವಧಿಯ ಕೊನೆಯ ಭಾಗದಲ್ಲಿ ಇಳಿಮುಖವಾದ ಭಾರತೀಯ ರೈಲ್ವೆಯ ನಿರ್ವಹಣೆಯ ಗುಣಮಟ್ಟ ಯುಪಿಎ-2 ಸರಕಾರದ ರೈಲು ಮಂತ್ರಿ ಮಮತಾ ಬ್ಯಾನರ್ಜಿ ಕಾಲದಲ್ಲಿ ಇನ್ನಷ್ಟು ಹದಗೆಟ್ಟಿದೆ. ಲಾಲು ಪ್ರಸಾದ್ ಕಾಲದಲ್ಲಿ ರೈಲ್ವೆ ಇಲಾಖೆ ಲಾಭದಲ್ಲಿ ನಡೆಯಲಾರಂಭಿಸಿದೆ ಎಂಬುದೆಲ್ಲ ಕಟ್ಟುಕಥೆ ಎಂದು ಮಮತಾ ಬ್ಯಾನರ್ಜಿಯವರ 'ಶ್ವೇತಪತ್ರ'ವೇನೋ ಸರಿಯಾಗಿಯೇ ಹೇಳಿತ್ತು, ಆದರೆ ಅವರ ಕಾಲದಲ್ಲಿ ರೈಲ್ವೇಯ ನಿರ್ವಹಣೆ ಇಳಿಮುಖವಾದದ್ದು ಕೂಡ ಅಷ್ಟೇ ನಿಜ ಎಂದು ಈ ಸಿಎಜಿ ವರದಿ ದೃಢಪಡಿಸಿದೆ.

ನಿವ್ವಳ ರೆವಿನ್ಯೂ ಆದಾಯ 2007-08ರಲ್ಲಿ ರೂ.13,431 ಕೋಟಿ ಇದ್ದದ್ದು, 2008-09ರಲ್ಲಿ ರೂ.4457 ಕೋಟಿಗೆ, 2009-10ರಲ್ಲಿ ಕೇವಲ ರೂ.75 ಲಕ್ಷಕ್ಕೆ ಇಳಿಯಿತು ಎಂದು ಸಿಎಜಿ ವರದಿ ಹೇಳಿದೆ. 2008-10ರಲ್ಲಿ ಆರನೇ ವೇತನ ಆಯೋಗದ ಜಾರಿ ಇದಕ್ಕೆ ಒಂದು ಕಾರಣವಾಗಿದ್ದರೂ, ಸಾರಿಗೆ ಆದಾಯ ಇಳಿಮುಖಗೊಂಡಿರುವುದೂ ಇದಕ್ಕೆ ಕಾರಣ ಎಂದು ವರದಿ ಹೇಳುತ್ತದೆ. 2009-10ರಲ್ಲಿ ಸಾರಿಗೆ ಆದಾಯದದಲ್ಲಿ ಕೇವಲ 9% ಹೆಚ್ಚಳವಾದರೆ, ಸಾಮಾನ್ಯ ನಿರ್ವಹಣಾ ವೆಚ್ಚದಲ್ಲಿ 21% ಹೆಚ್ಚಳವಾಯಿತು. ರೈಲ್ವೆಯ ದಕ್ಷತೆಯನ್ನು ಸೂಚಿಸುವ ನಿರ್ವಹಣಾ ಅನುಪಾತ (ನಿರ್ವಹಣಾ ವೆಚ್ಚಗಳು ಮತ್ತು ಟ್ರಾಫಿಕ್ ಆದಾಯಗಳ ಅನುಪಾತ) 2008-09ರಲ್ಲಿ 90.46% ಇದ್ದದ್ದು 2009-10ರಲ್ಲಿ 95.28% ವಾಯಿತು. 16 ರೈಲ್ವೆ ವಲಯಗಳಲ್ಲಿ 9ರಲ್ಲಿ ಇದು 100% ದಾಟಿದೆ. ಅಂದರೆ ಆದಾಯಗಳಿಗಿಂತ ಖರ್ಚುಗಳೇ ಹೆಚ್ಚು!

50 ಹೊಸ ಲೈನುಗಳ ಕಾಮಗಾರಿಯ ಪರಿಶೋಧನೆಯಿಂದ ಸಿಎಜಿಗೆ ಕಂಡುಬಂದ ಸಂಗತಿಗಳು ಹೀಗಿವೆ: ಇವುಗಳಲ್ಲಿ 5 ಲೈನುಗಳು 20 ವರ್ಷಗಳಿಗಿಂತಲೂ ಹಿಂದೆ ಮಂಜೂರಾದವುಗಳು, 9 ಲೈನುಗಳು 15ರಿಂದ 20 ವರ್ಷಗಳ ಹಿಂದಿನವು, ಹಾಗೂ 36 ಲೈನುಗಳು 10ರಿಂದ15 ವರ್ಷಗಳ ಹಿಂದೆ ಮಂಜೂರಾದವುಗಳು. ಇವೆಲ್ಲ ಹಿಂದುಳಿದ ಪ್ರದೇಶಗಳ- ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆಂದು ಮಂಜೂರಾತಿ ಪಡೆದ ಲೈನುಗಳು! ◎

ರೇಷಿಮೆ ಉದ್ದಿಮೆ....

ಟ 11 ರಿಂದ

ೂಪರ್ ಲಾಭಕ್ಕೆ ಖಾತ್ರಿ ನೀಡುವುದೇ ಈ ೀತಿಯ ಮೂಲಮಂತ್ರವಾಗಿದೆ. ಅದರಲ್ಲಿ ಈ ಾಗತೀಕರಣ ಉದಾರೀಕರಣದ ಯುಗದಲ್ಲಂತೂ ಇದು ನಿರ್ಲಜ್ಜ, ನಾಚಿಕೆಗೇಡಿ, ಗ್ನ ರೂಪದಲ್ಲಿ ವ್ಯಕ್ತವಾಗುತ್ತಿದೆ.

ವಿದೇಶಿ ರೇಷ್ಮೆ ಆಮದಾದರೇ ಮಾತ್ರ ೇಕಾರರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ುಣಮಟ್ಟದ ಕಚ್ಚಾ ರೇಷ್ಮೆ ಸಿಗುತ್ತದೆ. ಇಲ್ಲವಾದರೆ ೇಕಾರ ಕಷ್ಟಕ್ಕೆ ಸಿಕ್ಕಿ ಬೀಳುತ್ತಾನೆ ಎಂದು ೇಕಾರನ ಪರವಾಗಿ ಹುಯಿಲೆಬ್ಬಿಸುತ್ತಾ ಿರ್ಬಂಧವೇ ಇಲ್ಲದ ಕಚ್ಚಾ ರೇಷ್ಮೆ ಆಮದಿನ ಪರವಾಗಿ ವಕೀಲಿ ನಡೆಸುತ್ತಿರುವರು ವಾಸ್ತವವಾಗಿ ಾರಿ ದೊಡ್ಡ ವ್ಯಾಪಾರಿ ಕುಳಗಳು. ದೇಶದ ಹಿತಾಸಕ್ತಿ ಏನಾದರಾಗಲಿ, ರೈತರು ಬೆಳೆದ ದೇಶಿಯ ರೇಷಿಮೆಯ ಬೆಲೆ ಕುಸಿದು ರೈತ ಏನಾದರೂ ಆಗಲಿ ತಮಗೆ ನಿರಂತರ ಲಾಭದ ಹರಿವನ್ನು ಹರಿಸಲು ನೇಕಾರರು, ಕಾರ್ಮಿಕರು ಅಪಾರ ಶ್ರಮ ವಹಿಸಿ ನೇಯ್ದುಕೊಟ್ಟ ಉಡುಪನ್ನು ವಿದೇಶಕ್ಕೆ ಮಾರಿ ಲಾಭದ ಗೋರಿಕೊಳ್ಳಲು ವಿದೇಶಿ ಕಚ್ಚಾ ರೇಷಿಮೆ ಬೇಕೇ ಬೇಕು. ಇದು ಈ ವಿಚಾರದ ಆಂತರ್ಯದ ನಿಜವಾದ ಸಂಗತಿ.

ನೇಕಾರರು, ನೇಕಾರರ ಹೊಟ್ಟೆಪಾಡಿನ ಬಗೆಗೆ ಬಹಳ ಮಾತುಗಳು ಕೇಳಿ ಬರುವ ಈ ರೇಷಿಮೆ ಉದ್ದಿಮೆಯಲ್ಲಿ ನಿಜಕ್ಕೂ ಏನು ನಡೆದಿದೆ ನೋಡಿ: ಒಂದು ಸರಳ ಲೆಕ್ಕಾಚಾರ

ನೇಕಾರನೊಬ್ಬ ತನ್ನೆಲ್ಲಾ ಶ್ರಮ, ಜಾಣ್ಮೆ ತೊಡಗಿಸಿ ಸೀರೆಯೊಂದನ್ನು ನೇಯ್ದು ಮಾರಾಟಗಾರನಿಗೆ ತಂದುಕೊಟ್ಟನೆನ್ನಿ, ರೇಷ್ಮೆ ಮೌಲ್ಯ, ವಿವಿಧ ಬಗೆಯ ಸಂಸ್ಕರಣೆಯ ವೆಚ್ಚ, ನೇಕಾರನ ಕೂಲಿ ಎಲ್ಲಾ ಸೇರಿ ಸೀರೆಯೊಂದರ ಬೆಲೆ 4 ಸಾವಿರ ರೂಪಾಯಿ ಎಂದುಕೊಳ್ಳೋಣ, ಆಗ ಮಾರಾಟಗಾರರು ಆ ಸೀರೆಯನ್ನು ಎಷ್ಟಕ್ಕೆ ಮಾರಬಹುದು? ಏನಿಲ್ಲವೆಂದರೂ ಕನಿಷ್ಟ 10,000-12,000 ರೂಪಾಯಿಗಳಿಗೆ ಆ ಸೀರೆ



ಕೇಂದ್ರ ಸಚಿವ ಮೊಯ್ಲಿಗೆ ಘೆರಾವ್ - ಶಿಡ್ಲಘಟ್ಟ

ಬಿಕರಿಯಾಗುತ್ತದೆ. ಎಂಥಾ ಅಗಾಧ ಲಾಭವಿದೆ ನೋಡಿ. ಸುಮ್ಮನೆ ಅಂಗಡಿಯಲ್ಲಿ ಕುಳಿತು ಕೈ ಬದಲಾಯಿಸುವ ಮಾರಾಟಗಾರನಿಗೆ.

ಇಲ್ಲಿ ನೇಕಾರ ಬಡವ. ಅವತ್ತವತ್ತಿನ ದುಡಿಮೆಯಲ್ಲಿ ಬದುಕು ದೂಡುವವನು. ಅವನ ಕೈಲಿ ಹೆಚ್ಚು ಕಾಸಿಲ್ಲ. ಮಾರಾಟಗಾರನಿಂದ ನೇಕಾರ ಸಾಮಾನ್ಯವಾಗಿ "ದುಡ್ಡು ಕೊಟ್ಟೇನು ರೇಷ್ಮೆ ತರುವುದಿಲ್ಲ. ರೇಷ್ಮೆ ನೂಲು ತಂದು ಸೀರೆ ನೇಯ್ದು ಮಾರಾಟಗಾರನಿಗೇ ಕೊಡುತ್ತಾನೆ. ತನ್ನ ಶ್ರಮಕ್ಕೆ ಒಂದಷ್ಟು ಕೂಲಿ ಪಡೆಯುತ್ತಾನೆ. ಆದರೆ ಆತನಿಗೆ ಸಿಗುವ ಕೂಲಿಯು ತಾನು ತಾಳ್ಮೆ ಸಹನೆಯಿಂದ ತನ್ನ ಕೌಶಲ್ಯವನ್ನು ತೊಡಗಿಸಿ, ಶ್ರಮವಹಿಸಿ ರೇಷ್ಮೆ ಸೀರೆಗೆ ಎಷ್ಟು ಮೌಲ್ಯವನ್ನು ತುಂಬಿದ್ದಾನೋ ಮೌಲ್ಯವನ್ನು ಸೃಷ್ಟಿಸಿದ್ದಾನೋ ಅದಕ್ಕಿಂತ ಭಾರಿ ಕಡಿಮೆ ಎಂಬುದು ಮಾತ್ರ ನಿಜ. ಈ ಸ್ವರೂಪದ ಚಟುವಟಿಕೆ ಹೆಚ್ಚು ಹೆಚ್ಚು ನಡೆದಷ್ಟು ಸಿರಿವಂತರಿಗೆ ಲಾಭ. ಅದಕ್ಕೆ ಅಗ್ಗದ ವಿದೇಶಿ ರೇಷಿಮೆ ದೇಶದ ಒಳಕ್ಕೆ ನುಗ್ಗಿ ಬರಬೇಕು. ◎

ಕಡಲತಡಿ....

ಕಾರ್ಯದರ್ಶಿ ವೆಂಕಟೇಶ್ ಕೋಣಿ, ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್, ತಾಲೂಕು ಅಧ್ಯಕ್ಷ ಎಚ್.ನರಸಿಂಹ, ತಾಲೂಕು ಪಂಚಾಯತ್ ಸದಸ್ಯೆ ಶಶಿಕಲಾ ಕರ್ಕುಂಜೆ, ಯು.ದಾಸ್. ಭಂಡಾರಿ ಉಪಸ್ಥಿತರಿದ್ದರು.

ಸಮಾವೇಶದಲ್ಲಿ 60 ಮಂದಿ ಸದಸ್ಯರುಳ್ಳ ಸಂಘದ ತಾಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು.

★

ಮಂಗಳೂರು ಪಾಲಿಕೆ ಸಭೆಯ ಹೊರಗೆ ಬೀದಿ ಬದಿ ವರ್ತಕರ ಪ್ರದರ್ಶನ

ಸತತ ಮೂರನೇ ಬಾರಿಗೆ ಮಹಾ ನಗರ ಪಾಲಿಕೆಯ ಮಾಸಿಕ ಸಭೆ ನಡೆಯುತ್ತಿರುವಾಗ ಬೀದಿ ಬದಿ ವರ್ತಕರ ಪ್ರಶ್ನೆ ಚರ್ಚೆಗೆ ಬರುತ್ತಿದೆ. ಜೂನ್ ತಿಂಗಳ ಕೊನೆಯ ಸಭೆಯಲ್ಲಿ ಮುಂದಿನ 15 ದಿನಗಳೊಳಗಾಗಿ ಪರ್ಯಾಯ ವ್ಯವಸ್ಥೆ ಜಿಲ್ಲಾ ಉಸ್ತುವಾರಿ ಮಂತ್ರಿಗಳೊಡನೆ ಚರ್ಚಿಸಿ ನಡೆಸುವುದಾಗಿ ಬಿಜೆಪಿ ನೇತೃತ್ವದ ಪಾಲಿಕೆ ಆಡಳಿತ ಭರವಸೆ ಕೊಟ್ಟಿತ್ತು. ಅದು ಕಳೆದು 1 ತಿಂಗಳಾದರೂ ಒಂದು ಹಾಂ ಇಲ್ಲ; ಹೂಂ ಇಲ್ಲ. ಜುಲೈ 29ಕ್ಕೆ ಮತ್ತೆ ಕೌನ್ಸಿಲ್ ಸಭೆ ಸೇರಿದಾಗ ಇದೀಗ 3ನೇ ಬಾರಿಗೆ ಸಭಾಭವನದ ಹೊರಗಡೆ ಬೀದಿ ಬದಿ ವರ್ತಕರು.ಪ್ರತಿಭಟನೆ ನಡೆಸಿದ್ದಾರೆ.

ಕಳೆದ 3 ತಿಂಗಳಿಂದ ಬೀದಿ ಬದಿ ವರ್ತಕರು ಸತತ ಹೋರಾಟ ನಡೆಸುತ್ತಿದ್ದಾರೆ. ಅವರಲ್ಲಿ 85% ಅಲ್ಪಸಂಖ್ಯಾತ ಮುಸ್ಲಿಮರು, ಮುಂದಿನ 1 ತಿಂಗಳು ಅವರು ರಮ್ಜಾನ್ ಉಪವಾಸ ನಡೆಸುವವರು. ಈ ದಿನಗಳಲ್ಲಿ ಟೈಗರ್ ಕಾರ್ಯಾಚರಣೆ ನಡೆಸಿ ಅವರ ಬೀದಿ ವ್ಯಾಪಾರಕ್ಕೆ ಪಾಲಿಕೆ ಆಡಳಿತ ಅಡ್ಡಿಯೊಡ್ಡುತ್ತಾ ಹೋದರೆ, ಅವರು ಹಗಲೂ ರಾತ್ರಿ ಉಪವಾಸ ಬೀಳಬೇಕಾದೀತು. ಹಾಗಾಗಿ ಈ ಕೂಡಲೇ ಟೈಗರ್ ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಹಾಗೂ ಒಪ್ಪಿರುವ ಪರ್ಯಾಯ ವ್ಯವಸ್ಥೆಯನ್ನು ಘೋಷಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ದ.ಕ.ಜಿಲ್ಲಾಧಿಕಾರಿ ಕಚೇರಿಯಿಂದ ಮಂಗಳೂರು ಪಾಲಿಕೆವರೆಗೆ ನೂರಕ್ಕೂ ಮಿಕ್ಕಿದ ಪ್ರತಿಭಟನಾಕಾರರು ಮೆರವಣಿಗೆ ನಡೆಸಿದರು. ಪ್ರತಿಭಟನಾ ಕಾರರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಹೋರಾಟ ಸಮಿತಿಯ ಸಂಚಾಲಕ ಸುನಿಲ್‌ಕುಮಾರ್ ಬಜಾಲ್, ಸಾಮಾಜಿಕ ಕಾರ್ಯಕರ್ತೆ ಪ್ಲೋರೀಟಾ ನೊರೊನ್ಹಾ, ಜೆಡಿಎಸ್ ಮುಖಂಡ ಶಶಿರಾಜ್ ಶೆಟ್ಟಿ, ಡಿವೈಎಫ್ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಪರೇಟರ್‌ಗಳಾದ ಸಿಪಿಎಂನ ಜಯಂತಿ ಶೆಟ್ಟಿ, ಜೆಡಿಎಸ್‌ನ ಅಜೀಜ್ ಕುದ್ರೋಳಿ ಮಾತನಾಡಿದರು. ಬೀದಿ ಬದಿ ವರ್ತಕರ ಸಂಘದ ಸಮಿತಿ ಸದಸ್ಯರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ◎

ಬಾಲ ಕಾರ್ಮಿಕ ಪದ್ಧತಿಯ ಸುತ್ತ-ಮುತ್ತ ಒಂದು ಸುತ್ತು

ನಾನೊಂದು ಮಗು
ನನ್ನ ಬರುವಿಕೆಗಾಗಿ ಇಡೀ ಜಗತ್ತು
ಕಾಯುತ್ತಿದೆ
ಸಮಸ್ತ ಜಗತ್ತು ನಾನು
ಏನಾಗುತ್ತೇನೆಂಬುದನ್ನು
'ಹೊಸದಿಸೆ' ಕುತೂಹಲದಿಂದ
ಗಮನಿಸುತ್ತಿದೆ.
ಏಕೆಂದರೆ ನಾನು ಏನಾಗುತ್ತೇನೋ
ನಾಳಿನ ಜಗತ್ತು ಅದೇ ಆಗುತ್ತದೆ.
ನಾನೊಂದು ಮಗು
ನನ್ನ ಬದುಕು-ಭವಿಷ್ಯ ನಿಮ್ಮ ಕೈಲಿದೆ
ನಾನು ಗೆಲ್ಲುವೆನೆ ಅಥವಾ ಸೋಲುವೆನೆ
ಎಂಬುದನ್ನು
ನಿರ್ಧರಿಸುವವರು ನೀವೇ
ನನ್ನ ಬೆಳವಣಿಗೆಗೆ ಬೇಕಾದ
ಅವಕಾಶಗಳನ್ನು ನೀಡುವಂತೆ
ನಿಮ್ಮನ್ನು ಪ್ರಾರ್ಥಿಸುತ್ತೇನೆ.
ಮುಂದೆ ಈ ಪ್ರಪಂಚಕ್ಕೆ ನಾನೊಂದು
ವರವಾಗುವಂತೆ
ನನ್ನನ್ನು ಸಜ್ಜುಗೊಳಿಸಲು ನಿಮ್ಮನ್ನು
ಬೇಡುತ್ತೇನೆ. -ಮ್ಯಾಮಿಜಿನ್ ಕೋಲ್

ಯಮುನಾ ಗಾಂವ್ಕರ್, ಕಾರವಾರ

ಬಾಲ ಕಾರ್ಮಿಕ ಪದ್ಧತಿ ಅಳಿಯಲಿ ಮಾನವೀಯತೆ ಬೆಳೆಯಲಿ

ಇದೊಂದು ಜಾಗತಿಕ ಘೋಷಣೆ. ಆದರೆ ವಿಶ್ವ ಸಂಸ್ಥೆಯಾಗಲಿ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಓ)ಯಾಗಲಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಬೇಕಾದಷ್ಟು ಕಾರ್ಯಕ್ರಮ ಹಾಕಿಕೊಂಡಿದ್ದರೂ ಯಾಕೆ ಕಾರ್ಯಗತವಾಗುತ್ತಿಲ್ಲ ಎಂಬುದು ಈ ಮಗುವಿನ ಪ್ರಶ್ನೆ.

ಕಾನೂನುಗಳೆಷ್ಟಿವೆ?

ಇಂಟರ್ ನ್ಯಾಶನಲ್ ಲೇಬರ್ ಆರ್ಗನೈಜೇಶನ್ (ಐಎಲ್‌ಓ) ಇಂಟರ್ ನ್ಯಾಶನಲ್ ಪ್ರೋಗ್ರಾಂ ಒನ್ ದಿ ಎಲಿಮಿನೇಶನ್ ಆಫ್ ಚೈಲ್ಡ ಲೇಬರ್ (ಐಪಿಇಸಿ) ಕರ್ನಾಟಕ ಚೈಲ್ಡ ಲೇಬರ್ ಪ್ರೊಜೆಕ್ಟ ಸಪೋರ್ಟೆಡ್ ಆ್ಯಂಡ್ ಫಂಡೆಡ್ ಬೈ ಇಟಾಲಿ ಹೀಗೆ ಇನ್ನೂ ಅನೇಕ ರೀತಿಯ ದೇಶ-ವಿದೇಶೀಯ ಸರ್ಕಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಇವೆ. 1989ರಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಮಾವೇಶದಲ್ಲಿ ಅಂಗೀಕರಿಸಿದ ಘೋಷಣೆಗೆ ಭಾರತ ಸಹಿ ಮಾಡಿದೆ. ದೇಶದ ಸಂವಿಧಾನ, ಮಕ್ಕಳ ಪಾಲನೆ ಮತ್ತು ರಕ್ಷಣೆ ಕುರಿತು 2000ರಲ್ಲಿ ಬಂದ ಹದಿಹರೆಯದ ನ್ಯಾಯ ಕಾನೂನು, 1986 ರ ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾನೂನು, ಶಿಕ್ಷಣ ಹಕ್ಕು ಕಾಯ್ದೆ, ಭಾತರದ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನಗಳು ಎಲ್ಲವೂ ಇವೆ.

ಆದರೆ, ಬಾಲ ಕಾರ್ಮಿಕತೆ ಯಾಕೆ ನಿರ್ಮೂಲನೆ ಆಗಲಿಲ್ಲ? ಆಗುತ್ತಿಲ್ಲ? ಎಂದರೆ, ಈ ವ್ಯವಸ್ಥೆಯ ನಿಯಂತ್ರಕರ ಲಾಭದ ಹಪಾಹಪಿತನ, ಕ್ರಿಯಾಶೀಲತೆಯ ದುಡಿಯುವ ಎಳೆಯ ಕೈಗಳ ಚಾಕಚಕ್ಯತೆ, ಕಾನೂನು ಮುರಿದು ಕೇವಲ ಅತಿ ಲಾಭದಾಸೆಯ ಕಾರಣದಿಂದಾಗಿಯೇ ಎಂಬುದು ಶತಃಸಿದ್ಧ. ಬಡತನ ಮತ್ತು ಹಸಿವಿನ ಸಾಗರದ ಮಧ್ಯೆ ಸುಂದರ ದ್ವೀಪ ಈ ಶ್ರೀಮಂತಿಕೆ.



ತಂದೆ-ತಾಯಿಯವರ ಅಗತ್ಯ, ಕುಟುಂಬದ ಅಗತ್ಯ, ಬಡತನ ಹಸಿವು, ಅನಕ್ಷರತೆ ಇವೆಲ್ಲವೂ ನೆಪ ಮಾತ್ರ ಎಂಬುದು ವೈಜ್ಞಾನಿಕವಾಗಿ ತ್ರಿಕಾಲ ಸತ್ಯ. ಬಡ ಕೂಲಿ ಕಾರ್ಮಿಕ ಅಥವಾ ರೈತನ ಮೂಲಭೂತ ಸಮಸ್ಯೆ ಬಗೆ ಹರಿಸಿದರೆ, ಕೊಳ್ಳುವ ಶಕ್ತಿ ವೃದ್ಧಿಯಾಗಲು ಕೆಲಸಕ್ಕೆ ತಕ್ಕ ಕೂಲಿ, ಕನಿಷ್ಟ ಕೂಲಿನೀಡಿದರೆ, ನಿಜವಾಗಿಯೂ ಕಾರ್ಮಿಕ ಪರ ಕಾನೂನು ಜಾರಿ ಮಾಡಿದರೆ ಬಾಲ ಕಾರ್ಮಿಕತೆ ಇರುತ್ತಿತ್ತೇ? ಖಂಡಿತ ಮಾಲಿಕನ ತಪ್ಪನ್ನು ಮುಚ್ಚಿಟ್ಟು, ಆತನ ಸಂಪತ್ತನ್ನು ವೃದ್ಧಿಮಾಡಿಕೊಡುವ ಕಾನೂನನ್ನೇ ಸೃಜಿಸುವ ಈ ಆಳುವವರ ಮುಂದೆ ಬೆನ್ನುಬಾಗಿದ ದುಡಿಯುವವರನ್ನು ಆಸ್ಥೆಯಿಂದ ನೋಡುವವರು ಯಾರೂ ಇಲ್ಲ. ಹಸಿದ ಹೊಟ್ಟೆಗೆ ತುತ್ತು ಕೂಳಿಗೂ ಪರದಾಡುವವ ತನ್ನೆದುರು ಹಸಿವಿನಿಂದ ಒದ್ದಾಡುವ ಒಡಲ ಕುಡಿಯನ್ನು ಹೇಗೆ ಸಹಿಸುತ್ತಾನೆ/ಳೆ? ಇದು ಆತನ/ಳ ಪಾಲಿನ ಭಾರತದ ಒಡಲಾಳ. ಈ ಒಡಲಾಳ ಬಗೆದಾಗ ಹಸಿದವರೆಷ್ಟು? ತಿಂದವರೆಷ್ಟು? ತೇಗಿದವರೆಷ್ಟು?

ಶಾಲಾ ಪೂರ್ವ ಶಿಕ್ಷಣ ಮತ್ತು ಆಹಾರ ಭದ್ರತೆ ಮಕ್ಕಳ ಹಕ್ಕಾಗಲಿ

ಭಾತರದಲ್ಲಿ 28 ಲಕ್ಷ ಹಸುಗೂಸುಗಳು ಪ್ರತಿ ವರ್ಷ ಸಾಯುತ್ತಿದಾರೆ. 3 ಕೋಟಿ ಮಕ್ಕಳು ಶಾಲೆಗೆ ಹೋಗುತ್ತಿಲ್ಲ ಇಂದಿಗೂ. 2004-05ರಲ್ಲಿ 2% ಶಿಕ್ಷಣ ಮೇಲ್ತೆರಿಗೆಯಿಂದ 700 ಕೋಟಿ ರೂಪಾಯಿ ಗಳಿಕೆ ಆದರೂ, ಪ್ರಾಥಮಿಕ ಶಿಕ್ಷಣವೇ ದುಸ್ತರವಾಗಿ, ಶೇ 19 ರಷ್ಟು ಮಕ್ಕಳು ಶಾಲೆಗೇ ಹೋಗುವುದಿಲ್ಲ. 1.5 ದಶಲಕ್ಷ ಮಕ್ಕಳು ಒಂದು ವರ್ಷದೊಳಗೆ ಜೀವನಯಾತ್ರೆ ಮುಗಿಸುತ್ತಿರುವುದು ದುಃಖದ ಸಂಗತಿ.

ಇನ್ನೊಂದೆಡೆ ಅಪಾರ ಸಂಪತ್ತಿನ ರಾಶಿ. ಭಾರತದ ಬಜೆಟ್ಟಿನ ದುಪ್ಪಟ್ಟು, ಅಂದರೆ 13,60,000 ಕೋಟಿ ರೂಪಾಯಿ ಒಡೆಯರು ಈ ದೇಶದ ಕೇವಲ 54 ಜನ ಶ್ರೀಮಂತರು! ದೆಹಲಿಯೊಂದರಲ್ಲೇ ಶ್ರೀಮಂತರ ಮಕ್ಕಳು ವಿದೇಶಿ ತಂಪು ಪಾನೀಯ ಕುಡಿಯಲು 350 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಮಾನ್ಯ ಸುಪ್ರೀಂ ಕೋರ್ಟಿನ ನಿರ್ದೇಶನ ಇದ್ದರೂ ಬೃಹತ್ ಪ್ರಮಾಣದಲ್ಲಿ



ಆಹಾರ ಧಾನ್ಯ ಕೊಳೆಯುತ್ತಿದೆ. ನಿತ್ಯ ಹಸನ್ಮುಖಿಗಳ ಮಧ್ಯೆ ಬಡ ಬಾಲರದ್ದು ಮಾತ್ರ ದೈನೇಶಿ ಬದುಕು. ಬಡವರ ಒಡಲಿನ ಬಡಬಾನಲ ಕುದಿಯುತ್ತಿದೆ. ಈ ಜನಕ್ಕೆ ಆಹಾರ ಸಿಗುತ್ತಿಲ್ಲ. ಹಾಗಾಗಿ 1000 ಮಕ್ಕಳಲ್ಲಿ 95 ಮಕ್ಕಳು 5 ವರ್ಷದೊಳಗೆ ಸಾಯುತ್ತಿದ್ದಾರೆ. ಆದಾಗ್ಯೂ, ಕೇಂದ್ರ ಸರ್ಕಾರವು 2002-03 ರಲ್ಲಿ ಗೋದಾಮಿನಲ್ಲಿ ಹಾಳಾಗುವ ಆಹಾರ ಧಾನ್ಯಗಳಲ್ಲಿ 12.4 ಮಿಲಿಯ ಟನ್, ನಂತರದ ದಿನಗಳಲ್ಲಿ 17 ಮಿಲಿಯನ್ ಟನ್ ರಫ್ತು ಮಾಡಿ ಅಮೇರಿಕಾದ ಹಂದಿಗಳಿಗೆ ತಿನ್ನಲು ಕಳಿಸಿತು! ನಮ್ಮ ದೇಶವಾಸಿಗಳು ಹಸಿವಿನ ದವಡೆಗೆ ಸಿಲುಕಿದಾಗ ವಿಪರೀತ ಬೆಲೆ ಏರಿಕೆ ಮಾಡಿ ಹಸಿವನ್ನು ಮತ್ತಷ್ಟು ಕಂಗೆಡಿಸಿತು. ಪ್ರತಿಯಾಗಿ, ಭಾರತದ ಬಡವರು ಊಟ ಮಾಡುವುದು ಜಾಸ್ತಿ, ಹಾಗಾಗಿ ಆಹಾರ-ಪದಾರ್ಥಗಳ ಬೆಲೆ ಏರಿಕೆಯಾಗಿದೆ ಎಂಬ ಅಸತ್ಯದ ಹೇಳಿಕೆ ನೀಡಿ ಒಡಲ ಹಸಿವನ್ನು ಹಂಗಿಸಿತು ಈ ಕೇಂದ್ರ ಸರ್ಕಾರ.

ಆದರೆ 1997 ರಲ್ಲಿ ಆಹಾರ ಧಾನ್ಯಗಳ ತಲಾ ಲಭ್ಯತೆ 184.5 ಕೆಜಿ ಇದ್ದುದು 2001ರಲ್ಲಿ 152.1ಕೆಜಿ ಗೆ ಇಳಿಯಿತು. ಅಂದರೆ ಈ ಆಹಾರ ಧಾನ್ಯ ಇಳಿಕೆಯು 1943 ರಲ್ಲಿ ಪಶ್ಚಿಮ ಬಂಗಾಲದಲ್ಲುಂಟಾದ ಬರ್ಬರ ಕ್ಷಾಮದ ಸಂದರ್ಭದ ಆಹಾರ ಬಳಕೆ ಮಟ್ಟಕ್ಕೆ ಸಮನಾದುದಾಯಿತು. ಹಾಗಾಗಿ ಗ್ರಾಮೀಣ ಪ್ರದೇಶದ ಶೇಕಡಾ 47 ರಷ್ಟು ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುತ್ತಿಲ್ಲ. ಶೇ. 70 ರಷ್ಟು ಗ್ರಾಮೀಣ ಮಹಿಳೆಯರಿಗೆ ಅಂದರೆ ಮುಖ್ಯವಾಗಿ ಗರ್ಭಧರಿಸುವ ಮಹಿಳೆಯರಿಗೆ ಪೌಷ್ಟಿಕ ಆಹಾರದ ಕೊರತೆ ಇದೆ. ಅಂದರೆ ಆಹಾರ ಭದ್ರತಾ ಕಾನೂನಿನಲ್ಲಿ ವಾಸ್ತವಾಂಶದ ಸೇರ್ಪಡೆ ಅಗತ್ಯವಿದೆ ಅಂತಾಗಲಿಲ್ಲವೇ? ಬಡವರು-ಕಡು ಬಡವರು-ಬಿಪಿಎಲ್ ಬಡವರು, ಅಂತ್ಯೋದಯ ಬಡವರು ಇತ್ಯಾದಿಯಾಗಿ ವರ್ಗೀಕರಿಸಿ ಬಡವರಲ್ಲೆ ಜಗಳ ಹಚ್ಚಿ ಹಾಕಿಕೊಡುವ ಈ ನೀತಿ ಬಾಲ ಕಾರ್ಮಿಕತೆ ಹೆಚ್ಚಿಸುತ್ತದೆ.

ಇಂಥ ಪರಿಸ್ಥಿತಿಯಲ್ಲಿ ಮಕ್ಕಳ ಹಕ್ಕು ರಕ್ಷಿಸುವಲ್ಲಿ ಪಾಲಕರು ಹಿಂದೆ ಬೀಳುತ್ತಾರೆ. ಹುಟ್ಟಿದ ಪ್ರತಿ ಮಗುವೂ ಈ ಸಮಾಜದ ಆಸ್ತಿ ಎಂದು ಹೇಳಿದರೂ, ಆ ಮಗುವಿನ ಎಲ್ಲಾ ಆಗುಹೋಗುಗಳ ಜವಾಬ್ದಾರಿ ಸರ್ಕಾರದ ಮೇಲಿದ್ದರೂ ಕೂಡ ಲಕ್ಷ್ಯ ಹಾಕುವವರಿಲ್ಲದ್ದರಿಂದ ಬಾಲ ಕಾರ್ಮಿಕತೆ ಇದೆ. **ಆಹಾರ- ಆರೋಗ್ಯ-ಶಿಕ್ಷಣ ಮ್ಕಕಳ ಹಕ್ಕು ಎಂದು ಸಾರುವ, ಮುಂದಿನ ಶಿಕ್ಷಣಕ್ಕೆ ತಳಪಾಯವಾದ ಶಾಲಾ ಪೂರ್ವ ಶಿಕ್ಷಣವನ್ನು ಶಿಕ್ಷಣ ಹಕ್ಕಿನಲ್ಲಿ ಸೇರಿಸುವ ಜವಾಬ್ದಾರಿಯುತ ಕರ್ತವ್ಯ ಮರೆತ ಸರ್ಕಾರ ಮೇಲ್ನೋಟದ ಕಾರ್ಯಕ್ರಮ ಹಾಕಿಕೊಂಡು ನಿಜವಾದ ಶಿಕ್ಷಣದ ಹಕ್ಕಿನಿಂದ ಬಡವರ ಮಕ್ಕಳನ್ನು ವಂಚಿಸಿತು.** ಶಿಕ್ಷಣದ ಖಾಸಗಿಕರಣಕ್ಕೆ ಮುಂದಾಗಿ ಕಡುಬಡವರ ಮಕ್ಕಳಿಗೆ ಕೈಗೆಟುಕದಂತೆ ಮಾಡಿತು. ಕಾಟಾಚಾರಕ್ಕೆ ಬಾಲ ನ್ಯಾಯ ಮಂಡಳಿ, ಮಕ್ಕಳ ಹಕ್ಕು ಸಮಿತಿ ರಚಿಸಿ ಅದರಲ್ಲಿ ಹಲವಾರು ಕಡೆಗಳಲ್ಲಿ ಸರ್ಕಾರದ ಬಾಲಂಗೋಚಿಗಳಿಗೆ ಮಣೆ ಹಾಕಿತು. ಈಗ ಹೇಳಿ ಬಾಲ ಕಾರ್ಮಿಕತೆ

ಪುಟ 14ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH